ಸಂಪುಟ 23 ಸಂಚಿಕೆ 30-31
ಆಗಸ್ಟ್ 5, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಯುರಂಗ





ಭಾರತ-ಪಾಕ್ ಮುಂದುವರಿಯಲಿ ಮಾತುಕತೆ

ನಾಡಿನ ತುಂಬಾ ಬರದ ಬರೆ



ಫೂಲನ್ ಕೊಲೆ

ನಿಲ್ಲಿಸಿ ಹೆಣ್ಣು ಭ್ರೂಣ ಹತ್ಯೆ

ಇಂದಿರಾ ಹತ್ಯೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 73

ಹಿಂದಿನ ಸಂಚಿಕೆಯಲ್ಲಿ ಆಪರೇಷನ್‌ಬ್ಲೂಸ್ಟಾರ್, ಎರಡು ರಾಜ್ಯ ಸರ್ಕಾರಗಳ ವಜಾ, ಎನ್‌ಡಿಸಿ ಸಭೆಗೆ ಬಹಿಷ್ಕಾರ, ಇಂದಿರಾಗಾಂಧಿ ಆತಂಕ, ಎನ್.ಟಿ.ರಾಮರಾವ್ ಸರ್ಕಾರದ ವಜಾ, ಅದೇ ಸಂಪುಟ ಮತ್ತೆ ಅಧಿಕಾರಕ್ಕೆ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಇಂದಿರಾಗಾಂಧಿ ಹತ್ಯೆ, ಸಿಖ್ಖರ ಮಾರಣಹೋಮ, ನವೆಂಬರ್ 6 ರಂದು ಕಲ್ಕತ್ತೆಯಲ್ಲಿ ಐತಿಹಾಸಿಕ ಸೌಹಾರ್ದ ರ‍್ಯಾಲಿ, ಅನುಕಂಪದ ಅಲೆಯಲ್ಲಿ ಗೆದ್ದ ಕಾಂಗ್ರೆಸ್, 2ನೇ ದೊಡ್ಡ ಪಕ್ಷವಾಗಿ ಸಿಪಿಐ(ಎಂ), ಆಡಳಿತ ಹಾಗೂ ಇತರೆ ರಂಗಗಳಲ್ಲಿ ನಮ್ಮ ವಿಫಲತೆ.. ಈ ಬಗ್ಗೆ ಓದಿ


ಇಂದಿರಾಗಾಂಧಿ ಗಾಬರಿಗೊಂಡರು. ಈ ಸಂಘಟಿತ ಒತ್ತಡವನ್ನು ತಡೆದುಕೊಳ್ಳಲು ಆಕೆಗೆ ಆಗಲಿಲ್ಲ. ಆಗಸ್ಟ್ 24 ರಂದು ರಾಮಲಾಲ್ ರಾಜಿನಾಮೆ ನೀಡಿದರು. ಶಂಕರದಯಾಳ ಶರ್ಮಾ ಹೊಸ ರಾಜ್ಯಪಾಲರಾದರು. ಸೆ. 16 ರಂದು ಭಾಸ್ಕರ ರಾವ್ ಕೆಳಗಿಳಿಯಬೇಕಾಯಿತು. ಮತ್ತೆ ಸರಕಾರ ರಚಿಸಲು ಎನ್.ಟಿ.ಆರ್.ಗೆ ಆಹ್ವಾನ ಸಿಕ್ಕಿತು.

ಈ ಪ್ರಕರಣ ಭಾರತದ ಇತಿಹಾಸದಲ್ಲಿ ಅಭೂತಪೂರ್ವವಾದುದು. ಹೈದರಾಬಾದ್‌ನಲ್ಲಿ ನಾವು ಬೃಹತ್ ವಿಜಯೋತ್ಸವ ರ‍್ಯಾಲಿ ನಡೆಸಿದೆವು. ಇಂದಿರಗಾಂಧಿ ಯಾವತ್ತು ಅನುಭವಿಸದ ಆಘಾತಕ್ಕೆ ಒಳಗಾದರು.

ಚುನಾವಣೆ ಸಮೀಪಿಸುತ್ತಿದ್ದಂತೆ ಇಂದಿರಾಗಾಂಧಿ ಶೀಘ್ರ ಗತಿಯಲ್ಲಿ ಬೆಂಬಲವನ್ನು ಕಳೆದುಕೊಳ್ಳತೊಡಗಿದರು. ಎಂಟನೇ ಲೋಕಸಭೆ ಚುನಾವಣೆಯಲ್ಲಿ ಆಕೆ ಗೆಲ್ಲುತ್ತಿದ್ದರೇ ಎನ್ನುವುದು ಊಹೆಗೆ ಬಿಟ್ಟ ವಿಚಾರವಾಗಿತ್ತು. ಆದರೆ ವಿಧಿಯೇ ಬೇರೆಯಾಗಿತ್ತು. 1984ರ ಅಕ್ಟೋಬರ್ 31 ರಂದು ಇಂದಿರಾಗಾಂಧಿಯನ್ನು ಅವರ ಮನೆಯಲ್ಲೇ ಭದ್ರತಾ ಸಿಬ್ಬಂದಿಗಳು ಗುಂಡಿಟ್ಟು ಕೊಂದು ಹಾಕಿದರು. ಇಂದಿರಾರ ಮೇಲೆ ಗುಂಡು ಹಾರಿಸಿದ ಇಬ್ಬರ ಪೈಕಿ ಒಬ್ಬನಾದ ಬೇ ಅಂತ್ ಸಿಂಗ್‌ನನ್ನು ಇತರ ಭದ್ರತಾ ಸಿಬ್ಬಂದಿಗಳು ಸ್ಥಳದಲ್ಲೇ ಸಾಯಿಸಿದರು. ಇನ್ನೊಬ್ಬ ಹಂತಕ ಸತ್ವಂತ ಸಿಂಗ್ ದೀರ್ಘಕಾಲ ವಿಚಾರಣೆ ಎದುರಿಸಿದ. ಕೊನೆಗೆ ಆತನನ್ನು ಗಲ್ಲಿಗೇರಿಸಲಾಯಿತು.

ಇಂದಿರಾ ಹತ್ಯೆಯಾದಾಗ ನಾನು ಕಲ್ಕತ್ತದಲ್ಲಿರಲಿಲ್ಲ.

ಮದ್ರಾಸ್ ಸಮೀಪದ ತೂತುಕುಡಿಯಲ್ಲಿ ನಡೆಯುತ್ತಿದ್ದ ಜಲಸಾರಿಗೆ ಕಾರ್ಮಿಕರ ಒಕ್ಕೂಟದ (ಸಿಐಟಿಯು) ರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದೆ. ಮರುದಿನವೇ ನಾನು ದೆಹಲಿಗೆ ಧಾವಿಸಿದೆ. ಆ ವೇಳೆಗಾಗಲೇ ಗಲಭೆಗಳು



ಇಂದಿರಾ ಗಾಂಧಿ ಪಾರ್ಥಿವ ಶರೀರ

ಸ್ಫೋಟಗೊಂಡಿದ್ದವು. ರಾಜಧಾನಿಯಲ್ಲಿ ನಾನು ಎರಡು ದಿನ ಇದ್ದೆ.

ಮುಗ್ಧ ಸಿಖ್ಖರನ್ನು ಸಿಕ್ಕ ಸಿಕ್ಕಲ್ಲಿ ಕೊಲ್ಲಲಾಯಿತು. ಈ ಹತ್ಯೆಗಳ ಹಿಂದೆ ಕಾಂಗ್ರೆಸ್ ನಾಯಕರ ಕೈವಾಡವಿತ್ತೆನ್ನುವುದು ಆನಂತರ ಸಾಬೀತಾಯಿತು. ಗಲಭೆ-ದೊಂಬಿ ಬೇರೆ ರಾಜ್ಯಗಳಿಗೂ ಹಬ್ಬಿತು. ನಾವು ಕಲ್ಕತ್ತದಲ್ಲಿ ಸೇನೆಯನ್ನು ಕರೆಸಬೇಕಾಯಿತು.

ನವೆಂಬರ್ 2 ರಂದು ನಾನು ದೆಹಲಿ ತಲುಪಿದಾಗ ನೇರವಾಗಿ ತೀನ್‌ಮೂರ್ತಿ ಭವನಕ್ಕೆ ಧಾವಿಸಿದೆ. ಇಂದಿರಾರ ಪಾರ್ಥಿವ ಶರೀರವನ್ನು ಅಲ್ಲಿ ಇಟ್ಟಿದ್ದರು. ಅದರ ಮೇಲೆ ಪುಷ್ಪಗುಚ್ಛ ಇಡಲಷ್ಟೆ ನಾನು ಶಕ್ತನಾದೆ. ಜನಸಂದಣಿ ಊಹಿಸಲೂ ಆಗದಷ್ಟಿತ್ತು. ಸಂಜೆಯೇ ನಾನು ಮರಳಬೇಕೆಂದಿದ್ದೆ. ಆದರೆ ಹಿಂದಿನ ರಾತ್ರಿ ರಾಷ್ಟ್ರಪತಿ ಜೈಲ್‌ಸಿಂಗರಿಂದ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದ ರಾಜೀವಗಾಂಧಿ ಭಂಗ ಭವನದಲ್ಲಿದ್ದ ನನ್ನನ್ನು ಸಂಪರ್ಕಿಸಿ ನನ್ನ ಜತೆ ಮಾತನಾಡುವ ಇಚ್ಛೆ ವ್ಯಕ್ತಪಡಿಸಿದರು. ಆ ಪರಿಸ್ಥಿತಿಯಲ್ಲಿ ಆಗಬಹುದು ಎನ್ನದೆ ಬೇರೆ ದಾರಿಯಿರಲಿಲ್ಲ. ರಾಜೀವಗಾಂಧಿ ಎಐಸಿಸಿ ಪ್ರಧಾನಕಾರ್ಯದರ್ಶಿ ಪಶ್ಚಿಮ ಬಂಗಾಳದ ಪ್ರವಾಸದಲ್ಲಿದ್ದಾಗ ಅವರ ತಾಯಿಯ ಹತ್ಯೆ ನಡೆಯಿತು. ನವೆಂಬರ್ 2 ರಂದು ನಾನು ರಾಜೀವರನ್ನು ಕಂಡೆ. ಅನೇಕ ವಿಷಯಗಳನ್ನು ಮುಖ್ಯವಾಗಿ ಗಲಭೆಗಳ ಬಗ್ಗೆ ನಾವು ಚರ್ಚಿಸಿದೆವು. ಗಲಭೆಗಳನ್ನು ನಿಯಂತ್ರಿಸುವುದಕ್ಕೆ ಮೊದಲ ಆದ್ಯತೆ ನೀಡಬೇಕು ಹಾಗೂ ಸವಾಲನ್ನು ರಾಜಕೀಯವಾಗಿ ಎದುರಿಸಬೇಕು ಎಂದು ನಾನು ಅವರಿಗೆ ಹೇಳಿದೆ. ತಾಯಿಯ ಅಂತ್ಯ ಸಂಸ್ಕಾರಕ್ಕಾಗಿ ದೆಹಲಿಯಲ್ಲೇ ಉಳಿಯುವಂತೆ ಅವರು ಕೋರಿದರು. ಆದರೆ ನಾನು ಕಲ್ಕತ್ತಕ್ಕೆ ಮರಳಲೇ ಬೇಕಿತ್ತು. ಅಗತ್ಯ ಬಿದ್ದರೆ ನಾನು ಯಾವಾಗ ಬೇಕಾದರೂ ಒಂದು ದಿನದ ಮಟ್ಟಿಗೆ ದೆಹಲಿಗೆ ಮರಳಬಹುದು ಎಂದು ನಾನು ರಾಜೀವ್‌ಗೆ ಹೇಳಿದೆ. ರಾಜ್ಯದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಗಲಭೆಗಳನ್ನು ನಿಯಂತ್ರಿಸುವಲ್ಲಿ ಹಾಗೂ ಸಿಖ್ಖರನ್ನು ಕಾಪಾಡುವಲ್ಲಿ ನಿರತರಾಗಿದ್ದರು.

ನವೆಂಬರ್ 6 ರಂದು ನಾವು ಕಲ್ಕತ್ತದಲ್ಲಿ ಐತಿಹಾಸಿಕ 'ಸೌಹಾರ್ದ ರ‍್ಯಾಲಿ'ಯನ್ನು ನಡೆಸಿದೆವು.

ಅನುಕಂಪದ ಅಲೆ

ಕೋಮು ಸೌಹಾರ್ದವನ್ನು ಬೆಳೆಸಲು ಕಾಂಗ್ರೆಸ್ ಬಳಿ ಸ್ಪಷ್ಟ ಕಾರ್ಯಕ್ರಮ ಇರಲಿಲ್ಲ. ಶ್ರೀಮತಿ ಗಾಂಧಿಯವರ ಹತ್ಯೆಯ ನಂತರ ಉಂಟಾದ ಅನುಕಂಪದ ಅಲೆಯನ್ನೇರಿ ಚುನಾವಣೆಗಳನ್ನು ಗೆಲ್ಲುವ ಕಾರ್ಯತಂತ್ರವನ್ನು ದೇಶದ ಅತಿದೊಡ್ಡ ರಾಜಕೀಯ ಪಕ್ಷ ರೂಪಿಸತೊಡಗಿತು. ಅದಕ್ಕಾಗಿ ಎಲ್ಲವನ್ನೂ ಮಾಡಲಾಯಿತು. ಇಂದಿರಾ ಗಾಂಧಿಯವರ ಶವ, ಅದರ ಬಳಿ ರಾಜೀವಗಾಂಧಿ ಮೌನವಾಗಿ ನಿಂತಿದ್ದು ಹಾಗೂ ದುಃಖತಪ್ತ ಜನಸಾಗರದ ದೃಶ್ಯವನ್ನು ದೂರದರ್ಶನದಲ್ಲಿ ಆಗಾಗ ತೋರಿಸಿದ್ದು ಜನರ ಮೇಲೆ ಭಾರಿ ಪರಿಣಾಮ ಬೀರಿತು. ಇಂದಿರಾರನ್ನು ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಹುತಾತ್ಮರು ಎಂದು ಬಿಂಬಿಸಲಾಯಿತು.

ಮುಂಚೆಯೇ ಚುನಾವಣೆಗಳನ್ನು ನಡೆಸಲು ಯೋಜಿಸಲಾಯಿತು. ಲೋಕಸಭೆಯ ಅವಧಿ 1985ರ ಫೆಬ್ರವರಿ 19 ರಂದು ಮುಕ್ತಾಯವಾಗ ಬೇಕಿತ್ತು. ನಾವು 1984ರ ಸೆಪ್ಟೆಂಬರ್‌ನಲ್ಲಿ ನಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಘೋಷಿಸಿದ್ದೆವು. ಡಿಸೆಂಬರ್ 24-28ರ ನಡುವೆ ಚುನಾವಣೆ ನಡೆಯಿತು. ಪಶ್ಚಿಮ ಬಂಗಾಳದಲ್ಲಿ ಮೊದಲ ದಿನವೇ ಮತದಾನವಾಯಿತು. ನಾವು ಮುಖ್ಯವಾಗಿ ರಾಜಕೀಯ ವಿಚಾರ ಮುಂದಿಟ್ಟೇ ಪ್ರಚಾರ ನಡೆಸಿದೆವು. ಆದರೆ ಅನುಕಂಪದ ಅಲೆಯ ವಿರುದ್ಧ ಹೋರಾಡುವುದು ಬಹಳ ಕಷ್ಟವೆನಿಸುತ್ತಿತ್ತು.

542 ಲೋಕಸಭೆ ಸ್ಥಾನಗಳ ಪೈಕಿ ಕಾಂಗ್ರೆಸ್ 415ರಲ್ಲಿ ಗೆದ್ದಿತು. ಅದಕ್ಕೆ 48.1 ಶೇಕಡ ಮತ ದೊರಕಿತು. ಸ್ವಾತಂತ್ರ್ಯಾನಂತರ ಇದು ಕಾಂಗ್ರೆಸ್‌ನ ಅತ್ಯಂತ ದೊಡ್ಡ ಗೆಲುವು. 22 ಸ್ಥಾನಗಳಿಸಿದ ಸಿಪಿಐ(ಎಂ) ಎರಡನೇ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಸಿಪಿಐ ಆರು, ಫಾರ್ವರ್ಡ್ ಬ್ಲಾಕ್ ಎರಡು, ಆರ್.ಎಸ್.ಪಿ ಮೂರು ಸ್ಥಾನಗಳನ್ನು ಜಯಿಸಿತು. 219 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಜನತಾ ಪಕ್ಷ ಕೇವಲ ಹತ್ತರಲ್ಲಿ ಜಯಗಳಿಸಿತು. 174ರಲ್ಲಿ ಸ್ಪರ್ಧಿಸಿದ್ದ ಲೋಕದಳ ಮೂರರಲ್ಲಷ್ಟೆ ಗೆದ್ದಿತು. 229 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ ಗೆದ್ದಿದ್ದು ಎರಡು ಸ್ಥಾನಗಳಲ್ಲಿ ಮಾತ್ರ. ಆಂಧ್ರಪ್ರದೇಶದ 42 ಸ್ಥಾನಗಳು ಪೈಕಿ ಕಾಂಗ್ರೆಸ್ ಕೇವಲ ಆರರಲ್ಲಿ ಗೆಲ್ಲಲು ಸಾಧ್ಯವಾಯಿತು. ತೆಲುಗುದೇಶಂ 30 ಸ್ಥಾನಗಳಲ್ಲಿ ಗೆದ್ದಿತು. ತ್ರಿಪುರಾದ ಎರಡೂ ಲೋಕಸಭೆ ಕ್ಷೇತ್ರಗಳನ್ನು ನಾವು ಗೆದ್ದೆವು.

ಪಶ್ಚಿಮ ಬಂಗಾಳದ 42 ಸ್ಥಾನಗಳಲ್ಲಿ 26ರಲ್ಲಿ ಎಡರಂಗ ಗೆದ್ದಿತು. ಉಳಿದ 16 ಕಾಂಗ್ರೆಸ್ ಪಾಲಾಯಿತು. ರಂಗ ಗೆದ್ದ 26 ಸ್ಥಾನಗಳ ಪೈಕಿ ಸಿಪಿಐ(ಎಂ) ಒಂದೇ 18ರಲ್ಲಿ ಜಯಶಾಲಿ ಯಾಯಿತು. ಪಕ್ಷೇತರರಾಗಿ ಸ್ಪರ್ಧಿಸಿದ್ದ ಸಿದ್ದಾರ್ಥ ಶಂಕರ ರಾಯ್ ಠೇವಣಿ ಕಳೆದುಕೊಂಡರು.

ಚಲಾವಣೆಯಾದ ಮತಗಳಲ್ಲಿ ಎಡರಂಗ ಶೇ. 48.43 ಮತಗಳನ್ನು ಹಾಗೂ ಕಾಂಗ್ರೆಸ್ ಶೇ. 48.16 ಮತ ಗಳಿಸಿತು.

ಚುನಾವಣೆ ಫಲಿತಾಂಶಗಳನ್ನು ವಿಶ್ಲೇಷಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ, ಇಂದಿರಾಗಾಂಧಿ ಹತ್ಯೆಯ ನಂತರ ಪರಿಸ್ಥಿತಿ 'ತೀವ್ರವಾಗಿ' ಬದಲಾಗಿದೆ ಎಂದು ಹೇಳಿತು. ತಮ್ಮ ಉದ್ಧಾರಕ್ಕೆ ಅಡ್ಡಗಾಲು ಹಾಕಿದ ಪಕ್ಷದಲ್ಲೇ ಜನರು ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಇದು ವಿರೋಧಾಭಾಸವಾಗಿದೆ. ಜನರು ಅನುಕಂಪದ ಅಲೆಯಿಂದ ಹಾದಿತಪ್ಪಿದ್ದಾರೆ ಹಾಗೂ ಕಾಂಗ್ರೆಸ್ ಪಕ್ಷ ತನ್ನ ಅನುಕೂಲಕ್ಕೆ ಅದನ್ನು ಬಳಸಿಕೊಂಡಿದೆ.

ಎಡಶಕ್ತಿಗಳು ಈ ಸವಾಲನ್ನು ಎದುರಿಸುವಷ್ಟು ಬಲಿಷ್ಟವಾಗಿಲ್ಲ. ಇತರ ಕಾಂಗ್ರೆಸೇತರ ಪಕ್ಷಗಳು ಸ್ಥಾನ ಹೊಂದಾಣಿಕೆ ಕುರಿತ ಕಲಹವನ್ನು ಮುಂದುವರಿಸಿಯೇ ಇದ್ದವು. ಹೀಗಾಗಿ ಜನರು ನಮ್ಮ ಕಡೆ ನೋಡಲಿಲ್ಲ.

ಕಾಂಗ್ರೆಸ್ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಮಾಧ್ಯಮವನ್ನು ದುರುಪಯೋಗಪಡಿಸಿಕೊಂಡಿತು. ಕೋಮುವಾದವನ್ನು ಬಳಸಿಕೊಂಡಿತು. ಸಿಖ್ಖರ ವಿರುದ್ಧ ಕತ್ತಿಮಸೆಯುವಾಗ ಕಾಂಗ್ರೆಸ್‌ಗೆ ಆರ್ ಎಸ್.ಎಸ್. ಬೆಂಬಲ ನೀಡಿತು. ಉದ್ಯೋಗದ ಆಮಿಷವೊಡ್ಡಿ ಹೊಸ ಮತದಾರರನ್ನು ಕಾಂಗ್ರೆಸ್ ಹಾದಿ ತಪ್ಪಿಸಿತು.

1982ರಿಂದೀಚೆಗೆ ಮಧ್ಯಮ ವರ್ಗದ ನಡುವೆ ನಮ್ಮ ಬಲ ಕ್ರಮೇಣ ಕುಂದುತ್ತಿತ್ತು. ಕಾಂಗ್ರೆಸ್ ಕಾರ್ಯಕರ್ತರೂ ಇದನ್ನೂ ತಮ್ಮ ಅನುಕೂಲಕ್ಕೆ ಬಳಸಿಕೊಂಡರು. ಅವರೆಲ್ಲರೂ ಸಮಾಜ-ವಿರೋಧಿಗಳು ಎಂದು ಅರ್ಥವಲ್ಲ. ಅವರಲ್ಲೂ ಕೆಲವರು ತಮ್ಮ ಘೋಷಣೆಗಳು ಹಾಗೂ ಮಹತ್ವದ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಯಶಸ್ವಿಯಾಗಿ ಜನರ ಬಳಿಗೆ ಹೋದರು.

ಆಡಳಿತ ವಿಚಾರವಾಗಿ, ನಾವು ಅನೇಕ ರಂಗಗಳಲ್ಲಿ ವಿಫಲರಾದೆವು. ಕೆಲವು ವೇಳೆ ನಮ್ಮ ಆತ್ಮ ಸಂತೃಪ್ತಿ, ಮಂದಗತಿ ಹಾಗೂ (ದೊಡ್ಡ ಪ್ರಮಾಣದಲ್ಲಿ ಅಲ್ಲವಾದರೂ) ಭ್ರಷ್ಟಾಚಾರ ನಮ್ಮನ್ನು ದುರ್ಬಲಗೊಳಿಸಿತು. ಕಮ್ಯುನಿಸ್ಟರು ಪ್ರತಿಯೊಂದು ವಿಷಯದಲ್ಲಿ ಕಾಂಗ್ರೆಸಿಗರಿಗಿಂತ ಭಿನ್ನರು ಎಂಬುದನ್ನು ನಮ್ಮಲ್ಲಿ ಕೆಲವರು ಮರೆಯಬಾರದಿತ್ತು.

ಏನಿದ್ದರೂ ಇದ್ಯಾವುವೂ 1984ರ ಗೆಲುವಿನಲ್ಲಿ ನಮಗೆ ಅಡ್ಡಿ ಬರಲಿಲ್ಲ. ನಮ್ಮ ದೌರ್ಬಲ್ಯಗಳನ್ನೇ ಹೇಳುತ್ತ ಕೂರುವುದರಲ್ಲಿ ಯಾವುದೇ ಅರ್ಥವಿಲ್ಲ. ತಪ್ಪುಗಳನ್ನು ತಿದ್ದಿಕೊಂಡು ರಾಜಕೀಯ ಉಪಕ್ರಿಯೋಯೊಂದಿಗೆ ಮುಂದೆ ನೋಡುವುದು ಅಗತ್ಯ. ಜನರಿಗೆ ಶಿಕ್ಷಣ ನೀಡಲು ಹಾಗೂ ಯಾವುದೇ ನಿರ್ಧಾರ ಕೈಗೊಳ್ಳದ ಮತದಾರನ್ನು ನಮ್ಮ ಕಡೆ ಒಲಿಸಿಕೊಳ್ಳಲು ನಾವು ಪ್ರಯತ್ನಿಸಬೇಕು. 1984ರ ಜನವರಿ 10 ರಂದು ನಡೆದ ಪಕ್ಷದ ರಾಜ್ಯ ಸಮ್ಮೇಳನದಲ್ಲೇ ಈ ಸಂದೇಶ ಹೊರ ಹೊಮ್ಮಿತ್ತು.

(ಮುಂದುವರಿಯುವುದು)

ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆ

ಐಕ್ಯರಂಗ ಪತ್ರಿಕೆ 1964 ರಿಂದಲೂ ಪ್ರಗತಿಪರ, ಜನಪರ ಧ್ವನಿಯಾಗಿ ಕ್ರಿಯಾಶೀಲ ಪಾತ್ರ ವಹಿಸುತ್ತಾ ಬಂದಿದೆ. ನಾಡಿನ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ವಿಷಯಗಳಲ್ಲಿ ವಿಭಿನ್ನವಾಗಿ, ವೈಶಿಷ್ಟಪೂರ್ಣವಾದ ಚಿಂತನೆಗಳನ್ನು ಪತ್ರಿಕೆ ನೀಡಿದೆ. ಜಾಗತೀಕರಣ, ಉದಾರೀಕರಣದಂತಹ ವಿಷಯಗಳಲ್ಲಿ ಮರೆಮಾಚಿದ ಹಲವು ವಿದ್ಯಮಾನಗಳನ್ನು ಜನರ ಮುಂದೆ ಸಮರ್ಥವಾಗಿ ತೆರೆದಿರಿಸಿದ ಏಕೈಕ ಪತ್ರಿಕೆ ಐಕ್ಯರಂಗ.

ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ ಪತ್ರಿಕೆಯು ವಿಭಿನ್ನವಾದ, ಆದರೆ ಮೌಲಿಕವಾದ ವಿಚಾರಗಳುಳ್ಳ ವಿಶೇಷ ಸಂಚಿಕೆಯನ್ನು ಹೊರತರಲು ಬಯಸಿದೆ. 'ಜಾಗತೀಕರಣ ಮತ್ತು ಭಾರತದ ಸ್ವಾತಂತ್ರ್ಯ - ದೇಶ ವಿಭಜನೆಯ ದುರಂತಗಳು' ಕುರಿತಾದ ವಿಶೇಷ ಲೇಖನಗಳ ಜೊತೆಗೆ ಹಲವಾರು ಆಳ ವಿಶ್ಲೇಷಣೆಗಳುಳ್ಳ ಬರಹಗಳನ್ನು ಈ ಸಂಚಿಕೆ ಒಳಗೊಳ್ಳಲಿದೆ. ರಾಷ್ಟ್ರ ಹಾಗೂ ರಾಜ್ಯದ ಪ್ರಮುಖ ಪರಿಣಿತರು, ಬುದ್ಧಿಜೀವಿಗಳು, ಪ್ರಜಾಸತ್ತಾತ್ಮಕ ಚಳುವಳಿಯ ನಾಯಕರು ಬರೆಯಲಿದ್ದಾರೆ.

ಈ ವಿಶೇಷ ಸಂಚಿಕೆಯಲ್ಲಿ ಕೆಲವು ಪುಟಗಳನ್ನು ನಮ್ಮ ಆತ್ಮೀಯ ಜಾಹೀರಾತುದಾರರಿಗೂ ಮೀಸಲಿಡಲಾಗಿದೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ, ಹೊರ ರಾಜ್ಯಗಳಲ್ಲಿ ವ್ಯಾಪಕ ಪ್ರಸಾರ ಹೊಂದಿದ ಪತ್ರಿಕೆಗೆ ಜಾಹೀರಾತು ನೀಡುವ ಮೂಲಕ ಸಹಕಾರ ನೀಡಬೇಕಾಗಿ ವಿನಂತಿಸುತ್ತೇವೆ.

ಸಂಪಾದಕರು

ಮೊಳಗುತ್ತಿದೆ

ಕಾರ್ಮಿಕ ವರ್ಗದ ಐಕ್ಯತೆಯ ಕಹಳೆ

ಸಿಐಟಿಯು, ಎಐಟಿಯುಸಿ, ಬಿಎಂಎಸ್, ಇಂಟಕ್, ಹೆಚ್‌ಎಂಎಸ್ ಮೊದಲಾದ ಕೇಂದ್ರ ಕಾರ್ಮಿಕ ಸಂಘಟನೆಗಳು ಬ್ಯಾಂಕ್, ಎಲ್ಐಸಿ, ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರು, ಔಷಧಿ ಮಾರಾಟ ಮಾಡುವ ಪ್ರತಿನಿಧಿಗಳು - ಹೀಗೆ ಎಲ್ಲಾ ಕಾರ್ಮಿಕ ನೌಕರರ ವಿಭಾಗಗಳ ಸಂಘಟನೆಗಳು ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಜುಲೈ 24 ರಂದು ನವದೆಹಲಿಯ ಪಾರ್ಲಿಮೆಂಟ್ ಭವನದ ಮುಂದೆ ಮತ್ತು ಇಡೀ ದೇಶಾದ್ಯಂತ ಚಳುವಳಿ ನಡೆಸಬೇಕೆಂದು ಕರೆ ನೀಡಿತ್ತು. ಆ ನಿಟ್ಟಿನಲ್ಲಿ 12.07.2001 ರಂದು ಬೆಂಗಳೂರಿನ ಪುರಭವನದಲ್ಲಿ ನಡೆದ ರಾಜ್ಯ ಮಟ್ಟದ ಸಮಾವೇಶ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದುದು. ಈ ಐತಿಹಾಸಿಕ ಸಮಾವೇಶಕ್ಕೆ ರಾಜ್ಯದ ಮೂಲೆಮೂಲೆಗಳಿಂದ ಪ್ರತಿನಿಧಿಗಳು ಬಂದು ಬೆಂಬಲ ವ್ಯಕ್ತಪಡಿಸಿದುದು ಮಾತ್ರವಲ್ಲದೆ, ಚಳುವಳಿಯನ್ನು ಬೇರು ಮಟ್ಟಕ್ಕೆ ಕೊಂಡೊಯ್ಯುವುದಾಗಿ ಭರವಸೆ ನೀಡಿದ್ದರು.

ಬಹುಶಃ ಕರ್ನಾಟಕ ರಾಜ್ಯ ಕಾರ್ಮಿಕ ಚಳುವಳಿಯ ಇತಿಹಾಸದಲ್ಲೇ ಮೊದಲ ಬಾರಿಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಂಟಿ ಸಮಾವೇಶ ಜರುಗಿತ್ತು. ಈ ಸಮಾವೇಶಕ್ಕೆ ಮೊದಲು ಮತ್ತು ನಂತರ ಕರಪತ್ರಗಳ ಮೂಲಕ, ಗೇಟು ಸಭೆ, ಬೀದಿಬದಿ ಸಭೆ, ಗುಂಪು ಚರ್ಚೆಗಳ ಮೂಲಕ ಇಡೀ ಕಾರ್ಮಿಕ ಸಮೂಹವನ್ನೇ ಕೇಂದ್ರ ಮತ್ತು ರಾಜ್ಯ ಸರ್ಕಾರದ ಘೋರ ನೀತಿಗಳ ವಿರುದ್ಧ ಪ್ರಚಾರವನ್ನು ನಡೆಸಲಾಗಿತ್ತು. ಆದ್ದರಿಂದಲೇ ಜುಲೈ 24 ರ ಚಳುವಳಿ ಬೆಂಗಳೂರಿನಲ್ಲಿ ಮಾತ್ರವಲ್ಲದೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅತ್ಯಂತ ಯಶಸ್ವಿಯಾಗಿದೆ. ಇದು ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಅತೃಪ್ತಿಯ ಸೂಚಕ ಒಂದೆಡೆಯಾದರೆ, ಕಾರ್ಮಿಕ ವರ್ಗ ಐಕ್ಯತೆಯನ್ನು ಮೆರೆಯುವ ಪ್ರತೀಕವೂ ಆಗಿದೆ.

ಅಭೂತಪೂರ್ವ

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ ಸಂಘಟಿತ ಕಾರ್ಮಿಕರು ಅದರಲ್ಲೂ ಸಾರ್ವಜನಿಕ ಉದ್ದಿಮೆಗಳಾದ ಬಿಇಎಲ್, ಬಿಹೆಚ್ಇಎಲ್, ಹೆಚ್ಎಎಲ್, ಬಿಇಎಂಎಲ್ ಮೊದಲಾದ ಕಾರ್ಖಾನೆಗಳಿಗೆ ಸೇರಿದ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದುದು ಅತ್ಯಂತ ವಿಶೇಷ ಸಂಗತಿ. ಈ ಸಭೆಯಲ್ಲಿ ಭಾಗವಹಿಸಿದ ಕೇಂದ್ರ ಕಾರ್ಮಿಕ ಸಂಘಟನೆಗಳ ಹಾಗೂ ಸಾರ್ವಜನಿಕ ಉದ್ದಿಮೆಯ ಜಂಟಿ ಹೋರಾಟ ರಂಗ(ಜೆಎಫ್) ದ ಮುಖಂಡರು ಕಾರ್ಮಿಕರ ಐಕ್ಯತೆ ಬಗ್ಗೆ ಹಾಗೂ ದೀರ್ಘ ಹೋರಾಟ ನಡೆಸುವುದರ ಬಗ್ಗೆ ಒತ್ತಿ ಹೇಳಿದರು. ಮಾತ್ರವಲ್ಲದೆ ವಿಶ್ವಬ್ಯಾಂಕ್ ಪ್ರೇರಿತ ಆರ್ಥಿಕ ನೀತಿಯನ್ನು ಹಿಮ್ಮೆಟ್ಟಿಸಲು ಆಗ್ರಹಿಸಿದರು.

ಈ ರೀತಿಯಾಗಿ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಐಕ್ಯ ಚಳುವಳಿ ನಡೆದಿರುವುದು ಐತಿಹಾಸಿಕ ಘಟ್ಟ. ಸರಕಾರಗಳ ಕಾರ್ಮಿಕ ವಿರೋಧಿ, ಜನವಿರೋಧಿ ನೀತಿಗಳ ವಿರುದ್ಧ ದೇಶೀಯ ಮತ್ತು ವಿದೇಶಿ ಮಾಲೀಕರ ಶೋಷಣೆಯ ವಿರುದ್ಧ ಇನ್ನೂ ತೀವ್ರವಾದ ಹೋರಾಟ ನಡೆಸಲು ಕಾರ್ಮಿಕ ವರ್ಗ ಸಿದ್ಧವಿದೆ ಎಂಬುದನ್ನು ಇದು ಎತ್ತಿ ತೋರಿಸಿದೆ.

ಈ ಬಾರಿಯ ಚಳುವಳಿಯ ಇನ್ನೊಂದು ಪ್ರಮುಖ ಅಂಶವೆಂದರೆ ಯಾವುದೇ ಆರ್ಥಿಕ ಬೇಡಿಕೆಯನ್ನು ಇದು ಒಳಗೊಂಡಿರಲಿಲ್ಲ. ಬದಲಾಗಿ ಕಾರ್ಮಿಕವರ್ಗದ ಪ್ರಜಾಸತ್ತಾತ್ಮಕ ಹಕ್ಕುಗಳು, ಇತರ ಶೋಷಿತ ಜನರ, ಕೃಷಿ ಕಾರ್ಮಿಕರ, ರೈತರ ಬೇಡಿಕೆಗಳನ್ನು ಇದು ಒಳಗೊಂಡಿತ್ತು. ಅಂದರೆ ಕಾರ್ಮಿಕರು, ನೌಕರರು ತಾವು ದುಡಿಯುವ ಪ್ರದೇಶಗಳಿಗೆ ಸೀಮಿತವಾಗಿದ್ದ ತಮ್ಮ ತಿಳುವಳಿಕೆಯನ್ನು ವಿಶಾಲಗೊಳಿಸುತ್ತಿದ್ದಾರೆ. ಇದು ಬಹಳ ಉತ್ತಮ ಬೆಳವಣಿಗೆ.

ಇನ್ನೊಂದು ಮಹತ್ವಪೂರ್ಣವಾದ ಹೋರಾಟಕ್ಕೆ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಚಾರ ಸಿಗಲಿಲ್ಲ. ಪುರಭವನದಲ್ಲಿ ನಡೆದ ಸಮಾವೇಶಕ್ಕಾಗಲೀ, ದೆಹಲಿ ಬೆಂಗಳೂರುಗಳಲ್ಲಿ ನಡೆದ ಪ್ರತಿಭಟನೆಗಳಿಗಾಗಲೀ ಸಾಕಷ್ಟು ಪ್ರಚಾರ ಸಿಗಲಿಲ್ಲ ಎಂಬುದು ವಿಷಾದದ ಸಂಗತಿ. ರೈತ ಆತ್ಮಹತ್ಯೆ ಮಾಡಿಕೊಂಡ ನಂತರ ಪುಟಗಟ್ಟಲೆ ಬರೆಯುವ ಪತ್ರಿಕೆಗಳು ಆತ್ಮಹತ್ಯೆಗೆ ಕಾರಣವಾಗುವ ಅಂಶಗಳ ವಿರುದ್ಧ ನಡೆಸುವ ಐಕ್ಯ ಹೋರಾಟಕ್ಕೆ 4 ಇಂಚುಗಳ 'ನ್ಯೂಸ್' ಮಾತ್ರ ನೀಡಿವೆ. ಬಹುಶಃ ಹೋರಾಟ ತೀವ್ರವಾಗುತ್ತಿದ್ದಂತೆ ಪತ್ರಿಕೆಗಳಲ್ಲಿ ಪ್ರಚಾರ ಸಿಗುವುದು ದುರ್ಲಭವಾಗಬಹುದು.

ಆದ್ದರಿಂದ ಈ ಹೋರಾಟವನ್ನು ಕೈಗೆತ್ತಿಕೊಂಡ ಕಾರ್ಮಿಕವರ್ಗ ಪ್ರತಿ ಕಾರ್ಖಾನೆಗಳಲ್ಲಿ, ದುಡಿಯುವ ಸ್ಥಳಗಳಲ್ಲಿ ವಾಸ ಮಾಡುವ ಪ್ರದೇಶಗಳಲ್ಲಿ ವ್ಯಾಪಕ ಪ್ರಚಾರ ನಡೆಸಬೇಕು.

ಕಾರ್ಮಿಕ ವರ್ಗವು ಬೆಳೆಯುತ್ತಿರುವ ಐಕ್ಯತೆಯನ್ನು ಇನ್ನೂ ಬಲಿಷ್ಠಗೊಳಿಸಿ, ದೇಶವ್ಯಾಪಿ ಮುಷ್ಕರಕ್ಕೆ ತಯಾರಿ ನಡೆಸುತ್ತಿದೆ. ಜುಲೈ 25 ರಂದು ದೇಶದಲ್ಲೇ ಪ್ರಥಮ ಬಾರಿಗೆ 80 ಲಕ್ಷಕ್ಕೂ ಹೆಚ್ಚು ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರು ಮುಷ್ಕರ ನಡೆಸಿದ್ದಾರೆ. ನಮ್ಮ ರಾಜ್ಯದಲ್ಲಿ ಕೇಂದ್ರ ಸರ್ಕಾರಕ್ಕೆ ಸೇರಿದ ಇನ್‌ಕಂ ಟ್ಯಾಕ್ಸ್, ಆರ್.ಎಂ.ಎಸ್., ಸರ್ವೆ ಆಫ್ ಇಂಡಿಯಾ ಮೊದಲಾದ ಕಡೆ ಮುಷ್ಕರ ನಡೆದರೂ ರಾಜ್ಯ ಸರ್ಕಾರಿ ನೌಕರರ ಸಂಘವು 'ಧರಣಿ' ನಡೆಸುವುದಕ್ಕೆ ತೃಪ್ತಿಪಟ್ಟುಕೊಂಡುದು ಸೂಕ್ತವಲ್ಲ. ಇನ್ನು ಮುಂದಾದರೂ ಐಕ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕಾಗಿದೆ.

ದುಡಿಯುವ ವರ್ಗದ ಈ ಪ್ರತಿಭಟನೆಯನ್ನು ಗಣನೆಗೆ ತೆಗೆದುಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ದಿವಾಳಿಕೋರ ನೀತಿಯನ್ನು ಬದಲು ಮಾಡಬೇಕೆಂದು ಒತ್ತಾಯಿಸುತ್ತೇವೆ. ಇಲ್ಲದೇ ಹೋದಲ್ಲಿ ಇನ್ನೂ ತೀವ್ರವಾದ ಸಂಘರ್ಷವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡುತ್ತೇವೆ.

ಈ ನೀತಿಗಳ ವಿರುದ್ಧ ಮುಂಬರುವ ದಿನಗಳಲ್ಲಿ ಕಾರ್ಮಿಕರು ರೈತರ ಜತೆ ಸೇರಿ ಐಕ್ಯ ಹೋರಾಟಗಳು ಎದ್ದು ಬರುವಂತೆ ಮಾಡಬೇಕಾಗಿದೆ. ಈಗಾಗಲೇ ಅಲ್ಲಲ್ಲಿ ಹೋರಾಟಗಳನ್ನು ನಡೆಸುತ್ತಿರುವ ರೈತ ಸಂಘಟನೆಗಳು, ಕೃಷಿ ನಾಶವಾಗುತ್ತಿರುವ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹೋರಾಟವನ್ನು ಹಮ್ಮಿಕೊಳ್ಳಬೇಕಾದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ದುಡಿಯುವ ವರ್ಗ ಸಾಗಲಿ.

-ಎಸ್.ಸೂರ್ಯನಾರಾಣ ರಾವ್

ರಾಜ್ಯಾದ್ಯಂತ ಪ್ರತಿಭಟನೆಗಳ ಮಹಾಪೂರ

ನವದೆಹಲಿಯ ಪಾರ್ಲಿಮೆಂಟ್ ಭವನದ ಮುಂದೆ ಸಾವಿರಾರು ಮಂದಿ ನೌಕರರು, ಕಾರ್ಮಿಕರು ಪ್ರತಿಭಟನೆ ನಡೆಸಿದ ವರದಿಗಳು ಬಂದಿವೆ. ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ ಸೇರಿದಂತೆ, ಎಲ್ಲಾ ಮುಖಂಡರು ಕೇಂದ್ರ ಸರ್ಕಾರದ ಆರ್ಥಿಕ ನೀತಿಯ ಹೋರಾಟವನ್ನು ಮುಂದುವರಿಸುವಂತೆ ಕರೆ ನೀಡಿದರು. ದುರದೃಷ್ಟವಶಾತ್ ಇತರೆ ರಾಜ್ಯಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

ಕರ್ನಾಟಕ ರಾಜ್ಯದಲ್ಲಿ: ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ವಿವಿಧ ಭಾಗಗಳಿಂದ ಬಂದ ಕಾರ್ಮಿಕರು ಚಿಕ್ಕಲಾಲ್‌ಬಾಗ್‌ನಿಂದ ರಾಜಭವನಕ್ಕೆ ಮೆರವಣಿಗೆಯಲ್ಲಿ ತೆರಳುತ್ತಿದ್ದಾಗ ಬಸವೇಶ್ವ ವೃತ್ತದಲ್ಲಿ ಪೊಲೀಸರು ತಡೆದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗುತ್ತಿದ್ದ ಕಾರ್ಮಿಕ ಬಾಂಧವರು ಅತಿ ಉತ್ಸಾಹದಿಂದ ಸಭೆಯಲ್ಲಿ ಭಾಗವಹಿಸಿದರು. ಮುಖಂಡರು ಹೋರಾಟವನ್ನು ತೀವ್ರಗೊಳಿಸುವ ಕರೆ ನೀಡಿದಾಗ ಕರತಾಡನ ಮತ್ತು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ಸಿಐಟಿಯು ರಾಜ್ಯ ಅಧ್ಯಕ್ಷ ಸೂರ್ಯನಾರಾಯಣ ರಾವ್, ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಕಾರ್ಯದರ್ಶಿ ವರಲಕ್ಷ್ಮಿ, ಎಐಟಿಯುಸಿ ಮುಖಂಡ ಅನಂತ ಸುಬ್ಬರಾವ್, ಹೆಚ್‌ಎಂಕೆಪಿಯ ಮೈಕೆಲ್ ಫರ್ನಾಂಡೀಸ್ ಭಾಗವಹಿಸಿದ್ದರು. ಮುಖಂಡರ ನಿಯೋಗವೊಂದು ರಾಜ್ಯಪಾಲರಾದ ಶ್ರೀಮತಿ ರಮಾದೇವಿ ಅವರನ್ನು ಭೇಟಿ ಮಾಡಿ ಮನವಿ ನೀಡಿದರು. ಒಟ್ಟು 5000 ಕ್ಕೂ ಹೆಚ್ಚು ಕಾರ್ಮಿಕರು ಮೆರವಣಿಗೆ, ಸಭೆಯಲ್ಲಿ ಭಾಗವಹಿಸಿದ್ದಾರೆಂದು ಅಂದಾಜು ಮಾಡಲಾಗಿದೆ.

ದ.ಕ.ಜಿಲ್ಲೆಯ ಮಂಗಳೂರಿನಲ್ಲಿ ನಡೆದ ರ‍್ಯಾಲಿಯಲ್ಲಿ 3000 ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದು, ಸಿಐಟಿಯು ಉಪಾಧ್ಯಕ್ಷ ಬಿ.ಮಾಧವ ಭಾಗವಹಿಸಿದ್ದರೆ ಉಡುಪಿ ಜಿಲ್ಲೆಯಲ್ಲಿ ಉಡುಪಿ ಮತ್ತು ಕುಂದಾಪುರ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆಗಳು ನಡೆದಿವೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ ಹಿಂದೆಂದೂ ಕಾಣದಷ್ಟು ಬೃಹತ್ ಕಾರ್ಮಿಕ ರ‍್ಯಾಲಿಯನ್ನು ವೀಕ್ಷಿಸಿತು. ದೂರದ ಊರುಗಳಾದ ದಾಂಡೇಲಿ, ಹೊನ್ನಾವರ, ಭಟ್ಕಳ ಮೊದಲಾದ ನಗರಗಳಿಂದಲೂ ನೌಕರರು ಆಗಮಿಸಿದ್ದರು.

ಕೊಪ್ಪಳ ಬಂದ್: 2000 ಕ್ಕೂ ಹೆಚ್ಚು ಕಾರ್ಮಿಕರು ಜಮಾಯಿಸಿದ ಕೊಪ್ಪಳದಲ್ಲಿ ಮಧ್ಯಾಹ್ನ 12 ಗಂಟೆಯಿಂದ 1 ಗಂಟೆಯವರೆಗೆ ಬಂದನ್ನು ಆಚರಿಸಲಾಯಿತು. ಬಿಜಾಪುರ, ರಾಯಚೂರು, ಗದಗ, ಹುಬ್ಬಳ್ಳಿ, ಬಳ್ಳಾರಿ, ಹಾವೇರಿ, ಹರಿಹರ, ದಾವಣಗೆರೆಗಳಲ್ಲಿ ಉತ್ಸಾಹದಿಂದ ಮೆರವಣಿಗೆ, ಸಭೆಗಳು ನಡೆದಿವೆ.



ಬಳ್ಳಾರಿಯಲ್ಲಿ

ಹೊಸ ಪ್ರದೇಶದಲ್ಲೂ ಸಮರಶೀಲ ಪ್ರತಿಕ್ರಿಯೆ: ರಾಜ್ಯದ ಕೊಡುಗು ಜಿಲ್ಲೆ ಅತ್ಯಂತ ಚಿಕ್ಕ ಜಿಲ್ಲೆ. ಅಲ್ಲಿಯ ರಾಜಧಾನಿ ಮಡಿಕೇರಿಯಲ್ಲಿ 1200 ಕ್ಕೂ ಹೆಚ್ಚು ತೋಟ ಕಾರ್ಮಿಕರು, ಪಂಚಾಯತ್ ನೌಕರರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಭಾಗವಹಿಸಿದ ಕಾರ್ಮಿಕರಲ್ಲಿ ಬಹುತೇಕ ಮಂದಿ ಹೊಸಬರು, ಮಹಿಳೆಯರು ಎಂಬುದು ಇನ್ನೊಂದು ವಿಶೇಷ. ಅತಿ ಹೆಚ್ಚು ಪ್ಲಾಂಟೇಶನ್ ಕಾರ್ಮಿಕರಿರುವ ಇನ್ನೆರಡು ಜಿಲ್ಲೆ ಚಿಕ್ಕಮಗಳೂರು ಮತ್ತು ಹಾಸನ. ಪ್ರತಿಯೊಂದು ಕಡೆಯಲ್ಲೂ 1500 ಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ ವರದಿಗಳಿವೆ.

ತುಮಕೂರಿನಲ್ಲಿ ಸಿಐಟಿಯುಗೆ ಬೀಡಿ, ಅಂಗನವಾಡಿ, ಪಂಚಾಯತ್ ನೌಕರರು, ಎಐಟಿಯುಸಿಗೆ ಸೇರಿದ ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಯ ಕಾರ್ಮಿಕರು ಹಾಗೂ ಇತರರು ಸಮರಶೀಲ ಪ್ರತಿಭಟನೆಯನ್ನು ತೋರಿದರು. ಸಿಐಟಿಯುನ ಸೈಯದ್ ಮುಜೀಬ್, ಎಐಟಿಯುಸಿನ ಶಿವಣ್ಣ ಮೊದಲಾದವರು ಮಾತನಾಡಿದ ಸಭೆಯಲ್ಲಿ 3000 ಕ್ಕೂ ಹೆಚ್ಚು ನೌಕರರು, ಕಾರ್ಮಿಕರು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯದ ಇನ್ನೊಂದು ಪ್ರಮುಖ ಪಟ್ಟಣ ಮೈಸೂರು. ಅಲ್ಲಿಯೂ 2000 ಕ್ಕೂ ಹೆಚ್ಚು ಕಾರ್ಮಿಕರು ರ‍್ಯಾಲಿಯಲ್ಲಿ ಭಾಗವಹಿಸಿದ್ದು ಸಿಐಟಿಯು, ಎಐಟಿಯುಸಿ, ಎಲ್ಐಸಿ, ರೈಲ್ವೆ ಮೊದಲಾದ ಕಾರ್ಮಿಕ ಮುಖಂಡರು ಭಾಗವಹಿಸಿದ್ದರು. ಅಂಗನವಾಡಿ ನೌಕರರು ಪ್ರತ್ಯೇಕವಾಗಿ ಬೆಳಗ್ಗೆ ಪ್ರತಿಭಟನೆ ನಡೆಸಿದ ವರದಿ ಇದೆ.

ಎಲ್ಲಾ ಪ್ರದೇಶಗಳಲ್ಲೂ ಬ್ಯಾಂಕ್ ಮತ್ತು ಎಲ್ಐಸಿ ಮತ್ತು ಇತರೆ ಮಧ್ಯಮವರ್ಗದ ನೌಕರರು ಉತ್ಸಾಹದಿಂದ ಭಾಗವಹಿಸಿದ ವರದಿಗಳು ಬಂದಿವೆ. ತಾವೂ ಕಾರ್ಮಿಕ ವರ್ಗದ ಅವಿಭಜಿತ ಅಂಗ ಎಂಬುದನ್ನು ತೋರಿಸಿದ್ದಾರೆ.

ಈ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವುದು, ವಿಸ್ತಾರಗೊಳಿಸುವುದು ಅತಿ ಅವಶ್ಯ. ಪ್ರತಿಭಟನೆಯ ಮಹಾಪೂರವನ್ನು ನೋಡಿದರೆ ಇದು ಕಷ್ಟಸಾಧ್ಯವಾಗದು. ದುಡಿಯುವ ಜನರ ಹೋರಾಟದ ಕೆಚ್ಚನ್ನು ಗಮನಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ಕಾಯಿದೆಗಳಿಂದ ಹಿಂದೆ ಸರಿಯಲೇ ಬೇಕೆಂದು, ಇಲ್ಲವಾದಲ್ಲಿ ಎಚ್ಚೆತ್ತ ಕಾರ್ಮಿಕ ವರ್ಗ ಅಖಿಲ ಭಾರತ ಮಟ್ಟದಲ್ಲಿ ಇನ್ನೂ ಪ್ರಬಲ ಹೋರಾಟಕ್ಕೆ ಸಿದ್ಧಗುತ್ತಿದೆ.

(ಇತರೆಡೆ ನಡೆದ ಪ್ರತಿಭಟನೆಗಳ ವರದಿ ಮುಂದಿನವಾರ)



ಮೈಸೂರಿನಲ್ಲಿ

ಕೊಡಗು ಜಿಲ್ಲೆ

ಕೊಡಗು ಜಿಲ್ಲೆಯಲ್ಲಿ ತಲತಲಾಂತರಗಳಿಂದ ವಾಸಿಸುತ್ತಿರುವ ಬುಡಕಟ್ಟು ಜನರನ್ನು ಈಗ ಒಕ್ಕಲೆಬ್ಬಿಸಲಾಗುತ್ತಿದೆ. ಅತ್ಯಂತ ಸಮೃದ್ಧವಾದ ಅರಣ್ಯಭೂಮಿಯನ್ನು ಅಡೆತಡೆಯಿಲ್ಲದೆ ಲೂಟಿ ಮಾಡಲು ಬಯಸುವವರ ಸಂಚಿದು. ಆ ಪ್ರದೇಶದ ಪ್ಲಾಂಟೇಶನ್‌ಗಳಲ್ಲಿ ಕೂಲಿಗಳಾಗಿ, ಮನೆಗಳಲ್ಲಿ ಬಿಟ್ಟಿ ಚಾಕರಿ ಮಾಡಬೇಕಾಗಿರುವ ಗಿರಿಜನರು, ಅವರ ಮಹಿಳೆಯರು, ಮಕ್ಕಳು ಲೈಂಗಿಕ ಶೋಷಣೆಗೆ ಬಲಿಯಾಗುತ್ತಿದ್ದಾರೆ. ಇದರ ವಿರುದ್ಧ ಧ್ವನಿ ಎತ್ತಿದವರ ಮೇಲೆ ದಬ್ಬಾಳಿಕೆ. ಇದಕ್ಕೆ ಪೋಲೀಸರು, ಅಧಿಕಾರಿಗಳೂ ಶಾಮೀಲು. ಇಂತಹ ಅಮಾನವೀಯ ಘಟನೆಯ ವರದಿ ಇಲ್ಲಿದೆ.

ಗಿರಿಜನರ ಮೇಲೆ ದೌರ್ಜನ್ಯ ಮಹಿಳೆಯರ ಅತ್ಯಾಚಾರ ಒಕ್ಕಲೆಬ್ಬಿಸಲು ಯತ್ನ

8 ರಿಂದ 12 ಜನರ ಗುಂಪೊಂದು ಗಿರಿಜನರ ಹಾಡಿಗೆ ಬಂದಿತು. ಗುಡಿಸಲೊಂದರೊಳಗೆ ನುಗ್ಗಿತು. ತಾಯಿ ಮತ್ತು 14 ವರ್ಷದ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಎಳೆದಾಡಿತು. ರಾಕ್ಷಸೀ ವರ್ತನೆಯಿಂದ ತಾಯಿ ಮಗಳ ಮೇಲೆ ಅತ್ಯಾಚಾರವೆಸಗಿತು. ತನ್ನ ಹೆಂಡತಿ ಮತ್ತು ಮಗಳ ಮೇಲಿನ ಈ ಅತ್ಯಾಚಾರದ ವಿಷಯ ತಿಳಿದ ರಾಜು ಇದನ್ನು ಪ್ರತಿಭಟಿಸಿದ್ದಕ್ಕೆ ಕಾಲು ಮುರಿಯಿತು. ಬಾಲ ಬಿಚ್ಚಿದರೆ ಕೊಲ್ಲುವುದಾಗಿ ಬೆದರಿಸಿದರು. ಸ್ಥಳ ಖಾಲಿ ಮಾಡುವಂತೆ ಎಚ್ಚರಿಕೆ ನೀಡಿ ಅಲ್ಲಿಂದ ಕಾಲ್ಕಿತ್ತರು.

ಇದು ಉತ್ತರಪ್ರದೇಶ ಅಥವಾ ಬಿಹಾರದ ಯಾವುದೇ ಒಂದು ಮೂಲೆಯಲ್ಲಿ ನಡೆದ ಘಟನೆಯಲ್ಲ. ಕೊಡಗು ಜಿಲ್ಲೆಯ ವಿರಾಜ ಪೇಟೆ ತಾಲೂಕಿನ ತಿತಿಮತಿ ಗ್ರಾಮದ ಮಡೆನೂರು ಗಿರಿಜನ ಹಾಡಿಯಲ್ಲಿ ನಡೆದ ನಾಗರೀಕರು ತಲೆ ತಗ್ಗಿಸುವಂತಹ ಘಟನೆ. ಜೂನ್ 14 ರಂದು ನಡೆದ ಈ ಘಟನೆಯಲ್ಲಿ ಸರ್ಕಾರ ಮತ್ತು ಭೂಕಬಳಿಕೆದಾರರ ವ್ಯವಸ್ಥಿತ ಪಿತೂರಿ ಅಡಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ರಕ್ತದ ಮಡುವಿನಲ್ಲಿ ಇಡೀ ರಾತ್ರಿ

ರಾಜುವಿನ ಮೇಲೆ ಹಲ್ಲೆ ನಡೆಸಿದ ಮಲೆಯಾಳಿ ಸುರೇಂದ್ರ, ಮುದ್ದಿಯಡ ತಿಮ್ಮಯ್ಯನೆಂಬ ಗೂಂಡಾಗಳು ಆತನ ಹೆಂಡತಿ ಮತ್ತು 14 ವರ್ಷದ ಮಗಳನ್ನು ಕಾಡಿನೊಳಗೆ ಎಳೆದೊಯ್ದರು. ಹೋಗುವ ಮುಂಚೆ ಹಾಡಿಯಲ್ಲಿದ್ದ ಗಿರಿಜನರನ್ನು ಬೆದರಿಸಿ ಜಾಗ ಖಾಲಿ ಮಾಡುವಂತೆ ಹೇಳಿದರು.

ಇತ್ತ ರಾಜು ದುಷ್ಕರ್ಮಿಗಳ ಹಲ್ಲೆಯಿಂದ ತೀವ್ರ ರಕ್ತ ಸ್ರಾವದಲ್ಲಿ ನರಳತೊಡಗಿದ. ಆತನ ಒಂದು ಕಾಲು ಮುರಿದಿತ್ತು. ಆತನನ್ನು ಆಸ್ಪತ್ರೆಗೆ ಸಾಗಿಸಲು ಅಲ್ಲಿನ ಜನರು ಹೆಣಗಾಡಿದರು. ಆಗ ರಾತ್ರಿ 8.30 ಗಂಟೆ ಸುತ್ತಲೂ ಕಾಡಿನಲ್ಲೆಲ್ಲಾ ಕಗ್ಗತ್ತಲು, ಆಸ್ಪತ್ರೆಗೆ ಹೋಗಬೇಕಾದರೂ ಆ ರಾತ್ರಿಯಲ್ಲಿ ಕಾಡಿನೊಳಗೆ 15 ಕಿ.ಮಿ. ನಡೆಯಬೇಕಿತ್ತು. ಕಾಡು ಮೃಗಗಳ ಭಯ. ಬೆಳಗಾಗುವವರೆಗೆ ಹಾಗೇಯೇ ಇರಲು ಸಾಧ್ಯವಿಲ್ಲ. ಕೊನೆಗೆ ರಾಜುವಿನ ತಂದೆ ಅರಣ್ಯ ಇಲಾಖೆಯ ಅಧಿಕಾರಿಯ ಬಳಿ ಹೋದರು. ತಮ್ಮ ಮಗನ ಸ್ಥಿತಿ ವಿವರಿಸಿ ಅಧಿಕಾರಿಯ ವಾಹನ ಕಳುಹಿಸಲು ಕೋರಿದರು. ಆದರೆ ಅಧಿಕಾರಿಯ ಕಲ್ಲು ಹೃದಯ ಕರಗಲಿಲ್ಲ. ವಾಹನ ಕಳುಹಿಸಲು



ಹಲ್ಲೆಗೊಳಗಾದ ರಾಜು ತನ್ನ ತಾಯಿಯೊಂದಿಗೆ

ಆಗಲಾರದೆಂದು ನಿರಾಕರಿಸಿದರು. ದಾರಿ ಕಾಣದ ಜನ ಮರು ದಿನ ಬೆಳಿಗ್ಗೆ ಪಕ್ಕದ ಊರಿಗೆ ಹೋಗಿ ವಾಹನವೊಂದನ್ನು ತಂದು ಗೋಣಿಕೊಪ್ಪ ಆಸ್ಪತ್ರೆಗೆ ದಾಖಲಿಸಿದರು. ಆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಜಿಲ್ಲಾ ಕೇಂದ್ರ ಮಡಿಕೇರಿಯ ಆಸ್ಪತ್ರೆಗೆ ದಾಖಲಿಸಿದರು. ಹಲ್ಲೆ ನಡೆದು 12 ಗಂಟೆಗಳ ಕಾಲ ಯಾವುದೇ ಚಿಕಿತ್ಸೆಯಿಲ್ಲದೆ ರಾಜು ನರಳಾಡುವಂತಾಯ್ತು. ಕಂಪ್ಯೂಟರ್ ಯುಗದಲ್ಲೂ ಸಾರಿಗೆ ಸೌಲಭ್ಯವಿಲ್ಲದೆ ರಕ್ತದ ಮಡುವಿನಲ್ಲಿ ಒಂದು ರಾತ್ರಿ ಕಳೆಯಬೇಕಾದ ದುರ್ಗತಿ ರಾಜುವಿನ ಪಾಲಿಗೆ ಬಂತು.

ದೂರು ದಾಖಲಿಸಲು ಪೋಲೀಸರ ನಿರಾಕರಣೆ

ಅತ್ಯಾಚಾರಕ್ಕೆ ಒಳಗಾದ ಮಹಿಳೆ ಚೋಮಿ ಪೋಲೀಸರಿಗೆ ದೂರು ನೀಡಿದಳು. ತನ್ನ ಮತ್ತು ತನ್ನ ಮಗಳು ರೀನಾಳ ಮೇಲೆ ಗೂಂಡಾಗಳು ನಡೆಸಿದ ಅತ್ಯಾಚಾರದ ಬಗ್ಗೆ ಹೇಳಿದಳು. "ನನ್ನ ಗಂಡ ಕೂಲಿ ಕೆಲಸಕ್ಕೆ ಹೋಗಿದ್ದರು. ಅತ್ತ ಯಾರೂ ಮನೆಯಲ್ಲಿರದ ಸಮಯದಲ್ಲಿ ಈ ಕೃತ್ಯ ಎಸಗಿದ್ದಾರು" ಎಂದು ದೂರಿದರು. ಅತ್ಯಾಚಾರವೆಸಗಿದವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕೇಳಿದರು. ಗಿರಿಜನರನ್ನು ಪಶುಗಳಂತೆ ಕಾಣುವ ಈ ವ್ಯವಸ್ಥೆಯ ಕಾವಲುಗಾರರಾದ ಪೋಲೀಸರು ಗಿರಿಜನ ಮಹಿಳೆಯ ಕಣ್ಣೀರಿಗೆ ಬೆಲೆ ಕೊಡಲಿಲ್ಲ. ದೂರು ದಾಖಲಿಸಲಿಲ್ಲ. ಮತ್ತೇ ಕೇಳಿದರೆ ನಿರಾಕರಿಸಿದರು. ಅತ್ಯಾಚಾರಕ್ಕೆ ಒಳಗಾದವರನ್ನು ಪರೀಕ್ಷಿಸಿದ ವೈದ್ಯರೂ ಅದರ ಫಲಿತಾಂಶ ಹೇಳುವ ಧೈರ್ಯ ತೋರಲಿಲ್ಲ. ಪೊನ್ನಂಪೇಟೆ ಪೋಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಗಣೇಶ ಎಂಬುವರು ಈ ಸಮಾಜಘಾತುಕ ಶಕ್ತಿಗಳೊಡನೆ ಶಾಮೀಲಾಗಿ ಅವರ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲ. ಈ ಬಗ್ಗೆ ತೀವ್ರವಾಗಿ ಟೀಕಿಸಿದ ಪತ್ರಿಕೆಗಳ ಬಾಯಿ ಮುಚ್ಚಿಸಲು ವೀಡಿಯೋ ರೆಕಾರ್ಡ್ ಮಾಡಲಾಗಿದೆ ಯೆಂದರು. ಆದರೆ ಅತ್ಯಾಚಾರಕ್ಕೆ ಒಳಗಾದವರ ಹೇಳಿಕೆ ಬದಲು ರಾಜುವಿನ ಮಾತುಗಳಷ್ಟೇ ರೆಕಾರ್ಡ್ ಮಾಡಲಾಗಿದೆ ಎಂದು ತಿಳಿದಿದೆ.

ಪ್ರಜಾಪ್ರತಿನಿಧಿಗಳ ಉದಾಸೀನತೆ:

ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಶ್ರೀಮತಿ ಚಂದ್ರಕಲಾ ಗಿರಿಜನ ಕಾಡಿಗೆ ಭೇಟಿ ನೀಡಿ ಇಲ್ಲಿನ ಭಯ ಬೀತ ಜನರಿಗೆ ಸಾಂತ್ವನ ಹೇಳುವ ನೆಪದಲ್ಲಿ ಆ ಜನರನ್ನು ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಿದ್ದಾರೆ. "ಇದು ನಿಮಗೆ ವಾಸ ಮಾಡಲು ಸುರಕ್ಷಿತ ಸ್ಥಳವಲ್ಲ. ನೀವು ಸದಾ ಭಯದಿಂದ ಬದುಕಬೇಕಾಗಿದೆ. ಆದ್ದರಿಂದ ನಿಮ್ಮನ್ನು ಬೇರೆ ಕಡೆ ಕಳುಹಿಸಲು ವ್ಯವಸ್ಥೆ ಮಾಡುತ್ತೇನೆ" ಎಂದು ಹೇಳಿ ತಮ್ಮ ನಿಜ ಬಣ್ಣ ಬಯಲು ಮಾಡಿದ್ದಾರೆ. ಸಮಾಜಘಾತುಕ ಶಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಅಥವಾ ಗಿರಿಜನರಿಗೆ ರಕ್ಷಣೆ ಒದಗಿಸುವ ಯಾವ ಭರವಸೆಯನ್ನೂ ಅವರು ನೀಡಲಿಲ್ಲ.

ಈ ಕ್ಷೇತ್ರದ ಶಾಸಕಿ ಮತ್ತು ಸಚಿವೆಯಾದ ಸುಮಾವಸಂತರವರು ಮಹಿಳೆಯರ ರಕ್ಷಣೆಗೆ ಮುಂದಾಗಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಎಂ.ಎಂ. ನಾಣಯ್ಯನವರಿಗಂತೂ ಈ ವಿಷಯ



ಅತ್ಯಾಚಾರಕ್ಕೊಳಗಾದ ತಾಯಿ ಚೋಮೀ ಮಗಳು ರೀನಾ

ತಿಳಿದೇ ಇಲ್ಲವಂತೆ! ಅವರು ವಿಚಾರಿಸಿಕೊಂಡ ನಂತರವಷ್ಟೇ ಹೇಳಿಕೆ ನೀಡಬಲ್ಲರಂತೆ. ಹೇಗಿದೆ? ಆಧುನಿಕ ಕಂಪ್ಯೂಟರ್ ಮಾಹಿತಿ ತಂತ್ರಜ್ಞಾನ ಸಚಿವರ ವೈಖರಿ?

ಡಿ.ವೈ.ಎಫ್.ಐ. ನಿಂದ ಹೋರಾಟ

ಸರ್ಕಾರ ಮತ್ತು ವಿದೇಶಿ ಸಂಸ್ಥೆಗಳ ಈ ಪಿತೂರಿಯನ್ನು ಬಯಲಿಗೆಳೆದಿರುವ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಮತ್ತು ಸಿ.ಪಿ.ಐ.(ಎಂ) ಇಲ್ಲಿನ ಗಿರಿಜನರ ನಡುವೆ ಕೆಲಸ ಆರಂಭಿಸುವ ನಾಗರಹೊಳೆ ಅಭಯಾರಣ್ಯದಿಂದ ಗಿರಿಜನರನ್ನು ಒಕ್ಕಲೆಬ್ಬಿಸಬಾರದು ಅವರಿಗೆ ಅಲ್ಲಿಯೇ ಉತ್ತಮ ವ್ಯವಸ್ಥೆ ಮಾಡಿ ಕೊಡುವು ದರ ಮೂಲಕ ಅವರನ್ನು ಉತ್ತಮ ಪ್ರಜೆಗಳನ್ನಾಗಿ ಮಾಡಬೇಕು.. ಅವರಿಗೆ ಶಿಕ್ಷಣ, ಆರೋಗ್ಯ ನೀಡ ಬೇಕು. ತಲಾತಲಾಂತರಗಳಿಂದ ವಾಸಮಾಡುತ್ತಿರುವ ಬುಡಕಟ್ಟು ಜನಾಂಗಕ್ಕೆ ಅವರು ವಾಸ ಮಾಡುವ ಸ್ಥಳಕ್ಕೆ 'ಪಟ್ಟಾ' ನೀಡಬೇಕು. ಸರ್ಕಾರದ ಎಲ್ಲಾ ಸೌಲಭ್ಯವೂ ಇವರಿಗೂ ಸಿಗಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದೆ.

ಭೂಮಿ ಕಬಳಿಸಲು ತವಕಿಸುತ್ತಿರುವ ಸ್ವದೇಶಿ ಹಾಗೂ ವಿದೇಶಿ ವರ್ಗಾಕೋರರು ಹೀಗೆ ಗಿರಿಜನರನ್ನು ಬೆದರಿಸುವ ಮೂಲಕ ಒಕ್ಕಲೆಬ್ಬಿಸಲು ಮುಂದಾಗಿದ್ದಾರೆ.

ಇಲ್ಲಿ ನೆಮ್ಮದಿಯಿಂದ ಬದುಕುವುದು ಸಾಧ್ಯವೇ ಇಲ್ಲದಂತಹ ವಾತಾವರಣ ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ. ಅಲ್ಲದೇ ಗಿರಿಜನರನ್ನು ಮನಬಂದಂತೆ ಬಿಟ್ಟಿ ಚಾಕರಿಗೂ ಬಳಸುವುದಲ್ಲದೇ ಲೈಂಗಿಕವಾಗಿಯೂ ಶೋಷಿಸಲಾಗುತ್ತಿದೆ. ಇದನ್ನು ರಾಜು ಪ್ರತಿಭಟಿಸಿದ್ದರು ಎಂಬುದು ಒಂದು ಕಾರಣವಿದೆ. ಅದರ ಒಂದು ಭಾಗವೇ ಈ ತಾಯಿ ಮಗಳ ಮೇಲಿನ ಸಾಮೂಹಿಕ ಅತ್ಯಾಚಾರ.

ಈ ಘಟನೆ ನಡೆದ ಸುದ್ದಿ ತಿಳಿಯುತ್ತಿದ್ದಂತೆಯೇ ಡಿವೈಎಫ್‌ಐ ಮತ್ತು ಸಿಪಿಐ(ಎಂ)ನ ತಂಡವು ಸ್ಥಳಕ್ಕೆ ಭೇಟಿನೀಡಿತು. ಮತ್ತು ಪೋಲೀಸ್ ಅಧಿಕಾರಿಗಳಿಗೆ ನಿಷ್ಠುರ ಕ್ರಮವಹಿಸಲು ಆಗ್ರಹಿಸಲಾಗಿದೆ. ಇತ್ತೀಚೆಗೆ 20 ರಂದು ಮಾಧ್ಯಮ ತಂಡವನ್ನು ಸಹ ಅಲ್ಲಿಗೆ ಕರೆದೊಯ್ಯಲಾಗಿತ್ತು. 26 ರಂದು ನೊಂದ ಆ ಗಿರಿಜನರ ತಂಡವು ಗೃಹಸಚಿವ ಮಲ್ಲಿಕಾರ್ಜುನ ಖರ್ಗೆಯವರನ್ನು ಮನೆಯಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿತು. ಈ ಪ್ರಕರಣವನ್ನು ಸಿಒಡಿ ತನಿಖೆಗೆ ಒಪ್ಪಿಸುವುದಾಗಿ ಅವರು ಭರವಸೆ ನೀಡಿದ್ದಾರೆ.

- ಇಗ್ಗುತಪ್ಪ

ಒಕ್ಕಲೆಬ್ಬಿಸುವ ವ್ಯವಸ್ಥಿತ ಪಿತೂರಿ

ನಾಗರ ಹೊಳೆ ಅಭಯಾರಣ್ಯ ಕೊಡಗು ಮತ್ತು ಮೈಸೂರು ಈ ಎರಡು ಜಿಲ್ಲೆಗಳಲ್ಲಿ ಹರಡಿಕೊಂಡಿದೆ. ನೂರಾರು ವರ್ಷಗಳು ಅನೇಕ ತಲೆಮಾರುಗಳಿಂದ ಅರಣ್ಯದ ನಡುವೆ ಅಲ್ಲಲ್ಲಿ ಗಿರಿಜನರು ವಾಸವಾಗಿದ್ದಾರೆ. ಕಾಡಿನಲ್ಲಿ ಸಿಗುವ ಗೆಡ್ಡೆ, ಗೆಣಸುಗಳನ್ನು ತಿನ್ನುತ್ತಾ ಜೀವನ ಸಾಗಿಸುವುದರ ಜೊತೆಗೆ ಅಲ್ಲಿನ ಅಲ್ಪಸ್ವಲ್ಪ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ. ಕಾಡಿನ ಕೆಲವು ಉತ್ಪನ್ನಗಳ ಮಾರಾಟ ಹಾಗೂ ಕೆಲವರು ತೋಟಗಳಲ್ಲಿ ಕೂಲಿಯಾಳುಗಳಾಗಿ ದುಡಿಸುವುದು ಮಾತ್ರವೇ ಆಧಾರವಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉದಾರೀಕರಣ ನೀತಿಯು ಅಭಯಾರಣ್ಯದಲ್ಲಿ ಕಾಡು ಮೃಗಗಳ ನಡುವೆ ಕಷ್ಟದ ಜೀವನ ನಡೆಸುತ್ತಿರುವ ಈ ಮಾನವರನ್ನು ಬೆನ್ನಟ್ಟಿದೆ. ಪ್ರವಾಸೋಧ್ಯಮ ಅಭಿವೃದ್ಧಿ ಹೆಸರಿನಲ್ಲಿ ಅಭಯಾರಣ್ಯದಲ್ಲಿ ನೂರಾರು ವರ್ಷಗಳಿಂದ ಬದುಕು ಸಾಗಿಸುತ್ತಿರುವ ಜನರನ್ನು ಒಕ್ಕಲೆಬ್ಬಿಸಲು ರೆಸಾರ್ಟ್‌ಗಳ ನಿರ್ಮಾಣಕ್ಕೆ ಆ ಜಮೀನನ್ನು ದೊಡ್ಡ ದೊಡ್ಡ ಬಂಡವಾಳಶಾಹಿಗಳಿಗೆ ವಿದೇಶಿಯರಿಗೆ ಒಪ್ಪಿಸಲು ಸರ್ಕಾರದ ಆಳುವ ಮಂದಿ ತುದಿಗಾಲಲ್ಲಿ ನಿಂತಿದ್ದಾರೆ.

ಹಿಂದೆ ತಾಜ್ ಹೋಟೆಲ್‌ಗೆ ಜಾಗ ನೀಡಲು ಸರ್ಕಾರ ಮುಂದಾಗಿತ್ತು. ಆದರೆ ಜನರ ಪ್ರತಿಭಟನೆಯಿಂದ ಕೊನೆಗೆ ರದ್ದುಪಡಿಸಬೇಕಾಗಿ ಬಂದಿತ್ತು.

ಸರ್ಕಾರದ ಈ ನೀತಿಯಿಂದಾಗಿ ಆತಂಕಕ್ಕೊಳಗಾಗಿರುವ ಸಾವಿರಾರು ಕುಟುಂಬಗಳ ಪೈಕಿ ಯಡೆಯೂರು ಗಿರಿಜನ ಕಾಡಿಯಲ್ಲಿ ವಾಸಿಸುವ 130 ಕುಟುಂಬಗಳು ಸೇರಿವೆ. ಇವರಲ್ಲಿ 123 ಕುಟುಂಬ ಜೇನು ಕುರುಬರು, 5 ಕುಟ್ಟುಂಬ ಪಂಜರಿ ಎರವರು. ಶತಮಾನಗಳಿಂದ ಕಾಡಿನೊಳಗೆ ಜೀವಿಸಿಕೊಂಡು ಕಾಡು ರಕ್ಷಣೆ, ಪ್ರಾಣರಕ್ಷಣೆ ಮಾಡಿಕೊಂಡು ಅಕ್ಕ ಪಕ್ಕದ ಊರಿನಲ್ಲಿ ಕಾಫಿ ತೋಟಗಳಲ್ಲಿ ಕೂಲಿ ಮಾಡಿ ಜೀವಿಸುತ್ತಿದ್ದಾರೆ. ಸರ್ಕಾರದಿಂದ ಇವರಿಗೆ ಜನತಾಮನೆಗಳು ಬೋರವೆಲ್‌ಗಳು, ಶಾಲೆ, ಅಂಗನವಾಡಿ, ವ್ಯವಸ್ಥೆಯೇನೂ ಇದೆ. ಅವುಗಳ ಪ್ರಯೋಜನ ಎಷ್ಟೆಂದು ಅಳೆಯಬೇಕಷ್ಟೇ. ವಿರಾಜಪೇಟೆ ತಾಲೂಕು ತಿತಿಮತಿ ಸಮೀಪ ರಾಜೀವಗಾಂಧಿ ನಾಗರಹೊಳೆ ಅಭಯಾರಣ್ಯ ಪ್ರದೇಶದಲ್ಲಿ 1500 ಕ್ಕೂ ಹೆಚ್ಚು ಕುಟುಂಬಗಳನ್ನು ಒಕ್ಕಲೆಬ್ಬಿಸಲು 5-6 ವರ್ಷಗಳಿಂದ ಅರಣ್ಯ ಇಲಾಖೆಯ ಜೊತೆ ಕೆಲವು ವಿದೇಶಿ ಹಣದ ಸ್ವಯಂ ಸೇವಾ ಸಂಘಗಳು ಕೈಜೊಡಿಸಿ ಪ್ರಯತ್ನಿಸುತ್ತಿವೆ. ಆದರೆ ಪ್ರತಿಭಟನೆ ಯಿಂದಾಗಿ ಒಕ್ಕಲೆಬ್ಬಿಸಲು ಸುಲಭವಾಗಿಲ್ಲ.

ನಿಲ್ಲಿಸಿ ಈ ಹೆಣ್ಣು ಭ್ರೂಣ ಹತ್ಯೆ

ಕೆ.ಎಸ್.ವಿಮಲಾ

ಸರ್ಕಾರ ಇತ್ತೀಚೆಗೆ ಪ್ರಕಟಿಸಿದ ವರದಿ ಬೆಚ್ಚಿ ಬೀಳಿಸುವಂತಿದೆ. ಪುರುಷರ ಸಂಖ್ಯೆಗಿಂತ ಮಹಿಳೆಯರ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದೆ. ಅದರಲ್ಲೂ 1 ರಿಂದ 6 ವರುಷದ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗಿರುವುದು. ಇದ್ದೇಕೆ ಹೀಗೆ? ಈ ತಾರತಮ್ಯದ ಒಳ ಹೊರಗುಗಳನ್ನು ಬಿಡಿಸಿದ್ದಾರೆ ಮಹಿಳಾ ಸಂಘದ ಪ್ರಧಾನ ಕಾರ್ಯದರ್ಶಿ.


ಹೆಣ್ಣು ಹೆಣ್ಣೆಂದೇಕೆ ಜರೆಯುವಿರಿ
ಕಣ್ಣು ಕಾಣದ ಗಾವಿಲರೇ
ನಿಮ್ಮನ್ನು ಹಡೆದ ತಾಯಿ ಹೆಣ್ಣಲ್ಲವೇ?

- ಸಂಚಿ ಹೊನ್ನಮ್ಮ

ಹೆಣ್ಣು! ಹೆಣ್ಣು ? ಹೌದು ಹೆಣ್ಣು, ಹೆಣ್ಣಂತೆ ಅಯ್ಯೋ ಪಾಪ ಹೆಣ್ಣಂತೆ.... ಹೆಣ್ಣು ಮಗುವಿಗೆ ಈ ಪ್ರಪಂಚಕ್ಕೆ ಕಾಲಿಡುವಾಗಲೇ ಸಿಗುವ ಸ್ವಾಗತದ ಮಾತುಗಳಿವು. ಅತ್ಯಂತ ಮುಂದುವರಿದ ತಂತ್ರಜ್ಞಾನದ ಮಾತುಗಳನ್ನಾಡುತ್ತಲೇ ಸಭ್ಯ ಸಂಸ್ಕೃತಿ, ನಾಗರಿಕತೆಯ ಮಗ್ಗಲಲ್ಲಿಯೇ ಹೆಣ್ಣುಮಗುವಿನ ಕ್ರೂರಹತ್ಯೆಯೂ ಅವ್ಯಾಹತವಾಗಿ ನಡೆಯುತ್ತಲೇ ಇದೆ.

"ಹೆಣ್ಣಾಗಿ ಹುಟ್ಟೋದಕ್ಕಿಂತ, ಮಣ್ಣಾಗಿ ಹುಟ್ಟಿದರೆ ಮಣ್ಣೀನ ಮೇಲೆ ಸೌತೇಯ ಬೆಳೆದು ತಣ್ಣಗೆ ರಡ್ಡಣ್ಣ ತಿನಲಕ್ಕು" ಎನ್ನುವ ಜನಪದ ಸಾಲುಗಳೂ ಹೆಣ್ಣಿನ ಬವಣೆಯನ್ನು ಬಿಂಬಿಸುತ್ತವೆ.

ಮುಂದುವರಿದ ವಿಜ್ಞಾನ, ತಂತ್ರಜ್ಞಾನಗಳೂ ಕೂಡ - ಹೆಣ್ಣಿಗೆ ಶಾಪವಾಗಿಯೇ ಬಂದೊದಗಿದ ಉದಾಹರಣೆಗೆ **'ಅಮ್ನಿಯೋ ಸಿಂಥೆಸಿಸ್'** ವಿಧಾನವನ್ನು ಉಲ್ಲೇಖಿಸಬಹುದು. "ಎಲ್ಲ ಶಿಶುಗಳಿಗೂ ಸುರಕ್ಷೆಯ ಭದ್ರಕೋಟೆಯಾದ ತಾಯ ಗರ್ಭವನ್ನೇ ಬಗೆದು ಪರೀಕ್ಷೆಗೆ ಒಳಪಡಿಸುವ ಈ ಕ್ರಿಯೆ - ಸೃಷ್ಟಿಯಾಗಿದ್ದು ಗರ್ಭಸ್ಥ ಶಿಶುವಿನ ಸರ್ವಾಂಗ ಸ್ವಸ್ಥ ಪರೀಕ್ಷೆಗಾಗಿಯಾದರೂ - ಅದರ ದುರ್ಬಳಕೆಯಾಗುತ್ತಿರುವುದು ಭ್ರೂಣದ ಲಿಂಗ ಪರೀಕ್ಷೆಗೆ. ಹೀಗೆ *ಅನಾದಿಕಾಲದಿಂದ ಹೆಣ್ಣಿನ ಬಗೆಗಿರುವ ಅನಾದರ, ಅಸಡ್ಡೆ ಮತ್ತು ವಿಜ್ಞಾನದ ದುರ್ಬಳಕೆ ಮುಂದುವರಿದ ಹಂತವೇ ಲಿಂಗ ಅನುಪಾತದಲ್ಲಿ ಗಣನೀಯ ಇಳಿಕೆಗೆ ಕಾರಣ.*



ಬೆಚ್ಚಿಬೀಳಿಸುವ ವರದಿ

ಮಾರ್ಚ್ 1, 2001 ರ ಶೂನ್ಯ ವೇಳೆಗೆ ದೇಶದ ಜನಸಂಖ್ಯೆ 1027 ಮಿಲಿಯಕ್ಕೆ ತಲುಪಿದೆ. ಅಂತೆಯೇ 21ನೇ ಶತಮಾನದ ಜನಗಣತಿಯ ವರದಿಯೂ ಪೂರ್ಣಗೊಂಡಿದೆ. ಗಣತಿಯ ಪ್ರಕಾರ 531 ಮಿಲಿಯ ಗಂಡಸರು, 496 ಹೆಂಗಸರು ದೇಶದಲ್ಲಿದ್ದು - ಒಟ್ಟಾರೆ ಲಿಂಗ ಪರಿಮಾಣದಲ್ಲಿ 1000 ಪುರುಷರಿಗೆ 933 ಮಹಿಳೆಯರಿದ್ದಾರೆ. 1991 ರ ಗಣತಿಗೆ ಹೋಲಿಸಿದರೆ - ಮಹಿಳೆಯರ ಪ್ರಮಾಣದಲ್ಲಿ ಒಂದಿಷ್ಟು ಏರಿಕೆ ಕಂಡು ಬಂದಿದೆಯಾದರೂ ಒಟ್ಟು ಸಂದರ್ಭದಲ್ಲಿ - ಅತಿದೊಡ್ಡ ಕಂದರವನ್ನು ಮುಂದಿನ ದಿನಗಳಲ್ಲಿ ಸೃಷ್ಟಿಸ ಬಹುದಾದ ಮುನ್ಸೂಚನೆಯನ್ನು ನೀಡಿದೆ. ಈ ಆತಂಕಕ್ಕೆ ಕಾರಣವೆಂದರೆ 1 ರಿಂದ 6 ವರ್ಷ ವಯೋಮಾನದ ಹೆಣ್ಣು ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಎಂದರೆ ಮಹಿಳಾ ಮತ್ತು ಪ್ರಗತಿಪರ ಹೋರಾಟಗಳ ಹಿನ್ನೆಲೆಯಲ್ಲಿ ಲಭ್ಯವಾದ ಕನಿಷ್ಟ ಸೌಲಭ್ಯಗಳಿಂದಾಗಿಯೇ ಮಹಿಳೆಯರ ಮರಣ ಪ್ರಮಾಣದಲ್ಲಿನ ಇಳಿಕೆ ಒಂದು ಸಮಾಧಾನಕರ ಅಂಶವಾದರೂ - ಹೆಣ್ಣು ಮಕ್ಕಳ ಪರಿಮಾಣದಲ್ಲಿ ಕಂಡುಬರುತ್ತಿರುವ ಗಣನೀಯ ಇಳಿಕೆ ಗಾಬರಿ ಹುಟ್ಟಿಸುತ್ತಿದೆ.

(1991 ರಲ್ಲಿ - 1000 - 945 - 2001 ರಲ್ಲಿ - 1000-927)

ಲಿಂಗ ಪರೀಕ್ಷೆ ಕಾನೂನುಬಾಹಿರ ಆದರೆ...

ಅಮ್ನಿಯೋ ಸಿಂಥೆಸಿಸ್ ನ್ನು ಲಿಂಗ ಪರೀಕ್ಷೆಗೆ ಬಳಸುವುದನ್ನು ಕಾನೂನಿನ ಪ್ರಕಾರ ನಿಷೇಧಿಸಲಾಗಿದೆಯಾದರೂ, ಸತತವಾಗಿ ಆ ಕ್ರಿಯೆ ನಡೆಯುತ್ತಲೇ ಇದೆ. ಮಾಡುವ ಮಾಡಿಸಿಕೊಳ್ಳುವ ಎಲ್ಲರಿಗೂ ಇದೊಂದು ಕಾನೂನುಬಾಹಿರ ಕ್ರಿಯೆ ಎಂದು ಗೊತ್ತೇ ಇದ್ದೂ, ಹಾಗೆ ನಡೆಯುತ್ತಿದೆ ಎಂಬುದು ಪ್ರಭುತ್ವದ ಗಮನಕ್ಕೆ ಇದ್ದರೂ ತೆರೆಯ ಮರೆಯಲ್ಲಿ ಇವೆಲ್ಲ ನಡೆಯುತ್ತಲೇ ಇದೆ. ಹೀಗೊಂದಾದರೆ ಹುಟ್ಟಿದ ಹೆಣ್ಣು ಮಗುವನ್ನು ಅಮಾನುಷವಾಗಿ ಕೊಲ್ಲುವ ಕ್ರಿಯೆಗೆ ಕೂಡ ಮೌನ ಸಾಮಾಜಿಕ ಸಮ್ಮತಿ ದೊರಕಿದೆ ಎನ್ನುವುದು ತಮಿಳ್ನಾಡಿನಂತಹ ರಾಜ್ಯಗಳಿಂದ ಬರುತ್ತಿರುವ ವರದಿಗಳು ನಮಗೆ ತಿಳಿಸುತ್ತವೆ.

ದಾರುಣ ಹತ್ಯೆಗಳು

80 ರ ದಶಕದಲ್ಲಿಯೇ ಒಂದು ದೊಡ್ಡ ಸುದ್ದಿ ಮಾಡಿದ, ಪತ್ರಿಕೆಗಳಲ್ಲಿ ಪ್ರಮುಖ ಸುದ್ದಿಯಾದ ಹೆಣ್ಣು ಶಿಶು ಹತ್ಯೆ ಇಂದಿಗೂ ನಡೆಯುತ್ತಿದೆ. ಎಳೆಯ ಕೂಸಿಗೆ ಭತ್ತದ ಕಾಳು ನುಂಗಿಸಿ ಅದು ಉಸಿರು ಕಟ್ಟಿಸಾಯುವಂತೆ ಮಾಡುವ ಕ್ರಿಯೆ ಎಂತಹ ಕಲ್ಲೆದೆಯನ್ನು ಕರಗಿಸುತ್ತದೆ. ತನ್ನ ಕರುಳ ಕುಡಿಯನ್ನು ನಿಷ್ಕರುಣೆಯಿಂದ ಕೊಲ್ಲಬೇಕಾದ ಆ ತಾಯಿ ಎಂತಹ ಜೀವ ಸಂಕಟಕ್ಕೆ ಒಳಗಾಗಬಹುದು. ಬಹುಶಃ ಎಲ್ಲೋ ಒಂದು ಕಡೆ ಅಮ್ನಿಯೋ ಸಿಂಥೆಸಿಸ್ ನಂತಹ ಸೌಲಭ್ಯಗಳನ್ನು ಬಳಸಿಕೊಳ್ಳುವ ಶಕ್ತಿ ಪಡೆದ ತಾಯಿಯು - ಜೀವ ತುಂಬುವ ಮೊದಲೇ ಹೊರಹಾಕುವುದನ್ನೇ ಆಯ್ಕೆ ಮಾಡಿ ಕೊಂಡು ಬಿಡುವುದೂ ಈ ಕಾರಣದಿಂದಲೇ ಇರಬಹುದು. *ಬದುಕಿನುದ್ದಕ್ಕೂ ಲಿಂಗ ತಾರತಮ್ಯದ ಭೇದಕ್ಕೆ ಒಳಗಾಗಿಯೇ ಬದುಕುವ, ಸದಾ ಕೀಳರಿಮೆಯಿಂದ ಕಾಡಿಸಿ ಕೊಳ್ಳುವ ಮಹಿಳೆ ತನ್ನ ಕರುಳ ಕುಡಿಯನ್ನು ಕೊಲ್ಲಲಾರೆನೆಂಬ ಸೊಲ್ಲನೆತ್ತುವ ಧೈರ್ಯವನ್ನು ತೋರುವುದಿಲ್ಲ.* ಇದು ಈ ಸಮಾಜ ಮಹಿಳೆಯರನ್ನು ನಡೆಸಿಕೊಂಡಿರುವ ಬಗೆ, ಆದರೆ ಇಂತಹ ಕ್ರಿಯೆಗಳನ್ನು ನಿಲ್ಲಿಸುವ ಸರ್ಕಾರದ ಪ್ರಯತ್ನಗಳೂ ಕೂಡ ಏಕಮುಖ ವಾಗಿರುತ್ತವೆನ್ನುವುದಕ್ಕೆ- ತಮಿಳುನಾಡಿನಲ್ಲಿ ನಡೆದ ಹೆಣ್ಣು ಶಿಶು ಹತ್ಯೆ ಪ್ರಕರಣಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆಯರ (ತಾಯಿ) ಮೇಲೆ ಕಾನೂನು ಕ್ರಮ ಜರುಗಿಸಲಾಗಿದೆ. *ಇಂತಹ ಪ್ರಸಂಗಗಳಿಗೆ ಕಾರಣರಾದ ಕುಟುಂಬದ ಇತರ ಸದಸ್ಯರು ಅಥವಾ ಗಂಡನ ಮೇಲೆ ಕ್ರಮ ತೆಗೆದುಕೊಳ್ಳುವ ಸಂದರ್ಭಗಳು ತೀರಾ ಕಡಿಮೆ.* ಈ ಬರ್ಬರ ಕೃತ್ಯ ಎಸಗುವಾಗ ಅಥವಾ ನಂತರ ತನ್ನ ಬದುಕಿನುದ್ದಕ್ಕೂ ಆ ಮಹಿಳೆ ಎದುರಿಸುವ ಯಾತನೆ, ನೋವುಗಳು ಯಾರ ಲಕ್ಷಕ್ಕೂ ಬರದು. ಅಷ್ಟೇ ಅಲ್ಲ. ಇಡೀ ಸಮಾಜ ಹೆಣ್ಣಿನ ಕುರಿತು ತಳೆದಿರುವ ಈ ಕೆಟ್ಟ ಭಾವನೆ ಕೂಡ ದೊಡ್ಡ ಅಪರಾಧವಾಗಿ ಪರಿಗಣಿಸಲ್ಪಡುತ್ತಿಲ್ಲದಿರುವುದು ಒಂದು ದುರಂತ. ಹೀಗೆ ಒಮ್ಮೆ ಯೋಚಿಸಿದರೆ ಶಿಕ್ಷೆಗೆ ಒಳಗಾದ ಮಹಿಳೆಯರ ಕಥೆ ನಮ್ಮೆದುರು ಮಹಿಳಾ ಶೋಷಣೆಯ ಇತಿಹಾಸವನ್ನೇ ಬಿಚ್ಚಿಡುತ್ತದೆ.

ಹೆಣ್ಣು ಹಡೆದಳಾ....

ಹೆಣ್ಣು ಮಗು ಹಡೆದಳೆಂಬ ಕಾರಣಕ್ಕೆ ಅವಳನ್ನು ನೋಡಲು ಬಾರದಿರುವ, ತವರಿಗಟ್ಟಿರುವ ಪ್ರಕರಣಗಳು ನಮ್ಮಲ್ಲಿಯೇ ಅನೇಕವು ವರದಿಗಳಾಗಿವೆ. ಬಹಳ ಸಂದರ್ಭಗಳಲ್ಲಿ ಪದವೀಧರ ಸುಶಿಕ್ಷಿತ, ಉನ್ನತ ಹುದ್ದೆಗಳಲ್ಲಿರುವ ವ್ಯಕ್ತಿಗಳೂ ಈ ರೀತಿಯ ನಡವಳಿಕೆ ತೋರುತ್ತಾರೆ.

ರತ್ನಮ್ಮ(ಹೆಸರು ಬದಲಿಸಿದೆ) - ಎರಡನೇ ಮಗುವನ್ನೂ ಹೆಣ್ಣು ಹಡದಳೆಂಬ ಕಾರಣಕ್ಕೆ - ಆಕೆಯ ಗಂಡ - (ಪೋಲೀಸ್ ಇಲಾಖೆಯ ಉನ್ನತ ಅಧಿಕಾರಿ) ನಿರಾಕರಿಸಿದಂತಹ ಘಟನೆಗಳು ನನ್ನ ಕಣ್ಣೆದುರಿಗೇ ನಡೆದಿದೆ.

ಇಂತಹ ಹಲವು ಉದಾಹರಣೆಗಳಿವೆ. 20 ರ ವಯಸ್ಸಿನ ಪಾಂಡಿಯಮ್ಮ (ಹೆಸರು ಬದಲಿಸಿದೆ) ಮೊದಲನೆ ಮಗು ಹೆಣ್ಣೆಂಬುದಕ್ಕಾಗಿ 10 ದಿನಗಳವರೆಗೂ ಯಾರೂ ನೋಡಲೂ ಬಾರಲಿಲ್ಲ. ಎರಡನೇ ಬಾರಿ ಗರ್ಭ ಧರಿಸಿದಾಗ. ಹುಟ್ಟುವ ಮಗು ಹೆಣ್ಣಾದರೇ... ಎಂಬ ಭಯದ ನೆರಳಿನಲ್ಲಿಯೇ ದಿನ ಕಳೆದಳು. ಅವಳ ಭಯ ನಿಜವಾಯಿತು. ಆಸ್ಪತ್ರೆಗೆ ನೋಡಲು ಬಂದ ಗಂಡನಿಂದ ಸಿಕ್ಕಿದ್ದು ತಣ್ಣನೆಯ, ನೀರವ ಪ್ರತಿಕ್ರಿಯೆ ತವರು ಮನೆಯಲ್ಲಿ ಒಂದು ತಿಂಗಳು ಕಳೆದರೂ ಗಂಡನ ಮನೆಯಿಂದ ಯಾರೂ ಬಾರದಿದ್ದಾಗ ಗಂಡನಿಗೆ ತಾನಿನ್ನು ಬೇಡದವಳಾದೆನೆಂದು ತಿಳಿದಾಗ ವಿವಶಳಾದ ಪಾಂಡಿಯಮ್ಮ ಪೋಲೀಸರಿಗೆ ಸಿಕ್ಕಿದ್ದು - ಮಗುವಿನ ಶವದೊಂದಿಗೆ. ಯಾಕೆ ಹೀಗೆ ಮಾಡಿದೆ? ಎಂಬ ಪ್ರಶ್ನೆಗೆ ಅವಳ ಉತ್ತರ "ನನಗೆ ಗೊತ್ತಿಲ್ಲ"!. ಇಂತಹ ಹಲವು ಪ್ರಕರಣಗಳು ವರದಿಯಾಗುತ್ತಲೇ ಇವೆ.

ಪುತ್ರಕಾಮೇಷ್ಟಿ ಯಾಗಗಳೇಕೆ?

ಇವೆಲ್ಲವುಗಳ ಹಿಂದಿನ ತತ್ವ ಒಂದೇ, ಹೆಣ್ಣು ಒಂದು ಸಾಮಾಜಿಕ ಹೊರೆ ಎಂಬ ಭಾವನೆ. ಆದರೆ ಹೀಗೆ ತನ್ನ 'ಭವಿಷ್ಯ' ದ ಕತ್ತಲಿಗೆ ಹೆದರಿ ಕರುಳ ಕುಡಿಯನ್ನೇ ಹೊಸಕಿ ಹಾಕುವ ಕ್ರಿಯೆಗೆ ಮಹಿಳೆ ಮುಂದಾಗುವುದೆಂದರೆ ಈ ಭಾವನೆಯಿಂದ ಹೊರ ಬರಲು ಸರ್ಕಾರ ವಹಿಸಬೇಕಾದ ಕ್ರಮಗಳೇನು? ವೈಜ್ಞಾನಿಕವಾಗಿ ವಿಶ್ಲೇಷಿಸುವ, ಮಗುವಿನ *ಲಿಂಗ ನಿರ್ಣಯ ಮಾಡುವ ಅಂಶದ ಕುರಿತು ನೀಡಬೇಕಾದ ತಿಳುವಳಿಕೆಯ ಅಗತ್ಯವನ್ನು ಸರ್ಕಾರ ಅರ್ಥ* ಮಾಡಿಕೊಳ್ಳಬೇಕು. ಮಗುವಿನ ಲಿಂಗ ನಿರ್ಣಯ ಮಾಡುವಲ್ಲಿ ಮಹಿಳೆಗಿಂತ ಪುರುಷನ ಪಾತ್ರವಿರುತ್ತದೆ. ಪುರುಷನ ವೀರ್ಯಾಣುವಿನಲ್ಲಿರುವ - ಮತ್ತು + ಗಳ ಆಧಾರದಲ್ಲಿಯೇ ಮಗುವಿನ ಲಿಂಗ ನಿರ್ಣಯವಾಗುವುದೆಂಬ ಅತ್ಯಗತ್ಯ ತಿಳುವಳಿಕೆಯನ್ನು ಕೊಡುವ ದೊಡ್ಡ ಜವಾಬ್ದಾರಿಯನ್ನು ಸರ್ಕಾರ ಹೊರುವ ಮೂಲಕ ಈ ಲಿಂಗ ಭೇದ ನೀತಿಯನ್ನೂ ತಡೆಗಟ್ಟಬಹುದು. ಲಿಂಗ ಪರಿಮಾಣದ ಅಸಮಾನತೆಯನ್ನು ತಡೆಯಬಹುದು.

ಅಂತೆಯೇ 'ಪುರುಷ' ಪ್ರಧಾನ ಎಂಬ ಹುಸಿ ನಂಬಿಕೆಯ ವಿರುದ್ಧದ ಸಮರ ಕೂಡ - ಜನಸಂಖ್ಯಾ ನಿಯಂತ್ರಣಕ್ಕೆ ಒಂದು ಸುಲಭ ಮಾರ್ಗವಾಗಬಹುದು. ಕಾರಣ - ಭಾರತದಂತಹ ದೇಶದಲ್ಲಿ ಮೋಕ್ಷ ಸಾಧನೆಗೆ ಪುತ್ರಪ್ರಾಪ್ತಿಗಾಗಿ ಪುತ್ರಕಾಮೇಷ್ಟಿ ಯಜ್ಞಗಳು ಈಗಲೂ ನಡೆಯುತ್ತವೆ ಮತ್ತು ಸತ್ತ ಮೇಲೆ ಸ್ವರ್ಗಕ್ಕೆ ಕಳಿಸಲು ಮಗನಿಂದ ಮಾತ್ರ ಸಾಧ್ಯ ಎಂಬ ಭಾವನೆ ಗಂಡು ಮಗುವಿಗಾಗಿ ಕುಟುಂಬ ಯೋಜನೆಯಡಿಯ ಶಾಸನಗಳನ್ನು ಮೀರುವ ಸಚಿವರುಗಳೇ ಇದ್ದಾರೆ.

ಆಘಾತಕರ ಅಂಶಗಳು

ಲಿಂಗ ಪರಿಮಾಣದಲ್ಲಿನ ಅಸಮಾನತೆಗೆ ಕಾರಣೀಭೂತವಾದ ಸಾಮಾಜಿಕ ವಿಷಯಗಳ ವಿಶ್ಲೇಷಣೆ ಇದಾದರೆ - ಲಿಂಗ ಪರಿಮಾಣದ - ನೈಜ ಅಂಕಿ ಅಂಶಗಳು ರಾಜ್ಯವಾರು ಕೋಷ್ಟಕಗಳು ಇನ್ನೂ ಹಲವು ವಿಷಯಗಳನ್ನು ಬೆಳಕಿಗೆ ತರುತ್ತವೆ.

ಗಣತಿಯ ವರ್ಷ	ಲಿಂಗಪರಿಮಾಣ 1000 ಪುರುಷರಿಗೆ
1901	972
1911	964
1921	955
1931	950
1941	945
1951	946
1961	941
1971	930
1981	934
1991	927
2001	933

ಕೃಪೆ: EPW

ಈ ಮೇಲಿನ ಅಂಕಿ-ಸಂಖ್ಯೆಯ ಆಧಾರದಲ್ಲಿ ಕಳೆದ 30 ವರ್ಷಗಳಲ್ಲಿ ಇದು ಎರಡನೇ ಬಾರಿ ಮಹಿಳೆಯರ ಪರಿಮಾಣದಲ್ಲಿ ಸ್ವಲ್ಪ ಏರಿಕೆ ಕಂಡು ಬಂದಿದೆ. 1971-81 ರ ಜನಗಣತಿ ಒಂದಿಷ್ಟು ಆಶಾಭಾವನೆಯನ್ನು ಮೂಡಿಸಿತ್ತಾದರೂ 81-91 ರ ಗಣತಿ ನೀಡಿದ್ದು ಆಘಾತಕರ ಅಂಶವನ್ನು. ಒಮ್ಮೆಗೆ 7 ರಷ್ಟು ಇಳಿತ ಮಹಿಳಾ ಚಳುವಳಿಗೆ ದೊಡ್ಡ ಶಾಕ್ ನೀಡಿತು. ಅಂತೆಯೇ 1991-2001 ರಲ್ಲಿ ಕಂಡುಬಂದ ಏರಿಕೆಗೆ ಪ್ರಮುಖ ಕೊಡುಗೆ - ಕೇರಳ ಉತ್ತರಾಂಚಲ್ ಮತ್ತು ಉತ್ತರ ಪ್ರದೇಶಗಳಲ್ಲಿ 20 ಅಂಶಗಳ ಏರಿಕೆ, ಬಿಹಾರ, ಜಾರ್ಖಂಡ್, ರಾಜಸ್ಥಾನ, ತಮಿಳ್ನಾಡು, ಪ.ಬಂಗಾಳಗಳಲ್ಲಿ 10 ರಿಂದ 20 ಪಾಯಿಂಟ್‌ಗಳಷ್ಟು ಏರಿಕೆ - ಒಟ್ಟು ಏರಿಕೆಗೆ ಕೊಡುಗೆ ನೀಡಿದೆಯಾದರೆ ಏರಿಕೆಯ ಪ್ರಮಾಣ ಅಲ್ಲಿಗೇ ಸೀಮಿತವಾಗಲು ಕಾರಣ - ಗುಜರಾತ್, ಮಹಾರಾಷ್ಟ್ರ, ಹರಿಯಾಣ, ಹಿಮಾಚಲ್, ಪಂಜಾಬ್‌ಗಳಲ್ಲಿನ ಗಣನೀಯ ಪ್ರಮಾಣದ ಇಳಿತ.

ಬೆಚ್ಚಿ ಬೀಳಿಸುವ ಅಂಶವೆಂದರೆ ದಮನ್ ಮತ್ತು ಡಿಯಾಗಳಲ್ಲಿ 260 ಪಾಯಿಂಟ್‌ಗಳ ಇಳಿಕೆ, ದಾದ್ರಾ - ನಗರ ಹವೇಲಿಗಳಲ್ಲಿ 141 ಪಾಯಿಂಟ್‌ಗಳ ಇಳಿಕೆಗಳು ಗಂಭೀರ ಅಂಶಗಳು. ಈ ಹಿಂದೆಯೇ ವಿಶ್ಲೇಷಿಸಿದಂತೆ ಪ್ರಥಮ ಬಾರಿಗೆ 1 ರಿಂದ 6 ರ ವಯೋಮಾನದ ಮಕ್ಕಳ ಗಣತಿಯನ್ನು ಪ್ರಥಮ ಬಾರಿಗೆ ತೆಗೆದುಕೊಳ್ಳಲಾಗಿದೆ. ಒಟ್ಟು ಅನುಪಾತದ ಏರಿಕೆಗೆ ಪೂರಕವಾದ *ರಾಜ್ಯಗಳಲ್ಲಿ - ಮಕ್ಕಳ ಸಂದರ್ಭದಲ್ಲಿ ನೋಡಿದರೆ - ಉತ್ತರಾಂಚಲ - 42 ಪಾಯಿಂಟ್‌ಗಳ ಇಳಿಕೆ, ಉ.ಪ್ರದೇಶದಲ್ಲಿ 11 ಪಾಯಿಂಟ್‌ಗಳ ಇಳಿಕೆಯಾದರೆ - ಕೇರಳದಲ್ಲಿ 5 ಪಾಯಿಂಟ್‌ಗಳ ಏರಿಕೆ ಕಂಡು ಬಂದಿದೆ.* ಉಳಿದ ರಾಜ್ಯಗಳಲ್ಲಿಯೂ ಇಳಿಕೆಯ ಪ್ರಮಾಣವೇ ಹೆಚ್ಚು ಇರುವ ಹಿನ್ನೆಲೆಯಲ್ಲಿ ಈ ಹಿಂದಿನ ಸಾಮಾಜಿಕ ವಿಶ್ಲೇಷಣೆಗೆ ಅರ್ಥ ಬರುತ್ತದೆ. ಈ ಹಿಂದೆಯೇ ವಿಶ್ಲೇಷಿಸಿದಂತೆ - ***ಪ್ರಥಮ ಬಾರಿಗೆ 1991-2001 ರ ಜನಗಣತಿಯಲ್ಲಿ - 1 ರಿಂದ 6 ವರ್ಷ ವಯಸ್ಸಿನ ಹೆಣ್ಣು ಮಕ್ಕಳ ಜನಗಣತಿಯನ್ನು***

ಮುಂದಿನ ಪುಟಕ್ಕೆ



ಬರ ಬಂತು ನಾಡಿಗೆ ಬದುಕು ಇನ್ನೆಲ್ಲಿಯದ

ರಾಜ್ಯದ 21 ಜಿಲ್ಲೆಗಳೂ ಈಗ ಬರದ ಕೆನ್ನಾಲಿಗೆಗೆ ತುತ್ತಾಗಿವೆ. ಜನ-ದನ ಕರುಗಳು ಬದುಕಲಾಗದೇ ಕಂಗೆಡುತ್ತಿವೆ. ಆದರೆ ಸರ್ಕಾರ ಬರೀ ಮಾತಿನಲ್ಲಿ ಮಲಗಲು ಸ್ವರ್ಗ ತೋರುತ್ತಿದೆ. ಈ ದುಷ್ಟ ರಾಜಕೀಯ ಆಟದಲ್ಲಿ ಕಾಂಗ್ರೆಸ್ ನೊಂದಿಗೆ ಬಿಜೆಪಿಯದೂ ಪೈಪೋಟಿ. ಈ ಧಾರುಣ ಚಿತ್ರಣ ನೀಡುವ ಲೇಖನಗಳು ಇಲ್ಲಿವೆ. ಮುಂದಿನ ವಾರವೂ ಪ್ರಕಟಗೊಳ್ಳಲಿವೆ

ನಾನು ಪ್ರತಿದಿನ ಆಕಾಶ ನೋಡುತ್ತೇನೆ. ಬಲಾಢ್ಯ ಆಸೆಗಳ ಆಕಾರದ ಮೋಡಗಳೇನೋ ಆಸೆಯ ಮರೀಚಿಕೆ ಹುಟ್ಟಿಸುತ್ತವೆ. ಆದರೆ ಇನ್ನೊಮ್ಮೆ ನೋಡುವಾಗ ಯಾವ ದಿಕ್ಕಿನ ಮೋಹನ ಮುರುಳಿಗೆ ಮನಸೋತು ಮಂಗ ಮಾಯವಾಗುತ್ತವೆಯೋ ಗೊತ್ತಿಲ್ಲ. ಶುಭ್ರ ಮುಗಿಲು ಅಣಕಿಸುವ ನಗೆ ಚೆಲ್ಲುತ್ತಿರುತ್ತದೆ. ಕಳೆದ ಒಂದೂವರೆ ತಿಂಗಳಿಂದ ಒಂದೇ ಒಂದು ಮಳೆ ಕಂಡಿಲ್ಲ ಈ ನೆಲ. ಮಳೆಗಾಲದ ಪ್ರಾರಂಭದಲ್ಲಿ ಒಮ್ಮೆ ಹಣಕಿದ ಮಳೆ ನೆಲವನ್ನು ಕೊಂಚ ತಣಿಸಿತ್ತು. ಜಿಲ್ಲೆಯ ರೈತರು ಹೊಲಕ್ಕೆ ಲಗ್ಗೆ ಹಾಕಿದರು. ಎತ್ತುಗಳ ಕೊರಳು ಬಿಚ್ಚಿದರು. ನೇಗಿಲು ಹೊಡೆದು ಬೀಜ ಬಿತ್ತಿದರು. ಹೆಸರು, ಮಡಕಿ, ಸೂರ್ಯಕಾಂತಿ, ಜೋಳ, ಸಜ್ಜೆ, ಶೇಂಗಾ, ಎಳ್ಳು, ಔಡಲ, ತೊಗರಿ ಹೀಗೆ ಮುಂಗಾರು ಬೆಳೆಗಳು ಟಿಸಿಲೊಡೆದು ಫಸಲು ಕೊಟ್ಟು ಕಿಸೆಗೆ ಹಣ ಬರುವ ಕನಸು ಕಂಡರು ರೈತರು.

ಆದರೆ ಆದದ್ದೇನು? ಕುದುರೆ ಮೇಲೆ ಕೂತು ಬಂದ ಮಳೆರಾಯ ಮತ್ತೊಮ್ಮೆ ಇತ್ತ ಹಾಯಲೇ ಇಲ್ಲ. ಥಳ-ಥಳ ಹೊಳೆವ ಬಿಸಿಲು ರೈತರ ಕಣ್ಣೊಳಗಿನ ಕನಸಗಳನ್ನು ಇಂಚಿಂಚೀ ಕೊಲ್ಲುತ್ತದೆ. ಟಿಸಿಲೊಡೆದ ಬೀಜ ಬೆಳೆವ ಮೊದಲೆ ಮುರುಟಿ ನೆಲ ಕಚ್ಚಿದೆ. ಮಳೆಯ ಮೇಲೆ ಭರವಸೆ ಇಟ್ಟು ಸಾಲ ತಂದ ರೈತ ಕಂಗಾಲಾಗಿದ್ದಾನೆ. ಎಷ್ಟೊಂದು ಸಾಲ, ಸಾಲಿಗರು ಬಂದು ಮನೆಯ ಮುಂದೆ ಸಾಲುಗಟ್ಟುವಾಗ ತಾನು ಸತ್ತು ಹೋಗುವ ಯೋಜನೆ ಎಷ್ಟು ಸಾರಿ ಬಂದಿಲ್ಲ ರೈತನಿಗೆ? ಆಸೆಯೇ ಓಜಸ್ಸು. ಆಸೆಯೇ ತೇಜಸ್ಸು. ಆಸೆಯೇ ಬದುಕಿನ ಜೀವ ಸೆಲೆ. ಆದರೇನು? ಬಾರದ ಮಳೆ ಬಂದಾತು ಎಂದು ಎಷ್ಟೆಲ್ಲ ಆಸೆಪಟ್ಟರೂ ಮಳೆಯ ಸುಳಿವೇ ಇಲ್ಲ. ಬಡವರ ಬದುಕಿನ ಜೀವ ಸೆಲೆ ಬತ್ತುತ್ತಿದೆ. ಬರದ ಮಾರಿ ಬಾಗಿಲಿಗೆ ಬಂದಿದೆ.

ಹೌದು, ಇದು ಗುಲಬರ್ಗಾ ಜಿಲ್ಲೆಯ ರೈತರ ಪರಿಸ್ಥಿತಿಯಾಗಿದೆ. ಜಿಲ್ಲೆಯಲ್ಲಿ 11 ತಾಲೂಕುಗಳಿವೆ. ಕೃಷಿ ಪ್ರಧಾನ ನಾಡಿದು. 'ತೊಗರಿ ಕಣಜ'ದ ಬಿರುದು ಇದಕ್ಕಿದೆ. ಹನ್ನೊಂದು ನೀರಾವರಿ ಯೋಜನೆಗಳಿವೆ. ಭೀಮ, ಕೃಷ್ಣೆಯರು ಈ ನೆಲದಿಂದಲೇ ಪಯಣಿಸಿ ಮುಂದೆ ಸಾಗುತ್ತಾರೆ. ಪ್ರಕೃತಿ ಯಾವತ್ತೂ ಈ ಜಿಲ್ಲೆಯ ಮೇಲೆ ತನ್ನ ಕೋಪ ಪ್ರಕಟಿಸುತ್ತಲೇ ಇರುತ್ತದೆ. ಬಯಲು ಭೂಮಿ ಇದು. ಅರಣ್ಯ ಎಂದರೇನೆಂದೇ ಗೊತ್ತಿಲ್ಲದ ಅರಣ್ಯ ಇಲಾಖೆ ಬಂದಿದೆ. ಆದರೆ ಗಿಡ-ಮರಗಳ ಸಮೃದ್ಧ ಅರಣ್ಯವಿಲ್ಲ. ಇಲ್ಲಿ ಧಾರಾಳವಾಗಿ ಸಮೃದ್ಧವಾಗಿ ಸಿಗುವುದು ಒಂದೇ ಒಂದು. ಅದು ಬಿಸಿಲು. ಬಿಸಿಲು ಮಾತ್ರ. ಇಂತಹ ನಮ್ಮ ನಾಡಿನಲ್ಲಿ ಈ ಬಾರಿ ಅರ್ಧ ಡಜನ್ ಮಿನಿಸ್ಟರುಗಳಿರುವರು. ಆದರೆ ಈವರೆಗೆ ಆರಿಸಿಬಂದ ಇವರಾರು ಸಹ ಜಿಲ್ಲೆಯನ್ನು ಸಮೃದ್ಧಗೊಳಿಸುವ ಇಚ್ಛಾಶಕ್ತಿಯೇ ಹೊಂದಿಲ್ಲ. ಪಾಳೇಗಾರಿಕೆ ಮತ್ತು ಜಮೀನ್ದಾರಿಕೆಯ ದರ್ಪಿನಿಂದಲೇ ಮೇಲೆದ್ದು ಬಂದ ಇವರುಗಳು ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲೇ ಇಲ್ಲ. ಜಿಲ್ಲೆಯ ಆದಾಯದ ಹಿಡಿತವೆಲ್ಲ ಇವರುಗಳದೇ.

ಆದರೆ ಈಗ ಬರ ಊರು ಹೊಕ್ಕಿದೆ. ಒಂದೆಡೆ ಪ್ರಕೃತಿಯ ಹೊಡೆತ. ಇನ್ನೊಂದೆಡೆ ಪಾಳೇಗಾರಿ ಜಮೀನ್ದಾರರ ಅಟ್ಟಹಾಸ. ರಾಜ್ಯದಲ್ಲಿಯೇ ಗುಲ್ಬರ್ಗಾ ಜಿಲ್ಲೆಯಲ್ಲಿ ಕೃಷಿ-ಕೂಲಿಕಾರರು ಅಧಿಕ ಸಂಖ್ಯೆಯಲ್ಲಿರುವರು. ಈ ಬಾರಿ 25 ಶೇಕಡದಷ್ಟು ಮಾತ್ರ ಬಿತ್ತನೆ ಮಾಡಲಾಗಿದೆ. ಅದೂ ಈಗ ನಾಶವಾಗಿದೆ. ಹಳ್ಳಿಯ ರೈತರು-ಕೂಲಿಕಾರರು ದಿಕ್ಕೆಟ್ಟಿದ್ದಾರೆ. ಕೂಲಿಗಾಗಿ ಕರೆಯುವವರು ಯಾರೂ ಇಲ್ಲ. ನೂರಾರು ಎಕರೆ ಹೊಲ ಇರುವ ನೀರಾವರಿ ಹೊಂದಿದ ಜಮೀನ್ದಾರ ಕೊಡುವ ಕೂಲಿಯನ್ನು ಧಿಡೀರಂತ ಇಳಿಸಿದ್ದಾನೆ. ಸಿಕ್ಕಷ್ಟು ಸಾಕು ಶಿವನೇ ಎಂದು ಸಿಗುವ ಹತ್ತು ರೂಪಾಯಿಗೆ ಕ್ಯೂ ಬೆಳೆಯುತ್ತಿದೆ. ಜಡ್ಡು, ಜಾಪತ್ರೆ(ರೋಗ-ರುಜಿನ) ಬಂದಾಗ ಮನೆಯಲ್ಲಿನ ಪಾತ್ರೆ- ಪಡಗಗಳು ಗೌಡರ- ಸಾಹುಕಾರರ ಮನೆ ಸೇರುತ್ತಿವೆ. ಹೆಂಗಸರ ಮೂಗುತಿ ತಾಳಿ ಸರಗಳು ಗಿರವಿ ಅಂಗಡಿಗಳ ಪಾಲಾಗಿ ಹೋಗಿವೆ. ಇಷ್ಟಾದರೂ ದಿನ ದೂಡುವುದು ಕಷ್ಟವಾಗುತ್ತಿದೆ. ಪಟ್ಟಣದಲ್ಲಿ ಕೆಲಸ ಸಿಕ್ಕಿತೆಂದು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ವಲಸೆ ಬಂದವರು ಕೆಲಸ ಸಿಗದೆ ಉಟ್ಟ ಬಟ್ಟೆಯ ಮೇಲೆ ಬಾಂಬೆ-ಪುಣೆಗೆ ಗುಳೆ ಹೋಗತೊಡಗಿದ್ದಾರೆ. ಈವರೆಗೆ ಶೇ 25 ಕ್ಕೂ ಅಧಿಕ ಜನ ಒಕ್ಕಲಿಗರು ಕೂಲಿಕಾರರು ಗುಳೆ ಹೋಗಿದ್ದಾರೆ. ಬಡರೈತರು-ಕೂಲಿಕಾರರು ಮಕ್ಕಳನ್ನು ಶಾಲೆಗೆ ಕಳಿಸುವ ಪರಿಸ್ಥಿತಿಯಲ್ಲಿ ಇಲ್ಲ. ಶಾಲೆ ಬಿಡುವ ಮಕ್ಕಳ ಸಂಖ್ಯೆ ಶೇ 9 ಕ್ಕೆ ಏರಿದೆ. ಕೆಲಸ ಹುಡುಕಿ ಬಡಿಯದ ಬಾಗಿಲುಗಳಿಲ್ಲ. ಓಡಾಡದ ನೆಲವಿಲ್ಲ. ದುಡಿವ ಜನರ ಕಿಸೆ ಖಾಲಿ ಇರುವುದರ ನೇರ ಪರಿಣಾಮ ಮಾರುಕಟ್ಟೆಯ ಮೇಲಾಗುತ್ತಿದೆ. ಸಣ್ಣ ವ್ಯಾಪಾರಸ್ಥರು ನಷ್ಟದಿಂದ ನರಳುತ್ತಿದ್ದಾರೆ. ಎಣ್ಣೆ ಉದ್ಯಮಗಳು ಬಾಗಿಲು ಹಾಕಿವೆ.

ನೀಲಾ.ಕೆ

ಮೂಕ ಬಸವನ ಕಣ್ಣೀರ ಕೋಡಿ

ಎತ್ತು ಎಮ್ಮೆಗಳೇ ಕೃಷಿಯ ಪ್ರಮುಖ ಸಂಪನ್ಮೂಲ ಮಳೆ ಬಂದು ಬೆಳೆ ಬೆಳೆದರೇನೇ ಎತ್ತು-ಎಮ್ಮೆಗಳು ಬದುಕಲು ಸಾಧ್ಯ. ಮನುಷ್ಯನಿಗೆ ಹಸಿವಾದರೆ ಬೇಡಿ ತಿಂದಾನು. ಆದರೆ ಜಾನುವಾರುಗಳಿಗೆಲ್ಲಿಯ ಬಾಯಿ? ಅವುಗಳ ಹೊಟ್ಟೆ ಬೆನ್ನಿಗೆ ಹತ್ತಿದೆ. ತನಗೆ ಹಸಿವಾಗಿದೆ ಹುಲ್ಲು ಹಾಕಿರೆಂದು ದೈನ್ಯದಿಂದ ಬೇಡುವಂತಹ ನೋಟ ಎಲ್ಲಾ ಜಾನುವಾರುಗಳ ಕಣ್ಣಲ್ಲಿದೆ. ಆದರೆ ದೀಪ ಹಚ್ಚಿ ಹುಡುಕಿದರೂ ಹಿಡಿ ಹುಲ್ಲು ಸಿಗಲಾರದು. ಜೋಳ ಬೆಳೆವವರ ಮನೆಯಲ್ಲಿ ಕಳಕಿ (ಜೋಳದ ದಂಟು) ಸ್ಟಾಕ್ ಇಟ್ಟಿರುತ್ತಾರೆ. ಅದನ್ನು ಖರೀದಿಸಬೇಕೆಂದರೆ ರೇಟು ದುಬಾರಿಯಾಗಿದೆ. ಒಂದು ಹೊರಿ (25 ಸೂಡ) ಕಳಕಿಗೆ 100 ರೂಪಾಯಿ. ಅದೂ ಗೊಬ್ಬರವಾಗಲು ಸಿದ್ದವಾದ ಕಳಕಿ. ಒಂದು ದಷ್ಟ-ಪುಷ್ಟ ಎತ್ತಿಗೆ ಕನಿಷ್ಠಜ ಒಂದು ಹೊರಿ ಕಳಕಿ ಬೇಕಾಗುತ್ತದೆ. ಅಂದರೆ ರೂ.100 ರಷ್ಟು ಖರ್ಚು. ಹೇಳಿ, ಒಂದು ಜಾನುವಾರಕ್ಕೆ ನೂರು ಬೇಡ ಈ ಬರದ ನಡುವೆ ರೂಪಾಯಿ ಐವತ್ತಾದರೂ ಖರ್ಚು ಮಾಡಲು ಸಾಧ್ಯವೇ....? ಕೊಟ್ಟ ಮಾತಿಗೆ ತಪ್ಪಿ ನಡೆಯುದ ಪುಣ್ಯಕೋಟಿಯ ಮೇಲೆ ಹುಲಿರಾಯ ಕರುಣೆ ಪಟ್ಟಿದ್ದ. ಆದರೆ ಈ ಪುಣ್ಯ ಕೋಟಿಗಳು ಈಗ ಕಸಾಯಿಖಾನೆಯ ಪಾಲಾಗುತ್ತಿವೆ. ದನಗಳ ಸಂತೆಯಲ್ಲಿ ವ್ಯಾಪರವೇ ಇಲ್ಲ. ಅನ್ನವಿಲ್ಲದೆ ಬಡಕಲಾದ ದನಗಳ ಮೈಯಲ್ಲಿ ಸಮೃದ್ಧ ಮಾಂಸ ಸಿಗದ ಕಾರಣ ಅದರಲ್ಲೂ ರೇಟಿಲ್ಲ. ಉತ್ತರ ಕರ್ನಾಟಕದಲ್ಲಿ ರೂ.50 ಕೋಟಿಯಷ್ಟು ಮಾಂಸದ ವಹಿವಾಟು ಕುಸಿದಿದೆ. ಕುರಿ ಮತ್ತು ದನದ ಮಾಂಸದ ಬೆಲೆ ಅರ್ಧದಷ್ಟು ಕುಸಿದಿದೆ. ಉತ್ತರ ಜಿಲ್ಲೆಯ ಪಾಲು ಹೆಚ್ಚಿದೆ. ಇಷ್ಟೆಲ್ಲ ನಡೆವಾಗಲೂ ಗೋಮಾತೆಯ ರಕ್ಷಿಸುವ ಯಾವ ಯೋಜನೆಯೂ ಜಾರಿಗೆ ಬಂದಿಲ್ಲ.

ಪಾತಾಳದತ್ತ ನೀರು...

ಭೀಮೆ ಕೃಷ್ಣೆಯರ ಒಡಲಲ್ಲಿ ಎಷ್ಟೇ ನೀರಿದ್ದರೂ ಭರಪೂರ ಮಳೆಯಾದಾಗಲೂ ಗುಲಬರ್ಗಾ ಜಿಲ್ಲೆಯ ಜನರಿಗೆ ನೀರಿಲ್ಲ. ಈಗಂತೂ ಮಳೆಯೇ ಇಲ್ಲ. ಭೀಮ ಬಡಕಲಾಗಿದ್ದಾಳೆ. ನಗರಕ್ಕೆ ನೀರು ಕಳಿಸುವ ಭೋಸಗಾ ಕೆರೆ ಒಣಗುತ್ತಿದೆ. ಅಂತರ್ಜಲ ಮಟ್ಟ ಕುಸಿಯುತ್ತಿದೆ. ಮೊದ ಮೊದಲು ದಿನ ಬಿಟ್ಟು ದಿನ ನೀರು ಬಿಡುವ ವಾಯ್ದೆ ಮಾಡಿದ ಮಹಾನಗರ ಪಾಲಿಕೆ ಈಗ ಎರಡು-ಮೂರು ದಿನಕ್ಕೊಮ್ಮೆ ನೀರು ಬಿಡುತ್ತಿದೆ. ಹಳ್ಳಿಯಲ್ಲಿರುವ ಬೋರ್‌ವೆಲ್‌ನಲ್ಲಿ ನೀರು ಬರಬೇಕಾದರೆ ಮೊದಲು ಹತ್ತು ನಿಮಿಷ ಫಲಾಪೇಕ್ಷೆಯಿಲ್ಲದೆ ಬೋರೇ ಹೊಡೆಯಬೇಕು. ಆಮೇಲೆ ನೀರಿನ ದರ್ಶನ ನಾಲ್ಕು ಕೊಡ ನೀರು ತುಂಬುವಲ್ಲಿ ಎದೆನೋವು ಗ್ಯಾರಂಟಿ. ಇದು ಒಟ್ಟು ಜಿಲ್ಲೆಯ ಪರಿಸ್ಥಿತಿ. ಶೇಕಡ 50 ಕ್ಕೂ ಅಧಿಕ ಗ್ರಾಮಗಳು ನೀರಿನ ಹಾಹಾಕಾರ ಎದುರಿಸುತ್ತಿದೆ. (1300 ರಷ್ಟು ಗ್ರಾಮಗಳಿವೆ ಜಿಲ್ಲೆಯಲ್ಲಿ

........ಬೀಡಿ ಹೊತ್ತಿಸಿಕೊಂಡವರು

ಹೌದು, ಇದು ಪಾಳೇಗಾರರ ಪ್ರಮುಖ ಲಕ್ಷಣ. ಬಡವರ ಮನೆಗೆ ಬೆಂಕಿ ಬಿದ್ದಾಗ ಬೀಡಿ ಹೊತ್ತಿಸಿಕೊಳ್ಳುವುದೇ ಕೆಲವರ ಕಾಯಕ. ಈಗ ಲೇವಾದೇವಿಗಾರರಿಗೆ ಗ್ರಾಮದ ಬೆನಿವಾರರಿಗೆ (ಬಡ್ಡಿಯಲ್ಲಿ ಸಾಲ ಕೊಡುವವರಿಗೆ) ಹಬ್ಬದ ದಿನಗಳು (ದೊಡ್ಡ ಸಾಹುಕಾರರ ಬಾಗಿಲಿಗೆ ಬಡವರ ಮೂಳೆಯ ತೋರಣ. ಅವರ ಅಂಗಳಕ್ಕೆ ಬಡವರ ನೆತ್ತರ ರಂಗೋಲಿ) ಇನ್ನು ಜನಪ್ರತಿನಿಧಿಗಳಂತೂ ಸಂಭ್ರಮದ ಗಳಿಗೆಯಲ್ಲಿಯೇ ಇರುವರು. ಬರದ ಹೆಸರಿನಲ್ಲಿ ಬರುವ ಬಜೇಟ್‌ನ್ನು ಗುಳುಂ ಮಾಡಲು ಸುವರ್ಣ ಸಮಯ. (ಹಿಂದೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಅನ್ನು ನುಂಗಿ ನೀರು ಕುಡಿಯಲು ಬಳಸಿಕೊಂಡಿದ್ದು ಹೀಗೇ.) ಅಧಿಕಾರಿಗಳೂ, ಜನಪ್ರತಿನಿಧಿಗಳೂ, ಊರ ಪೈರವಿಕಾರರೂ ಒಂದಾಗುವ ಸಮಯವಿದು. ಸುಳ್ಳು ಬಿಲ್ಲುಗಳ ಸೃಷ್ಠಿಯ ಕಾಲವಿದು. ಬಡ್ಡಿಗೆ ಚಕ್ರಬಡ್ಡಿ ಸೇರಿಸಿ ಎಷ್ಟೆಷ್ಟು ಜನರನ್ನು ಹೇಗ್ಹೇಗೆ ಮೋಸ ಮಾಡಬಹುದು ಎನ್ನುವುದು ಈಗಲೇ ಯೋಜನೆ ನಡೆದಿರುತ್ತದೆ. ಬರ ಬಂದರೆ ಅದು ಬಡವರಿಗೆ ಮಾತ್ರ. ಉಳ್ಳವರಿಗಲ್ಲ. ಬರ ಉಳ್ಳವರನ್ನು ಮತ್ತಷ್ಟು ಮೇಲೇರಿಸುತ್ತದೆ. ಹಳ್ಳಿಗಳಲ್ಲಿ ಹೊಲ-ಮನೆಗಳನ್ನು ಬರೆಯಿಸಿಕೊಂಡು ಹೆಬ್ಬೆಟ್ಟು ಒತ್ತಸಿಕೊಂಡು ಸಾಲಕೊಡುವವರು ಸಿದ್ಧವಾಗಿರುತ್ತಾರೆ.

ಪರಿಹಾರದ ಯೋಜನೆಗಳು

ಮುಗಿಲ ಚುಕ್ಕಿಗಳು



ಕುಡಿವ ನೀರಿಗೂ ಹಾಹಾಕಾರ

ಬರ ಬಂದು ಬಾಗಿಲು ಬಡಿದಾಗಲಿಂದಲೂ ಅನೇಕ ಜನಪರ ಸಂಘಟನೆಗಳು ಸರಕಾರಕ್ಕೆ ಎಚ್ಚರಿಸತೊಡಗಿದವು. ಮುಂಜಾಗರೂಕತಾ ಕ್ರಮ ಕೈಗೊಳ್ಳಲು ಒತ್ತಾಯಿಸತೊಡಗಿದವು. ಆದರೆ ಸರಕಾರದ ಅಧಿಕಾರಿಗಳ ಭಂಡತನಕ್ಕೆ ಮಿತಿಯೇ ಇಲ್ಲವಾಗಿದೆ. ಕೃಷಿಕರು-ಕೂಲಿಗಾರರು ವಲಸೆಯೇ ಹೋಗುತ್ತಿಲ್ಲ. ಜಿಲ್ಲೆಯ ಮುಖ್ಯ ಬೆಳೆ ತೊಗರಿಗೆ ಧಕ್ಕೆಯೇ - ಎಂಬ ಸುಳ್ಳು ವಾದವನ್ನು ಜಿಲ್ಲೆಯ ಅಧಿಕಾರಿಗಳು ಬಾಯಿಪಾಠ ಒಪ್ಪಿಸುತ್ತಾರೆ. ಇನ್ನು ಆರು ಜನ ಮಿನಿಸ್ಟರುಗಳಾಗಲಿ ಬಿಜೆಪಿಯ ನೇತಾರರುಗಳಾಗಲಿ ದಿನ ಬೆಳಗಾದರೆ ಕಚಡಾ ರಾಜಕೀಯ ಮಾತ್ರ ಮಾಡುತ್ತಾರೆ ವಿನಃ ಬರದ ನಿವಾರಣೆಗೆ ಕ್ರಮಕೈಗೊಳ್ಳುವ ಇಚ್ಛೆ ಹೊಂದಿಲ್ಲ. ನೀರಿಗೆ 100 ಕೋಟಿ ಕೊಡುವುದಾಗಿ ಹೇಳಲಾಗಿದೆ. ಬಂದಿದ್ದು 50 ಲಕ್ಷ. ಜನರಿಗೆ ತಲುಪಿದ್ದು ಎಷ್ಟೆಂದು ಯಾರು ಬಲ್ಲರು...?



ಜನರಿಲ್ಲದೇ ಬಿಕೋ ಎನ್ನುವ ಊರು

ಶಾಲೀ...

ಇನ್ನುಳಿದ ಕಾಮಗಾರಿಗಳಿಗಾಗಿ ಮತ್ತು ವಿವಿಧ ಯೋಜನೆಗಳಿಗಾಗಿ ಜಿಲ್ಲಾ ಪಂಚಾಯತ್ ಮತ್ತು HKDB ಹಣ ಬಳಸಿ ಎಂದು ಹೇಳಿ ಸರಕಾರ ತನ್ನ ಹೊಣೆಯಿಂದ ನುಣುಚಿಕೊಂಡಿದೆ. ಇನ್ನು ಈ ಸಂಸ್ಥೆಗಳು ಸಹ ಉದ್ಯೋಗ ಸೃಷ್ಟಿಯ ಯೋಜನೆ ಹೊಂದಿಲ್ಲ. ಕಟ್ಟಡ ಸೇತುವೆಗಳಿಗೆ ಬೇಕಾದ ಸಾಮಗ್ರಿಗಳ ಖರೀದಿಗೆ ಹೆಚ್ಚಿನ ಹಣ ಇಟ್ಟಿದೆ. ಹೇಗಿದೆ ನೋಡಿ ಕಳ್ಳರ ಕೂಟದ ಯೋಜನೆ

ಇಡೀ ಜಿಲ್ಲೆಯಲ್ಲಿ ಬರದ ತಾಂಡವ ನಡೆಯುತಿದ್ದರೂ ಜಿಲ್ಲಾಧಿಕಾರಿಗಳೂ ಶಾಸಕ-ಸಂಸದರು ಕೆಂಪುಗೂಟದ ಕಾರಲ್ಲಿ ಆರಾಮಾಗಿ ಮೆರೆದಾಡುತ್ತಿದ್ದಾರೆ. ಮಾತ್ತೆತ್ತಿದರೆ ಸಾಕು ಹುಶಾರ್, ಪೊಲೀಸಿದೆ ನನ್ನ ಕೈಯಲ್ಲಿ.. ಎಂದು ಹೆದರಿಸುವ ಖರ್ಗೆಯವರಿಗಂತೂ ತಮ್ಮ ಜಿಲ್ಲೆಯಲ್ಲಿ ಬರ ಬಂದ ಕಿಂಚಿತ್ ಚಿಂತೆಯೂ ಇಲ್ಲ. ಆದ್ದರಿಂದಲೇ ಒಂದೇ ಒಂದು ಗ್ರಾಮದಲ್ಲಿ ದುಡಿದ ಕೈಗೆ ಕೆಲಸ ಕೊಡುವ ಕಾಮಗಾರಿಗಳು ಪ್ರಾರಂಭವಾಗಿಲ್ಲ. ಜಿಲ್ಲಾಧಿಕಾರಿಗಳಿಗೆ ಕೇಳಿದರೆ ಗ್ರಾಮ ಪಂಚಾಯತ್ ಕೆಲಸ ಕೊಡ್ತದೆ ಅವರಿಗೆ ಕೇಳಿ ಎಂದು ತಪ್ಪಿಸಿಕೊಳ್ಳುತ್ತಾರೆ. ಗ್ರಾಮ ಪಂಚಾಯತ್ ಗಳಿಗೆ ಕೇಳಿದರೆ ನಮ್ಮಲ್ಲಿ ಬಜೇಟ್ ಇಲ್ರೀ ಎಂದು ಪಾಪ ಹಳ್ಳಿಗರನ್ನು ದಬಾಯಿಸುತ್ತಾರೆ.

ಹೀಗಾಗಿ ಇಂದಿರಾ ಆವಾಸ್ ಯೋಜನೆ, ಬಡತನ ನಿವಾರಣೆ ಯೋಜನೆ, ಉದ್ಯೋಗ ಧೃಢೀಕರಣ ಯೋಜನೆ, ಸ್ವರ್ಣ ಜಯಂತಿ ರೋಜಗಾರ ಯೋಜನೆ, ಋಣಮುಕ್ತಿ ಕಾಯ್ದೆ ಯೋಜನೆ ಇವು ಯಾವುವೂ ಸಹ ಜಾರಿಗೆ ಬರುತ್ತಿಲ್ಲ. ಪ್ರಾಂತ ರೈತ ಸಂಘ ಒಂದು ದಿನ ಧರಣಿ ಮಾಡಿ ಬರ ಪರಿಹಾರಕ್ಕೆ ಒತ್ತಾಯ ಮಾಡಿದೆ. ಇತರೆ ರಾಜಕೀಯ ಪಕ್ಷಗಳೂ ಸಹ ಯುದ್ಧೋಪಾದಿ ಪರಿಹಾರಕ್ಕೆ ಕೇಳಿವೆ. ಆದರೆ ಕುಂಭಕರ್ಣ ನಿದ್ರೆಯ ಕಾಂಗ್ರೆ ಸರಕಾರ ಮಾತ್ರ ಅಲುಗಾಡಲು ಸಿದ್ಧವಿಲ್ಲ. ಸ್ವಂತ ಜಿಲ್ಲೆಯ ಹಿತವನ್ನು ಮೂಲೆಗೆ ತಳ್ಳಿ ಆರು ಜನ ಮಿನಿಸ್ಟರುಗಳು ಸಹ ಬೆಂಗಳೂರಿನಲ್ಲಿ ಮಜವಾಗಿದ್ದಾರೆ. ಬರದ ತೀವ್ರತೆ ಹೆಚ್ಚಾಗಿ ಜನ ಏನಾದರೂ ಪರಿಹಾರಕ್ಕಾಗಿ ಒತ್ತಾಯಿಸ ತೊಡಗಿದ್ದಾರೆ. ದೇವರು ಮಳೆ ಬರಿಸಲಿಲ್ಲ. ನಮ್ಮ ಕೈಯಲ್ಲೇನಿದೆ, ನೀವೂ ಜಪ ಮಾಡಿ ನಾವೂ ಜಪ ಮಾಡ್ತೇವೆ ಎಂದು ಹೇಳಲೂ ಈ ಮಿನಿಸ್ಟುಗಳು ಹಿಂದೆ-ಮುಂದೆ ನೋಡಲಾರರು. ಅಂಥಜ ಬೇಜವಾಬ್ದಾರಿ ಮತ್ತು ಜನವಿರೋಧಿ ಮನಸ್ಸು ಅವರಿಗಿದೆ.

ಇಂತಹ ಸಂದರ್ಭದಲ್ಲಿ ಜನಪರ ಸಂಘಟನೆಗಳ ಅದರಲ್ಲೂ ರೈತ-ಕೃಷಿಕೂಲಿಕಾರರ ಸಂಘಟನೆಗಳ ಜವಾಬ್ದಾರಿ ಹೆಚ್ಚಿದೆ. ಮೇಲಿನ ಎಲ್ಲ ಯೋಜನೆಗಳ ಜಾರಿಗೆ ಒತ್ತಾಯಿಸಿ ಜನ ಚಳುವಳಿ ತೀವ್ರಗೊಳಿಸಬೇಕು. ಗ್ರಾಮ ಪಂಚಾಯತ್ ಮಟ್ಟದಲ್ಲಿ ಹೋರಾಟ ನಡೆಯಬೇಕು. ಹೋರಾಟದ ನದಿಗಳು ಸಾಗರವಾಗಬೇಕಿದೆ. ಈಗಾಗಲೇ ಪ್ರಾಂತ ರೈತ ಸಂಘ, ಕೃಷಿಕೂಲಿಕಾರರ ಸಂಘಗಳು ಹೋರಾಟದಲ್ಲಿ ಧುಮುಕಿವೆ. ○

ಸರ್ಕಾರಕ್ಕೆ ಎಲ್ಲೈತ್ರೀ ದರ್ಕಾರ

ನಮ್ಮೂರಿನ ನೆತ್ತಿಯ ಮೇಲೆ ಕಪ್ಪಗೆ ಕವುಕೊಂಡ ಮೋಡ ನಾಲ್ಕು ಹನಿ ಉಗುಳಿ ಹೊರಟ್ಹೋದ ಮೇಲೆ ಮತ್ತೇ ಇತ್ತಕಡೆ ತಿರುಗಿ ಬರಲೇ ಇಲ್ಲ. ಇಷ್ಟೊತ್ತಿಗೆ ಸಸಿ ಮೊಳೆತು, ಹಸುರು ಉಸಿರಾಡುತ್ತಿದ್ದ ಕೆಂಪು, ಕಪ್ಪು, ಮಸಾರಿ ಮಣ್ಣಿನ ನೆಲವೀಗ ಬೆಂಕಿ ಹೊತ್ತಿಕೊಂಡು ಬೋಳಾದ ಕಾಚಿಕಡ್ಡಿ ಸುಟ್ಟ ಗುಡ್ಡದಂತೆ ಕೆಂಡವಾಗಿ ಕಾದಿದೆ. ದಿನವೆಲ್ಲಾ ಬಿಡುವಿಲ್ಲದೇ ದುಡಿಯುತ್ತಿದ್ದ ರೈತಾಪಿಗಳು ಕೆಲಸವಿಲ್ಲದೇ ನಿಟ್ಟುಸಿರು ಬಿಟ್ಟು, ಮಳೆರಾಯನ ಪ್ರಾರ್ಥನೆ ಮಾಡುತ್ತಾ ಕಾಲ ತಳ್ಳಿಯಾಗಿದೆ. ಕೂಲಿಯೂ ಸಿಗದೇ, ಎಲ್ಲಿಗೆ ಹೋಗಬೇಕೆಂದೂ ದಾರಿಸಿಗದೇ ಅತ್ತಿಂದಿತ್ತ ತಿರುಗುವ, ಇಲ್ಲವೇ ದೂರದಲ್ಲೆಲ್ಲೋ ಕೆಲಸ ಸಿಕ್ಕೀತು ಎಂದು ಆಶಾ ಭಾವನೆಯಿಂದ ಶ್ಯಾರೇ ಗಂಜಿಗಾಗಿ ಊರೂರಿಗೆ ಕೂಲಿಕಾರರ ಸೈನ್ಯ ನಗರಗಳಲ್ಲಿ ಎದುರುಬದುರಾಗುತ್ತಿವೆ. ಭಾವಿ ಬಿಕ್ಕಿದರೂ, ನೆಲ ಕೆರದರೂ ಮುಕ್ಕು ನೀರು ಸಿಗುವುದೂ ದುರ್ಲಭವಾಗಿದೆ. ಕೆರೆ, ಕುಂಟೆಗಳು ಬತ್ತಿ ಹೋಗಿ, ದನ-ಕರುಗಳು ಕಂಗಾಲಾಗಿವೆ. ಮೇವು-ನೀರಿಗಾಗಿ ಪರಿತಪಿಸುವಂತಾಗಿದೆ. ಈ ತಿಂಗಳೊಂದರಲ್ಲೇ ಲಕ್ಷಾಂತರ ದನಗಳು ಕಸಾಯಿಖಾನೆ ಸೇರಿವೆ.

ದುಡಿಯಲು ಸಿದ್ಧ ಆದರೆ...

ಇತ್ತೀಚಿಗೆ ರಾಯಚೂರು ನಗರಕ್ಕೆ ನಾನು ಹೋದಾಗ ಬೆಳ್ಳಂಬೆಳಗು ಕಂಡ ದೃಶ್ಯ, ಅಘಾತಕಾರಿಯಾಗಿತ್ತು. 'ತೀನ್‌ಕಂದೀಲ್' ನಗರದ ಹೃದಯ ಭಾಗ. ಆರೇಳು ಗಂಟೆ ಹೊತ್ತಿಗೆ ಬುತ್ತಿ ಗಂಡು ಹಿಡಿದ ಗಂಡಸರು, ಹೆಂಗಸರುಗಳ ದೊಡ್ಡ ತಂಡಗಳೇ ಅಲ್ಲಿ ನೆರೆದಿದ್ದವು. ಮೊದಮೊದಲು ಒಂದೆರಡು ನೂರು, ಈಗೀಗ ಅದು ಸಾವಿರದತ್ತ.... ಇವರಲ್ಲಿ ರೈತರು, ಕೂಲಿಕಾರರು... ತಾವೀಗ ಯಾವ ಕೆಲಸಕ್ಕೂ ರೆಡಿ, ಯಾರಾದರೇನು ತಮ್ಮ ರಟ್ಟೆಯ ಕಸುವನ್ನು ಖರೀದಿಸುತ್ತಾರಾ ಎಂದು ಕಾಯುವುದು... ಆದರೇನು... ಎಷ್ಟು ಜನರಿಗೆ ಕೆಲಸ ಸಿಕ್ಕೀತು. ಗಿರಣಿಗಳೂ ಮುಚ್ಚಿ, ಕೆಲಸವಿಲ್ಲದೇ ನಗರದಲ್ಲೇ ಸಾವಿರಾರು ಜನ ಇರುವಾಗ... ಆದರೂ ಈ ಶ್ರಮ ಮಾರಾಟದ ಸ್ಪರ್ದೆಯಲ್ಲಿ ಒಂದಿಷ್ಟು ಜನ ಬಿಕರಿಯಾದರೆ, (ಈಗ ಕೂಲಿಯೂ ಕಡಿಮೆಯಾಗಿದೆಯಂತೆ) ಉಳದವರು...ದೊಡ್ಡ ಸಂಖ್ಯೆಯೇ ಕಾದು, ಕಾದು. ತಂದ ಬುತ್ತಿ ಉಂಡು, ಅವರಿವರ ಮನೆ, ನೀರು ಕುಡಿದು ಊರಿಗೆ ವಾಪಸಾಗಿರುವುದು. ತಮ್ಮ ಹಣೆ ಬರಹವನ್ನೇ ನಂಬಿ ನಾಳೆ ಅದೃಷ್ಟ ಖುಲಾಯಿಸಬಹುದೆಂದು ಕುಳಿತವರು ಅನೇಕರು.

ಅಷ್ಟಿಷ್ಟು ದನ, ಕರು ಇರುವ ರೈತ ಮಹಿಳೆಯರು ಮೊಸಲು-ಹಾಲು ಸಿಟಿಯಲ್ಲಿ ಮಾರಿ, ಕೊನೆಗೆ ಉಳಿದ ತಂಗಳಾದರೂ ನೀಡಿರೆಂದು ಗೋಗೆರೆದ ದಯನೀಯ ದೃಶ್ಯ. ಎಷ್ಟೇ ಊರುಗಳು ಸರಿ ಸುಮಾರು ಖಾಲಿಯಾಗಿವೆ. ಮುದುಕರು, ಮಕ್ಕಳು ಮಾತ್ರ ಇನ್ನೂ ಊರಲ್ಲಿ ಉಸಿರಾಡುತ್ತಿದ್ದಾರೆ. ಸುತ್ತಮುತ್ತಲ ಹಳ್ಳಕೊಳ್ಳ ನದಿ-ಕುಂಟೆ ಮಳೆ ಇಲ್ಲದೇ ಬತ್ತುತ್ತಿರುವಾಗ ಪಟ್ಟಣಗಳಲ್ಲಿಯೂ ನೀರಿನ ಕೊರತೆ ಕಾಣಿಸಿಕೊಂಡಿದೆ. ಆಗೀಗ ಬಂದು ಒಂದಿಷ್ಟು ನೀರು ಸುರಿದುಹೋಗುವ ಟ್ಯಾಂಕರ್ (ಇದೂ ಸಹ ಕೆಲವೆಡೆ ಮಾತ್ರ) ಕೊಡದಲ್ಲಿ ಕಲ್ಲು ತುಂಬಿ ನೀರು ಕುಡಿದ ಕಾಗೆಯ ಕಥೆಯನ್ನಷ್ಟೇ ನೆನಪಿಸುತ್ತದೆ. ದನಗಳಿಗೆ ಮೇವು ಸಿಗುವುದೇ ದುಸ್ತರವಾಗಿ ಹೋಗಿದೆ. ಈಗ ಆರಂಭಗೊಂಡಿರುವ ಬರದ ಹಾವಳಿ ಒಂದೇ ಎರಡೇ....

ಘೋರ ಸನ್ನಿವೇಶ

ಕರ್ನಾಟಕದ 26 ಜಿಲ್ಲೆಗಳಲ್ಲಿ 21 ಜಿಲ್ಲೆಗಳು ಬರಗಾಲವೆಂಬ ಜವರಾಯನ ದವಡೆಗೆ ಸಿಲುಕಿವೆ. 5 ರಲ್ಲಿ ಸಾಧಾರಣ ಮಳೆ, ಇನ್ನು ಮುಂದಿನ ಮಳೆಗಳು ಬಾರದಿದ್ದರೆ ಉತ್ತರ ಕನ್ನಡ, ಕೊಡಗು

ಕೂಲಿಗಾಗಿಯು ಕಾಯುತ್ತಾ....



ಜಿಲ್ಲೆಗಳಂತಹಲ್ಲಿ ಪರಿಸ್ಥಿತಿ ಕೆಡಲೂಬಹುದಂತೆ. 175 ತಾಲೂಕಿನಲ್ಲಿ ಸರಿಸುಮಾರು 150 (ಸರ್ಕಾರ138 ಎನ್ನುತ್ತದೆ) ತಾಲೂಕುಗಳಲ್ಲಿ ಬರ ಬಂದಿದೆ. ಇದರಲ್ಲಿ 79 ತಾಲೂಕುಗಳಲ್ಲಿ ತೀರಾ ಕಡಿಮೆ, 38 ರಲ್ಲಿ ತೀವ್ರ ಮಳೆಯೇ ಇಲ್ಲದ, ಒಮ್ಮೆಯೂ ಬಿತ್ತದ ತಾಲೂಕುಗಳಿವೆ. ಆರಂಭದಲ್ಲಾದ ಮಳೆಗೆ ಬಿತ್ತಿದ ಶೇ 1.5 ರಷ್ಟು ಭೂಮಿಯಲ್ಲಿಯೂ ಸಹ ಸಸಿ ಮೊಳೆಯುತ್ತಿದ್ದರೂ ಈಗ ಪೂರ್ಣ ಸತ್ತು ಹೋಗಿವೆ. ಪ್ರತಿವರ್ಷ ಬೀಳುತ್ತಿದ್ದ ಮಳೆಯ ಪ್ರಮಾಣಗಳ ಅಂಕಿ-ಸಂಖ್ಯೆಗಳನ್ನು ಗಮನಿಸಿದರೆ ಸಾಕು ಬಹಳಷ್ಟು ತಾಲೂಕುಗಳಲ್ಲಿ ಈ ಸಲದ ಬರ 1972 ಮತ್ತು 1993 ರ ಕ್ಕಿಂತಲೂ ಘೋರವಾಗಲಿದೆ. ಆ ವರುಷಗ ಮಳೆಗಿಂತಲೂ ಕುಸಿದಿರುವುದು ದಾಖಲಾಗಿದೆ.

ಬರೀ ಮಾತಿನ ಸರ್ಕಾರ

ಈ ಹೃದಯ ಹಿಂಡುವ ಧಾರುಣ ಪರಿಸ್ಥಿತಿಯ ಬಗ್ಗೆ ಪತ್ರಿಕೆಗಳು, ಟಿ.ವಿ. ಮಾಧ್ಯಮಗಳು ಎಷ್ಟೆಲ್ಲಾ ಸಾರಿ ಸಾರಿ ವಿವರಿಸಿವೆ. ಜನ ಮತ್ತು ಜಾನುವಾರುಗಳನ್ನು ಉಳಿಸಲು ಕೈಗೊಳ್ಳಬೇಕಾದ ತಕ್ಷಣದ ಕ್ರಮಗಳತ್ತ ಗಮನ ಸೆಳೆದಿವೆ. ಬರದ ಭಾದೆಯ ಮುನ್ಸೂಚನೆಯಿದ್ದರೂ ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಮಂಜಾಗರೂಕತಾ ಕ್ರಮ ವಹಿಸಲಿಲ್ಲ. ಎಷ್ಟೋ ಜಿಲ್ಲೆಗಳ ಆಡಳಿತ ಪರಿಸ್ಥಿತಿಯ ಗಂಭೀರತೆಯ ಹಾಗೂ ತಕ್ಷಣ ಕ್ರಮಗಳ ಬಗ್ಗೆ ವಿವರ ವರದಿ ಕಳಿಸಿದರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಕಣ್ಣೆತ್ತಿ ನೋಡಲಿಲ್ಲ. ಕಂದಾಯ ಸಚಿವರು ಅಂತಹ ಕಡೆ ಪೂರ್ಣ ಭೇಟಿಯೂ ನೀಡಿಲ್ಲ, ಕೊನೆಗೆ ಈಗ ಆರಂಭಗೊಂಡ ವಿಧಾನ ಸಭೆಯಲ್ಲಿ ವಿರೋಧ ಪಕ್ಷಗಳು ಗದ್ದಲವೆಬ್ಬಿಸಿ, ಕಲಾಪಗಳು ಸ್ಥಗಿತವಾದರೂ ಸರ್ಕಾರ ಬರೀ ಒಣ ಮಾತುಗಳ ಭರವಸೆಗಳ ಕಾಲ ಹರಣದಲ್ಲೇ ನಿರತವಾಯಿತು. ಕೊನೆಗೂ ಒತ್ತಡದಿಂದಾಗಿ 15 ಅಂಶಗಳ ಕಾರ್ಯಕ್ರಮ ಪ್ರಕಟಿಸಿದರೂ ಅದು ನಿಸ್ಸಾರವಾದ ಅಂಶಗಳಾಗಿವೆ. ಕೃಷ್ಣರವರ ಈ ಹೈಟೆಕ್ ಸರ್ಕಾರ, ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ತಿಂಗಳಾದರೂ ಕಳಿಸದೇ ಇದ್ದಂತಹ ಸ್ಥಿತಿ, ಕ್ರಮವಹಿಸದ ಜಡತೆ, ಜನತೆಯ ಬಗ್ಗೆ ಅದೆಷ್ಟು ತಿರಸ್ಕಾರ, ಅಮಾನವೀಯ ದೃಷ್ಟಿ ತಳೆದಿದೆ ಎಂಬುದರ ಸೂಚಕ. ಜನರು ಅನ್ನ ನೀರಿಲ್ಲದ ತಮ್ಮ ದನಕರು, ಜಮೀನು, ಆಸ್ತಿಪಾಸ್ತಿ ಮಾರಿಕೊಳ್ಳುವಂತಾಗಿರುವಾಗ ಅವರನ್ನು ದುಷ್ಟ ಊಳಿಗಮಾನ್ಯ ಶ್ರೀಮಂತರ, ಜಮೀನ್ದಾರರ ಬಾಯಿಗೆ ತಳ್ಳುವ ಹುನ್ನಾರವೇ? ಇಷ್ಟೆಲ್ಲಾ ಆದರೂ ಬಾಯಲ್ಲಿ ಹಣ ಬಿಡುಗಡೆಯಾಗಿದೆ ಹೊರತು ಇನ್ನೂ ಜಿಲ್ಲೆಗಳಗೆ ತಲುಪಿಯೇ ಇಲ್ಲ.

ಗಳ ಹಿರಿಯುವ ಬಿಜೆಪಿ

ಅತ್ತ ಬಿಜೆಪಿ ಉರಿವ ಮನೆಯ ಗಳ ಹಿರಿಯುವ, ಮೈ ಕಾಸಿಕೊಳ್ಳುವ ಕೆಲಸದಲ್ಲಿ ಮಗ್ನವಾಗಿದೆ. ರಾಜ್ಯ ಸರ್ಕಾರ ಕಳಿಸಿದ ಪ್ರಸ್ತಾವನೆಗಳನ್ನು ಒಪ್ಪಬಾರದೆಂದೂ, ಈಗ ಹಣದ ಸಹಾಯ ನೀಡಬಾರದೆಂದೂ ರಾಜ್ಯ ಅಧ್ಯಕ್ಷ ಸೇಡಂ ಮುಂತಾದವರು ಬಹಿರಂಗವಾಗಿ ನಿರ್ಲಜ್ಜವಾಗಿ ಹೇಳುತ್ತಿದ್ದಾರೆ.ರಾಜ್ಯದ ವರದಿ ಇರುವಾಗಲೂ ಕೇಂದ್ರ ಸರ್ಕಾರ ಬೇರೆ ಅಧ್ಯಯನ ತಂಡ ಕಳುಹಿಸುತ್ತಿದೆ. ಈ ಭೀಕರ ಪರಿಸ್ಥಿತಿಯನ್ನು ದುಷ್ಟ, ರಾಜಕೀಯಕ್ಕೆ ಬಳಸಲು ಹವಣಿಸುತ್ತಿದೆ. ಕಾಂಗ್ರೆಸ್-ಬಿಜೆಪಿಗಳ ಈ ರಾಜಕೀಯ ಆಟ ಹೇಸಿಗೆ ತರಿಸುವಂತಹದ್ದು.

ಇಂತಹ ಸ್ಥಿತಿಯೆದುರು ಜನತೆ ಕಾಮಗಾರಿಗಾಗಿ, ಮೇವು-ಗೋಶಾಲೆಗಾಗಿ, ನೀರಿಗಾಗಿ ಹೋರಾಟ ಆರಂಭಿಸಿದ್ದಾರೆ. ಇದು ಇನ್ನೂ ವ್ಯಾಪಕಗೊಳ್ಳಲಿದೆ, ತೀವ್ರಗೊಳ್ಳಲಿದೆ.

- ಎಸ್.ವೈ.ಗುರುಶಾಂತ್

ಬಳ್ಳಾರಿ ಬರ : ಜಿಲ್ಲೆಗೆ ಬಡಿದ ದಾರಿದ್ರ್ಯಗಳು

ಬಳ್ಳಾರಿ ಜಿಲ್ಲೆಯು ಮತ್ತೊಂದು ಭೀಕರ ಬರಗಾಲವನ್ನು ಎದುರಿಸುತ್ತಿದೆ. 3 ಲಕ್ಷಕ್ಕೂ ಹೆಚ್ಚಿನ ಎಕರೆ ಪ್ರದೇಶದಲ್ಲಿ ಬಿತ್ತನೆಯಾಗುತ್ತಿದೆ. ಜೋಳ ಹಾಗೂ ಲಕ್ಷ ಎಕರೆ ಪ್ರದೇಶದಲ್ಲಿ ಬಿತ್ತನೆಯಾಗುತ್ತಿದ್ದ ಹತ್ತಿ, ಶೇಂಗಾ ಬೆಳೆಗಳು ಬಿತ್ತನೆಯಾಗಲಿಲ್ಲ.

ಮುಂಗಾರು ಮಳೆಯು ತೀವ್ರ ವಿಫಲವಾಗಿರುವುದರಿಂದ ಈ ಪರಿಸ್ಥಿತಿ [illegible]ಹಾಗಿದೆ.

ಈ ಬೆಳೆಗಳು ಲಕ್ಷಾಂತರ ರೈತ-ಕುಟುಂಬಗಳು ಹಾಗೂ ಲಕ್ಷಾಂತರ ಕೂಲಿಕಾರರ ಕುಟುಂಬಗಳು ಜೀವನದ ಆಧಾರವಾಗಿದ್ದವು. ಜಿಲ್ಲೆಯ ಎಣ್ಣೆ ಗಿರಣಿಗಳ ಹಾಗೂ ಹತ್ತಿಗಿರಣಿಗಳ ಆಧಾರವಾಗಿದ್ದವು.

ಇದೀಗ ಬರಗಾಲದ ಛಾಯೆ ವ್ಯಾಪಕವಾಗಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕಂಡು ಬರುತ್ತಿದೆ. ಸಣ್ಣ ರೈತರು ಕೂಲಿಕಾರರ ಜೀವನ ನಿರ್ವಹಣೆಗಾಗಿ ಗ್ರಾಮಗಳಲ್ಲಿನ ಭೂಮಾಲಿಕರು - ಬಡ್ಡಿ ಸಾಹುಕಾರರ ಹತ್ತಿರ ದುಬಾರಿ ಬಡ್ಡಿಯ ಸಾಲಕ್ಕಾಗಿ ಕೈಯೊಡ್ಡುತ್ತಿದ್ದಾರೆ. ಅನೇಕ ಜನರ ಸಣ್ಣ ಪುಟ್ಟ ಆಸ್ತಿಗಳು ಇವರ ಕೈಗೆ ಸೇರಲ್ಪಡುತ್ತಿವೆ. ಇಲ್ಲವೇ ಒತ್ತೆ ಹಾಕಲ್ಪಡುತ್ತಿವೆ.

ಜಿಲ್ಲೆಯ ಲಕ್ಷಾಂತರ ಸಣ್ಣ ರೈತರು ಹಾಗೂ ಕೂಲಿಕಾರರು ಕುಟುಂಬಗಳಿಗೆ ಕಳೆದ 2-3 ತಿಂಗಳಿಂದಲೇ ಕೂಲಿ ಕೆಲಸ ಬದುಕು ಇಲ್ಲವಾಗಿತ್ತು. ಸಾಮಾನ್ಯವಾಗಿ ಮಾರ್ಚ್ ನಿಂದ ಮೇ ವರೆಗೆ ಕೃಷಿ ಕೆಲಸ ಜನರಿಗೆ ಸಿಗದಾಗಿರುತ್ತದೆ. ಜೂನ್ ತಿಂಗಳಿನಲ್ಲಿ ಸಿಗುವ ಕೃಷಿಕೆಲಸಕ್ಕಾಗಿ ತೀವ್ರ ಹಂಬಲದೊಂದಿಗೆ ಕಾಯ್ದಿದ್ದ ಬಡವರಿಗೆ ತೀವ್ರ ನಿರಾಶೆ ತಂದಿದೆ. ಗಂಜಿಯೂ ಸಿಗದ ಪರಿಸ್ಥಿತಿ ಉಂಟಾಗಿದೆ.

ಮೆಲ್ಲನೆ ಕೂಲಿ ಕೆಲಸಕ್ಕಾಗಿ ನಗರಗಳಿಗೆ ವಲಸೆ ಹೋಗಲು ನೀರಾವರಿ ಪ್ರದೇಶಕ್ಕೆ ಮುದುಕರು ಮಕ್ಕಳು ತೆರಳುತ್ತಿದ್ದಾರೆ. ಒಂದೆರಡು ತಿಂಗಳು ಕಳೆದರೆ ಕಳೆದ ವರ್ಷದ ಮೇ ದಿನ ಸಂಗ್ರಾಹವು ಮುಗಿದ್ದು ಲಕ್ಷಾಂತರ ದನ-ಕರುಗಳಿಗೆ ತೀವ್ರ ಮೇವಿನ ಕೊರತೆ ಉದ್ಭವಿಸಲಿದೆ. ಹಲವಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಈಗಾಗಲೇ ಉದ್ಭವಿಸಿದೆ.


ಇದನ್ನೆಲ್ಲ ಸಮರೋಪಾದಿಯಲ್ಲಿ ಎದುರಿಸಲು ಜಿಲ್ಲಾ ಆಡಳಿತವಾಗಲೀ ಅಥವಾ ದುಃಖತಪ್ತ ಕೂಲಿಕಾರರು ಬಡಜನರನ್ನು ಸಂತೈಸಲು ಜಿಲ್ಲೆಯ 3 ಜನ ಮಂತ್ರಿ ವರ್ಯರೂ ಲಭ್ಯವಿಲ್ಲದಿರುವುದು ವಿಷಾದನೀಯ.

ಜಿಲ್ಲಾ ಉಸ್ತುವಾರಿ ಸಚಿವರು : ಅತ್ಯಂತ ಬರ ಪೀಡಿತ ಹಿಂದುಳಿದ ತಾಲೂಕಾದ ಸಂಡೂರಿನ ಶಾಸಕರು ಆಗಿರುವ ಮಾನ್ಯ ಎಂ.ವೈ.

ಪುಟ 10 ಕ್ಕೆ

ಭಾರತ-ಪಾಕ್ ಶೃಂಗಸಭೆ

ತುಂಬಾ ನಿರೀಕ್ಷೆ ಹುಟ್ಟಿಸಿದ್ದ ಈ ಮಾತುಕತೆ ಪೂರ್ವ ಸಿದ್ಧತೆ ಇಲ್ಲದೆ ಧಿಡೀರನೆ ಮುಗಿದಿದೆ. ಈ ಬಗ್ಗೆ ವಾದ ವಿವಾದಗಳು ಹುಟ್ಟಿವೆ. ಆದರೆ ಆಗಬೇಕಾಗಿರುವುದು ಏನು? ಎಂಬ ಬಗ್ಗೆ ಬೆಳಕು ಚೆಲ್ಲುವ ಲೇಖನಗಳು.



ತುಂಬಾ ಹತ್ತಿರ ಆದರೂ ದೂರ

ಮುಂದುವರಿಯಬೇಕಾದ ಮಾತುಕತೆ

ಕೆ.ಪ್ರಕಾಶ್

ಭಾರೀ ಭರವಸೆಗಳನ್ನು ಸೃಷ್ಟಿಸಿದ್ದ ವಾಜಪೇಯಿ ಮುಷರಫ್‌ರವರ ಆಗ್ರಾ ಶೃಂಗಸಭೆಯು ಯಾವುದೇ ಒಪ್ಪಂದಕ್ಕೆ ಬರಲಾಗದೆ ಕೊನೆಗೊಂಡಿದೆ. ಲಿಖಿತ ಘೋಷಣೆಯನ್ನೊ ಅಥವಾ ಒಪ್ಪಂದವನ್ನೊ ಶೃಂಗಸಭೆಯು ಸೃಷ್ಟಿಸದಿದ್ದರೂ ಭಾರತ-ಪಾಕ್ ನಡುವಿನ ಶಾಂತಿ ಪ್ರಕ್ರಿಯೆಯಲ್ಲಿ ಇದು ಮುಖ್ಯ ಹೆಜ್ಜೆಯಾಗಿದೆ.

ಎರಡು ದೇಶಗಳೂ ತಮ್ಮ ತಮ್ಮ ನಿರ್ದಿಷ್ಟ ನಿಲುವುಗಳಿಗೆ ಅಂಟಿಕೊಂಡಿದ್ದರಿಂದ ಶೃಂಗಸಭೆಯು ನಿರ್ದಿಷ್ಟ ಘೋಷಣೆಯನ್ನು ಮಾಡಲಾಗಲಿಲ್ಲ. ಕಾಶ್ಮೀರ ಪ್ರಶ್ನೆಯನ್ನು ಮೊದಲು ಬಗೆಹರಿಸಿ ನಂತರ ಉಳಿದ ಪ್ರಶ್ನೆಗಳ ಬಗ್ಗೆ ಮಾತನಾಡಬೇಕೆಂಬ ಪಾಕಿಸ್ತಾನದ ಬಿಗಿನಿಲುವಿನಿಂದಾಗಿ ಸಭೆಯು ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ.

ಈ ಸಂದರ್ಭದಲ್ಲಿ ಶೃಂಗಸಭೆಗೆ ಅಗತ್ಯವಾಗಿದ್ದ ಪೂರ್ವ ತಯಾರಿಯನ್ನು ಭಾರತ ಸರ್ಕಾರ ಸರಿಯಾಗಿ ಮಾಡದಿದ್ದುದು ಮತ್ತು ನಿರ್ದಿಷ್ಟ ಅಜೆಂಡಾ ರೂಪಿಸದಿದ್ದದ್ದು ಸ್ಪಷ್ಟವಾಗಿ ಎಂದ್ದುಕಂಡಿದೆ.

ಪಾಕಿಸ್ತಾನದ ಅಧ್ಯಕ್ಷ ಪರ್ವೇಜ್ ಮುಷರಫ್‌ರವರು ಮಾತುಕತೆಗಳಿಗೆ ಅಜೆಂಡಾಗಳನ್ನು ಹೊಂದುವ ಬಗ್ಗೆ ಆಸಕ್ತಿ ತೋರಲಿಲ್ಲ ಎಂದು ಭಾರತ ಸರ್ಕಾರ ಹೇಳಿದೆ, ಆದರೆ ಮಾತುಕತೆಗಳಿಗೆ ಮುತುವರ್ಜಿಯನ್ನು ವಹಿಸಿದ ಭಾರತ ಸರ್ಕಾರವು ಸಭೆಯ ಸಮರ್ಪಕ ತಯಾರಿಗಾಗಿ ಯೋಜನೆಯನ್ನು ರೂಪಿಸಿಕೊಳ್ಳಬಹುದಾಗಿತ್ತು.

ಸಹಾಯಕವಾದ ಶೃಂಗಸಭೆ

ಈ ಮಿತಿಗಳ ನಡುವೆಯೂ ಎರಡೂ ದೇಶಗಳ ನಡುವೆ ತಮ್ಮ ತಮ್ಮ ಅಭಿಪ್ರಾಯಗಳನ್ನು ನಿಲುವುಗಳನ್ನು ಹಂಚಿಕೊಳ್ಳಲು ಮತ್ತು ಅರ್ಥಮಾಡಿಕೊಳ್ಳಲು ಸಭೆಯು ಖಂಡಿತವಾಗಿ ಸಹಾಯ ಮಾಡಿದೆ. ಶಾಂತಿಯುತವಾಗಿ, ಮುಂದಿನ ಮಾತುಕತೆಗಳನ್ನು ನಡೆಸಲು ಇದು ಸಹಾಯಕವಾಗುತ್ತದೆ. ಜೊತೆಗೆ ಹಲವಾರು ವರ್ಷಗಳ ನಂತರ ದ್ವಿಪಕ್ಷೀಯ ಮಾತುಕತೆಗಳು ನಡೆದದ್ದು ಸಹ ಸ್ವಾಗತಾರ್ಹವಾದದಾಗಿದೆ. ಮಾತುಕತೆಗಳು ವಿಫಲವಾಗಲಿಲ್ಲ ಎನ್ನವುದಕ್ಕೆ ಸಾಕ್ಷಿಯಾಗಿ ಎರಡೂ ದೇಶಗಳ ವಿದೇಶಾಂಗ ಮಂತ್ರಿಗಳು ನೀಡಿರುವ ಹೇಳಿಕೆಗಳು ಇವೆ. ಜೊತೆಗೆ ಮುಷರಫ್ ನೀಡಿರುವ ಆಹ್ವಾನವನ್ನು ವಾಜಪೇಯಿಯವರು ಒಪ್ಪಿಕೊಂಡಿರುವುದೂ ಕೂಡಾ ಈ ಹಿನ್ನೆಲೆಯಲ್ಲಿ ಗಮನಿಸಬೇಕಾಗಿದೆ.

ಜುಲೈ 14 ರಿಂದ 16ರವರೆಗೆ ಆಗ್ರಾದಲ್ಲಿ ನಡೆದ ಶೃಂಗಸಭೆಯಲ್ಲಿ ಸುಮಾರು 6 ಗಂಟೆಗಳ ಕಾಲ ಚರ್ಚೆ ನಡೆಸಿದ ಮುಷರಫ್-ವಾಜಪೇಯಿರವರ ಮಾತುಕತೆಗಳು, ಯಾವುದೇ ತೀರ್ಮಾನಕ್ಕೆ ಬರಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗದಿದ್ದುದಕ್ಕೆ ಪಾಕಿಸ್ತಾನೀ ನಿಯೋಗದ ಕಾಶ್ಮೀರ ವಿಚಾರವನ್ನು ಮೊದಲು ಚರ್ಚಿಸಬೇಕೆಂಬ ನಿಲುವು ಕಾರಣವಾಗಿದೆ. ಪಾಕಿಸ್ತಾನವು ಕಾಶ್ಮೀರವನ್ನು ಇಡೀ ಶೃಂಗಸಭೆಯ ಕೇಂದ್ರ ವಿಷಯವನ್ನಾಗಿ ಮಾಡಿತು. ಮತ್ತೊಂದು ಕಡೆ ಭಾರತವು, ಕಾಶ್ಮೀರವನ್ನು ಸೇರಿದಂತೆ ಅಂತರ್‌ಗಡಿ ಭಯೋತ್ಪಾದನೆ, ವಾಣಿಜ್ಯ ಮತ್ತು ವ್ಯಾಪಾರ, ಯುದ್ಧ ಖೈದಿಗಳು, ಇತ್ಯಾದಿ ಸಮಗ್ರವಾದ ಅಂಶಗಳಿಗೆ ಒತ್ತು ನೀಡಿತು. ಜೊತೆಗೆ ಆಗ್ರಾ ಸಭೆಯನ್ನು ಹಿಂದಿನ ಶಿಮ್ಲಾ ಮತ್ತು ಲಾಹೋರ್ ಒಪ್ಪಂದಗಳ ಮುಂದುವರಿಕೆಯಾಗಿ ಭಾರತ ಪರಿಗಣಿಸಿತು.

ಮುಷರಫ್‌ರವರು ವಾಜಪೇಯಿಯವರ ಆಹ್ವಾನವನ್ನು ಸ್ವೀಕರಿಸಿದ ದಿನದಿಂದ ಹಿಡಿದು ಕಾಶ್ಮೀರವೇ ಪ್ರಧಾನ ವಿಷಯವೆಂದು ಮಾತನಾಡಲು ಪ್ರಾರಂಭಿಸಿದರು. ಇಂತಹ ನಿಲುವಿನ ಭಾಗವಾಗಿಯೇ ಪಾಕಿಸ್ತಾನದ ಕಾರ್ಯಭಾರ ಕಛೇರಿಯು ಹುರಿಯತ್ ಮುಖಂಡರನ್ನು ಚಹಾ ಕೂಟಕ್ಕೆ ಆಹ್ವಾನಿಸಿದ್ದು ಮತ್ತು ಮುಷರಫ್‌ರವರು ಇವರೊಂದಿಗೆ ಪ್ರತ್ಯೇಕ ಮಾತುಕತೆಯನ್ನು ನಡೆಸಿದ್ದು ಈ ನಿಲುವಿನಿಂದಾಗಿಯೇ ಮಾತುಕತೆಗಳಲ್ಲಿ ಪಾಕಿಸ್ತಾನವು ಇತರೆ ಸಂಬಂಧಿತ ವಿಚಾರಗಳನ್ನು ತೆಗೆದುಕೊಳ್ಳಲು ಒಪ್ಪದಿದ್ದುದ್ದು ದುರದೃಷ್ಟಕರ ಸಂಗತಿ. ಇತರೆ ವಿಚಾರಗಳಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ತೀರ್ಮಾನಗಳಿಗೆ ಬಂದಿದ್ದರೆ ಮಾತುಕತೆಗಳಿಗೆ ಮತ್ತು ಸಂಬಂಧ ಸುಧಾರಣೆಗೆ ಅಗತ್ಯ ವಾತಾವರಣ ನಿರ್ಮಾಣವಾಗುತ್ತಿತ್ತು.

ಪಾಕಿಸ್ತಾನವು ಕಾಶ್ಮೀರ ವಿಚಾರವನ್ನು ಧಾರ್ಮಿಕ ನೆಲೆಯಲ್ಲಿ ಎರಡು ರಾಷ್ಟ್ರಗಳ ಸಿದ್ಧಾಂತದ ಆಧಾರದಲ್ಲಿ ಪ್ರತಿಪಾದನೆ ಮಾಡುತ್ತಾ ಬರುತ್ತಿದೆ. ಆದರೆ ಇದನ್ನು ಭಾರತವು ತಿರಸ್ಕರಿಸಿದೆ. ಕಾಶ್ಮೀರದಲ್ಲಿ ಭಯೋತ್ಪಾದನೆಯಿಂದ ಸಾವಿರಾರು ಜೀವಗಳು ಬಲಿಯಾಗಿವೆ. ದೇಶದೊಳಗೆ ನುಸುಳುವ

➡

ಶಿಮ್ಲಾ ಒಪ್ಪಂದದ ಪ್ರಾಮುಖ್ಯತೆ

ಆಗ್ರಾ ಶೃಂಗಸಭೆಯು ಕೊನೆಗೊಂಡ ರೀತಿ ನಿರಾಶಾದಾಯಕವಾಗಿದ್ದರೂ ಸಹ, ಎಲ್ಲವೂ ಮುಗಿದೇ ಹೋಯಿತು ಎಂದು ಯೋಚಿಸಬೇಕಾದ ಕಾರಣವಿಲ್ಲ. ಭಾರತ ಪಾಕ್ ನಡುವೆ ಬಾಂಧವ್ಯ ಉತ್ತಮಗೊಳ್ಳಬೇಕೆಂಬುದು ಭಾರತದ ಹಾಗೂ ಪಾಕಿಸ್ತಾನದ ಬಹುಪಾಲು ಜನರ ಆಶಯವಾಗಿದೆ. ಇದನ್ನೇ ತಳಪಾಯ ಮಾಡಿಕೊಂಡು ಈ ಆಶಯವನ್ನು ಇನ್ನೂ ಗಟ್ಟಿಗೊಳಿಸಬೇಕಾದ ಅವಶ್ಯಕತೆ ಇದೆ. ಮುಂದೆ ಬರಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಮಂಡಳಿ ಸಭೆ ಹಾಗೂ ಸಾರ್ಕ್ ದೇಶಗಳ ಶೃಂಗಸಭೆಗಳು ಮಾತುಕತೆಯನ್ನು ಮತ್ತೆ ಪ್ರಾರಂಭಿಸಲು ಒಳ್ಳೆಯ ಅವಕಾಶವನ್ನು ಕಲ್ಪಿಸಲಿದೆ. ಎರಡೂ ದೇಶಗಳ ನಾಯಕರು ಈ ಅವಕಾಶವನ್ನು ಕಳೆದುಕೊಳ್ಳಬಾರದು.

ಎರಡೂ ನೆರೆಹೊರೆಯ ನಡುವೆ ಮಾತುಕತೆಗೆ ಒಂದು ಉತ್ತಮ ನೆಲೆಯನ್ನು 1972 ರ ಶಿಮ್ಲಾ ಒಪ್ಪಂದವು ಒದಗಿಸುತ್ತದೆ ಎಂಬುದು ಮುಖ್ಯ ಅಂಶ. ಈ ಒಪ್ಪಂದದ ಬಹುಮುಖ್ಯ ಷರತ್ತೇನೆಂದರೆ ಎರಡೂ ಕಡೆಯವರು ತಮ್ಮ ಎಲ್ಲಾ ವಿವಾದಗಳನ್ನು ಸೌಹಾರ್ದಾ ಮಾತುಕತೆ ಗಳ ಮೂಲಕವೇ ಪರಿಹರಿಸಿ ಕೊಳ್ಳಬೇಕು ಮತ್ತು ಯಾವುದೇ ಮೂರನೇ ಶಕ್ತಿಗೆ ಮೂಗು ತೂರಿಸಲು ಅವಕಾಶವಿರಬಾರದು ಎಂಬುದೇ ಆಗಿದೆ. 1972 ರಲ್ಲಿ ಈ ಒಪ್ಪಂದ ಸಹಿ ಆದಾಗ ಇಡೀ ವಿಶ್ವ ಸಮುದಾಯ ಈ ಶರತ್ತನ್ನು ಸ್ವಾಗತಿಸಿದೆ. ಈಗಂತೂ, ಎರಡೂ ದೇಶಗಳು ತಮ್ಮ ಅಣ್ವಸ್ತ್ರಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿರುವಾಗ, ಅದು ಹೆಚ್ಚು ಪ್ರಸ್ತುತವಾಗುತ್ತದೆ.

ನಿಜ ಸಂಗತಿಯೆಂದರೆ ಶಿಮ್ಲಾ ಒಪ್ಪಂದಕ್ಕೆ ಸಹಿ ಹಾಕುವ ಸಂಧರ್ಭದಲ್ಲಿ ದಿವಂಗತ ಶ್ರೀ ಜಡ್.ಎ.ಭುಟ್ಟೊರವರು "ಈಗಿನ ನಿಯಂತ್ರಣ ರೇಖೆಯನ್ನೇ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಶಾಸನಬದ್ಧ ಗಡಿಯನ್ನಾಗಿ ಮಾಡೋಣ" ಎಂದು ಹೇಳಿದ್ದರು. ಅವರ ದೇಶದ ಸನ್ನಿವೇಶದ ಹಿನ್ನೆಲೆಯಲ್ಲಿ ಹಾಗೆ ಮಾಡಲು ಪರಿಸ್ಥಿತಿ ಪಕ್ವವಾಗಿಲ್ಲ ಎಂಬುದಷ್ಟೇ ಅವರ ವಿನಂತಿಯಾಗಿತ್ತು.

ಕಾಶ್ಮೀರವನ್ನು ಕುರಿತು ವಿಶ್ವಸಂಸ್ಥೆ ಸಾಮಾನ್ಯ ಮಂಡಳಿಯ ನಿರ್ಣಯವನ್ನು ಶಿಮ್ಲಾ ಒಪ್ಪಂದವು ಪರಿಣಾಮಕಾರಿಯಾಗಿ ಅನೂರ್ಜಿತಗೊಳಿಸಿದೆ. ಶಿಮ್ಲಾ ಒಪ್ಪಂದದ ಮತ್ತೊಂದು ಪ್ರಮುಖ ಅಂಶವೇನೆಂದರೆ ಅದು ಎರಡೂ ದೇಶಗಳ ನಡುವೆ ಕಾಲು ಶತಮಾನ ಯಾವುದೇ ಬಹಿರಂಗ ಯುದ್ಧಗಳು ನಡೆಯದಂತೆ ತಡೆದಿದೆ. ಕಾರ್ಗಿಲ್ ಯುದ್ಧ ಕೂಡ ಅದರ ಉಪಯುಕ್ತತೆಯನ್ನು ತೊಡೆದು ಹಾಕಲು ಸಾಧ್ಯವಿಲ್ಲ.



ಗಾಂಧಿ ಸಮಾಧಿಗೆ ಪುಷ್ಪಗುಚ್ಛ

ಕಾಶ್ಮೀರದಲ್ಲೀಗ...

ಇದೇ ಸಂದರ್ಭದಲ್ಲಿ ದೇಶದೊಳಗಿನ ಪರಿಸ್ಥಿತಿಯನ್ನು ಭಾರತ ಸರ್ಕಾರ ಕಡೆಗಣಿಸಲು ಸಾಧ್ಯವಿಲ್ಲ. ಹಾಗೇನಾದರೂ ಮಾಡಿದರ ಅದು ದೇಶದ ಬೆಲೆಯನ್ನೇ ತೆರಬೇಕಾಗುತ್ತದೆ. ಕಾಶ್ಮೀರದ ಜನತೆಯ ಅವಶ್ಯಕತೆಗಳನ್ನು ಮತ್ತು ಅವರ ಭಾವನೆಗಳತ್ತ ಗಮನ ಹರಿಸಬೇಕಾಗಿರುವುದು ಶೃಂಗಸಭೆಯ ನಂತರದ ಹಂತದಲ್ಲಿ ತೀವ್ರಗೊಂಡಿರುವ ಭಯೋತ್ಪಾದನೆಯ ಹಿನ್ನೆಲೆಯಲ್ಲಿ ಇಂದು ತುರ್ತಿನ ಅಗತ್ಯವಾಗಿದೆ.

ಕಾಶ್ಮೀರವು ತನಗೆ ಸೇರಬೇಕೆಂಬ ಪಾಕಿಸ್ತಾನದ ವಾದದಲ್ಲಿ ಯಾವುದೇ ಹುರುಳಿಲ್ಲ. ಒಂದು ಮತಧರ್ಮವು ಒಂದು ರಾಷ್ಟ್ರೀಯತೆಗೆ ಆಧಾರ ವಾಗಲು ಸಾಧ್ಯವಿಲ್ಲ. ಎರಡು ದೇಶಗಳು ಎಂಬ ಸಿದ್ಧಾಂತವನ್ನು ಕಾಶ್ಮೀರದ ಜನತೆ, ಪಾಕಿಸ್ತಾನ ಪ್ರೇರಿತ ಸೈನಿಕರು ಒಳನುಸುಳಿದಾಗ ಅವರ ವಿರುದ್ಧ ಸಶಸ್ತ್ರ ಹೋರಾಟ ಮಾಡಿ ಹಿಂದಕ್ಕೆ ಕಳಿಸುವುದುರ ಮೂಲಕ, ತಿರಸ್ಕರಿಸಿದ್ದಾರೆ. ಭಾರತದ ಸೈನ್ಯ ಅಲ್ಲಿಗೆ ಹೋಗುವುದಕ್ಕಿಂತ ಬಹಳ ಮುಂಚೆಯೇ ಕಾಶ್ಮೀರದ ಜನತೆ ನಡೆಸಿದ ಈ ಹೋರಾಟ ನಿಜಕ್ಕೂ ಜನತಾ ಸಮರವೇ ಸರಿ. ಕಾಶ್ಮೀರವನ್ನು ಒಂದು ಸ್ವತಂತ್ರ ದೇಶವನ್ನಾಗಿ ಮಾಡಬೇಕೆಂಬ ಅಂದಿನ ಮಹಾರಾಜರ ಹುನ್ನಾರವನ್ನು ವಿಫಲಗೊಳಿಸಿ ತಮ್ಮ ಆಶೋತ್ತರಗಳ ಪೂರೈಕೆಗೆ ಜಾತ್ಯಾತೀತ ಭಾರತಕ್ಕೆ ಸೇರಬೇಕೆಂದು ತೀರ್ಮಾನ ಮಾಡಿದರು. ಅವರ ಒಂದು ವಿಶಿಷ್ಟ ಸಂಸ್ಕೃತಿಯ ಕಾರಣದಿಂದಾಗಿ, ಇಡೀ ಉತ್ತರ ಭಾರತ ಭೀಕರ ಕೋಮುದಳ್ಳುರಿ ಯಲ್ಲಿ ಕುದಿಯುತ್ತಿದ್ದಾಗ, ಕಾಶ್ಮೀರದ ಜನ ಶಾಂತರಾಗಿದ್ದರು ಮತ್ತು ಕೋಮು

ಭಯೋತ್ಪಾದಕರು, ತರಬೇತಿ ಪಡೆಯಲು ಗಡಿದಾಟಿಹೋದ ಕಾಶ್ಮೀರ ಯುವಕರು ಮಾತ್ರವಾಗಿರದೆ ಆಫ್ಘಾನಿಸ್ತಾನದ ಭಯೋತ್ಪಾದಕರೂ ಸೇರಿದ್ದಾರೆ. ಇಂತಹವರನ್ನು ಮಾತೃಭೂಮಿಗಾಗಿ ಹೋರಾಡುತ್ತಿರುವ ಪ್ಯಾಲೆಸ್ಟೀನಿಯರ ಜೊತೆ ಮುಷರಫ್‌ರವರು ಹೋಲಿಸುವುದು ಸರಿಯಾದುದಲ್ಲ.

ಶೃಂಗಸಭೆಯ ಫಲಶೃತಿಯನ್ನು ಕಾತುರದಿಂದ ನಿರೀಕ್ಷಿಸುತ್ತಿದ್ದ ಪಾಕಿಸ್ತಾನ ಮತ್ತು ಭಾರತದ ಜನತೆಗೆ ನಿರಾಸೆಯಂತೂ ಆಗಿದೆ. ಎರಡೂ ದೇಶಗಳ ನಡುವೆ ಶಾಂತಿ ಮತ್ತು ಸಂಬಂಧಗಳನ್ನು ಬಯಸುತ್ತಿದ್ದ ಜನರ ದೃಷ್ಟಿಯಿಂದ ಕಾಶ್ಮೀರ ಮಾತ್ರವಲ್ಲದೆ, ಉಳಿದ ವಿಚಾರಗಳ ಬಗ್ಗೆಯೂ ಚರ್ಚಿಸುವುದು ಅಗತ್ಯವಾಗಿತ್ತು.

ಶೃಂಗಸಭೆಯು ಪೂರ್ಣಗೊಳ್ಳದಿದ್ದಕ್ಕೆ ಪಾಕಿಸ್ತಾನದಲ್ಲಿರುವ ಮೂಲಭೂತವಾದಿ ಸಂಘಟನೆಗಳು ಸಂತೋಷ ವ್ಯಕ್ತಪಡಿಸಿವೆ. ಹೊಂದಾಣಿಕೆ ಮಾಡಿಕೊಳ್ಳದಿರುವುದಕ್ಕೆ ಲಷ್ಕರ್-ಇ-ತೋಯಿಬಾ ಸಂಘಟನೆಯು ಜನರಲ್ ಮುಷರಫ್‌ರವರನ್ನು 'ಹಿರೋ' ಎಂದು ಬಣ್ಣಿಸಿದೆ. ಹಿಂದೆ ವಾಜಪೇಯಿಯವರು ಲಾಹೋರ್ ಯಾತ್ರೆ ಸಂದರ್ಭದಲ್ಲಿ ಮೀನಾರ್-ಇ-ಪಾಕಿಸ್ತಾನಕ್ಕೆ ಭೇಟಿ ನೀಡಿದಾಗ ಅಲ್ಲಿನ ಮೂಲಭೂತವಾದಿಗಳು ಅದನ್ನು ಶುದ್ಧೀಕರಿಸಬೇಕೆನ್ನುವ ಮಾತನಾಡಿದರು. ಅಲ್ಲಿನ ಮೂಲಭೂತವಾದಿಗಳಿಗೆ, ಪರಿಸ್ಥಿತಿಯನ್ನು ತಿಳಿಗೊಳಿಸುವ ಯಾವುದೇ ಪ್ರಯತ್ನವೂ ಇಷ್ಟವಿಲ್ಲ. ಸಾಮಾನ್ಯ ಸ್ಥಿತಿಗೆ ಕಾಶ್ಮೀರ ಬಂದರೆ ತಮ್ಮ ಕುಕೃತ್ಯವಗಳಿಗೆ ತೆರಬೀಳಬಹುದೆಂಬ ಆತಂಕ ಇವರಿಗಿದೆ.

ಇದೇ ರೀತಿ ಭಾರತದೊಳಗಿನ ಮೂಲಭೂತವಾದಿಗಳು ಸಹ ಬಯಸುತ್ತಾರೆ. ಮುಷರಫ್ ಭೇಟಿ ನೀಡಿದ ಸ್ಥಳಗಳನ್ನು ಗಂಗಾಜಲ ಮತ್ತು ಗೋ ಮೂತ್ರದಿಂದ ಶುದ್ಧೀಕರಿಸಬೇಕೆಂದು ಹಿಂದೂ ಮೂಲಭೂತವಾದಿಗಳು ಕರೆ ನೀಡಿದ್ದರು. ಶಿವಸೇವನೆಯು ಶೃಂಗಸಭೆಯನ್ನು ಪೂರ್ಣವಾಗಿ ವಿರೋಧಿಸಿತು. ಶೃಂಗಸಭೆಯು ವಿಫಲಗೊಳ್ಳಲು ಮತ್ತು ಆ ಮೂಲಕ ಮುಸ್ಲಿಂ-ವಿರೋಧಿ ಪ್ರಚಾರವನ್ನು ನಡೆಸಲು ಸಂಘ ಪರಿವಾರವು ಬಯಸಿತ್ತೆಂಬುದು ಗುಟ್ಟಿನ ವಿಚಾರವೇನಲ್ಲ.

ಬಿಜೆಪಿಯ ಹಿಂದಿನ ಅವತಾರವಾದ ಜನಸಂಘವು ಶಿಮ್ಲಾ ಒಪ್ಪಂದವನ್ನು ಖಂಡತುಂಡವಾಗಿ ವಿರೋಧವಮಾಡಿತ್ತು. ಇಂದಿರಾಗಾಂಧಿ ಮತ್ತು ಝುಲ್ಫಿಕರ್ ಅಲಿ ಭುಟ್ಟೋ ನಡುವೆ ಚರ್ಚೆಗಳನ್ನು ಸಂಸತ್ತಿನ ಒಳಗೆ ಮತ್ತು ಸಂಸತ್ತಿನ ಹೊರಗೆ ತೀವ್ರವಾಗಿ ವಿರೋಧ ಮಾಡಲಾಗಿತ್ತು. ಇದಕ್ಕೆ ನಾಯಕತ್ವ ಕೊಟ್ಟಿದ್ದವರು ಈಗ ಪ್ರಧಾನಿಯಾಗಿರುವ ಶ್ರೀ ವಾಜಪೇಯಿಯವರೇ ಎಂಬುದು ಗಮನಾರ್ಹ. ಈಗ ವಾಜಪೇಯಿಯವರು ಶಿಮ್ಲಾ ಒಪ್ಪಂದದ ಆಧಾರದಲ್ಲಿ ಚರ್ಚೆಗಳು ನಡೆಯಬೇಕೆಂದು ಹೇಳುತ್ತಾರೆ. ಆಗ್ರಾ ಸಭೆಯಲ್ಲಿ ಯಾವುದೇ ಒಪ್ಪಂದಕ್ಕೆ ನಾವು ಬರದೇ ಇರುವುದು ಸಕಾರಾತ್ಮಕ ಬೆಳವಣಿಗೆ, ಏಕೆಂದರೆ ಶಿಮ್ಲಾ ಒಪ್ಪಂದದ ರೀತಿಯಲ್ಲಿ ನಾವಿಲ್ಲಿ ಏನನ್ನೂ ಕಳೆದುಕೊಂಡಿಲ್ಲ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಮುಂದಿನ ಉತ್ತರ ಪ್ರದೇಶ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಬಗ್ಗೆ ಅಪನಂಬಿಕೆಯನ್ನು ಹುಟ್ಟಿಸಲು ಇವರು ಬಯಸುತ್ತಿದ್ದಾರೆ.



ಜ.ಮುಷರಫ್ ಜೊತೆಗೆ ಮಹೇಶ್ ಭಟ್, ಯೆಚೂರಿ, ಅಮರಸಿಂಗ್, ಮುಲಾಯಂ ಸಿಂಗ್ ಯಾದವ್, ಸೋನಿ ರಾಜ್ದಾನ್, ಹರ್ಕಿಶನ್ ಸಿಂಗ್ ಸುರ್ಜಿತ್

ಪಾಕಿಸ್ತಾನದ ಮತ್ತು ಭಾರತದ ಮೂಲ ಭೂತವಾದಿಗಳಿಗೆ ಕಾಶ್ಮೀರದ ಸಮಸ್ಯೆಯನ್ನು ಪರಿಹಾರ ಮಾಡುವ ಬಗ್ಗೆ ಆಸಕ್ತಿಯಿಲ್ಲ. ತಮ್ಮ ರಾಜಕೀಯ ಅಸ್ತಿತ್ವವನ್ನು ಸಮಸ್ಯೆಯ ಮುಂದುವರಿಕೆಯಲ್ಲಿ ಕಾಣುತ್ತಾರೆ. ಪರಿಹಾರವನ್ನು ಧಾರ್ಮಿಕ ನೆಲೆಯಲ್ಲಿ ಕಾಣುತ್ತಾರೆ. ಪಾಕಿಸ್ತಾನದಲ್ಲಿರುವ ಮೂಲಭೂತವಾದಿಗಳು ಕಾಶ್ಮೀರದಲ್ಲಿ ಮುಸ್ಲಿಂ ಸಮುದಾಯ ಹೆಚ್ಚಿಗಿರುವುದರಿಂದ ಮುಸ್ಲಿಂ ಪಾಕಿಸ್ತಾನಕ್ಕೆ ಸೇರಬೇಕೆನ್ನುವ ವಾದ ಮಾಡಿದರೆ, ಇಂತಹುದೇ ನೆಲೆಯಲ್ಲಿ ಭಾರತದಲ್ಲಿರುವ ಆರ್.ಎಸ್.ಎಸ್. ನಂತಹ ಹಿಂದೂ ಕೋಮುವಾದಿ ಶಕ್ತಿಗಳು ಜಮ್ಮು ಕಾಶ್ಮೀರ ರಾಜ್ಯವನ್ನು ಹಿಂದೂ ಜಮ್ಮು ಮುಸ್ಲಿಂ ಕಾಶ್ಮೀರ, ಬೌದ್ಧ ಲಡಕ್ ಎಂದು ಮೂರು ಭಾಗ ಮಾಡಲು ಬಯಸುತ್ತಾರೆ.

ಆದರೆ ಕಾಶ್ಮೀರದ ಜನತೆ ಹಿಂದಿನಿಂದಲೂ ಇಂತಹ ವಿಭಜನೆಯನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಭಾರತ ಉಪಖಂಡದಿಂದ ಬ್ರಿಟಿಷರು ಹೊರಟ ನಂತರ, ಭಾರತ ಒಕ್ಕೂಟಕ್ಕೆ ಸೇರುವಂತೆ ಕಾಶ್ಮೀರದ ಮಹಾರಾಜ ಹರಿಸಿಂಗ್‌ನನ್ನು (ಈತ ಸ್ವತಂತ್ರ ಕಾಶ್ಮೀರ ದೇಶದ ರಾಜನಾಗಿರಲು ಬಯಸಿದ್ದ) ಒತ್ತಾಯಿಸಲು ಅಲ್ಲಿನ ಜನ ಧರ್ಮದ ನೆಲೆಯನ್ನು ಮೀರಿ ನ್ಯಾಷನಲ್ ಕಾನ್ಫರೆನ್ಸ್‌ನ ನೇತೃತ್ವದಲ್ಲಿ ಹೋರಾಟ ನಡೆಸಿದ್ದಾರೆ. ಆಗ ಅದಕ್ಕೊಂದು ಕೋಮು ಬಣ್ಣ ನೀಡಲು ಬಯಸಿದ್ದು ಆರ್.ಎಸ್.ಎಸ್. ಸ್ಥಳೀಯ ರೂಪವಾಗಿದ್ದ ಪ್ರಜಾ ಪರಿಷದ್. ಪಾಕಿಸ್ತಾನೀ ಪ್ರೇರಿತ ಶಸ್ತ್ರಸಜ್ಜಿತ ಗುಡ್ಡಗಾಡು ಜನರ ದಾಳಿಯನ್ನು ಪಾಕಿಸ್ತಾನೀ ದಾಳಿಕೋರರನ್ನು ಎದುರಿಸಿ ನಿಂತದ್ದು ಅಲ್ಲಿನ ಧರ್ಮ ನಿರಪೇಕ್ಷ ಜನತೆ. ಅಷ್ಟು ಮಾತ್ರವಲ್ಲ, 1965 ಮತ್ತು 1971ರ ಯುದ್ಧ ಸಂದರ್ಭಗಳಲ್ಲೂ ಪಾಕಿಸ್ತಾನದ ಎಲ್ಲಾ ಪಿತೂರಿಗಳ ವಿರುದ್ಧ ಭಾರತದ ಜೊತೆ ನಿಂತವರು ಕಾಶ್ಮೀರದ ಜನತೆ.

ಮುಸ್ಲಿಂ ಮೂಲಭೂತವಾದಿಗಳನ್ನು ಎದುರಿಸಲಾಗದೆ ಜನರಲ್ ಮುಷರಫ್‌ರವರು ಕಾಶ್ಮೀರದ ಪ್ರಶ್ನೆಯನ್ನು ಧಾರ್ಮಿಕ ನೆಲೆಯಲ್ಲೇ ಪ್ರತಿಪಾದನೆ ಮಾಡುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಇಂತಹುದೇ ನೆಲೆಯಲ್ಲಿ ಪ್ರತಿಪಾದನೆ ಮಾಡುವ ಸಂಘ ಪರಿವಾರದಲ್ಲಿ ತಮ್ಮ ಆತ್ಮವನ್ನು ಹೊಂದಿರುವ ಪ್ರಧಾನಿ ವಾಜಪೇಯಿಯವರು ಮುಷರಫ್ ಜೊತೆ ಸೇರಿ ಚರ್ಚಿಸುವ ಶೃಂಗಸಭೆಗೆ ತನ್ನದೇ ಮಿತಿಗಳಿರುವುದು ನಿಜ. ಆದರೆ ಇಂತಹ ಚರ್ಚೆಯನ್ನು ನಡೆಸುವ ಅನಿವಾರ್ಯತೆ ಸೃಷ್ಟಿಯಾಗಿರುವುದು ಎರಡೂ ದೇಶಗಳ ಶಾಂತಿಪ್ರಿಯ, ಪ್ರಜಾಪ್ರಭುತ್ವೀ ಜನತೆಯ ಒತ್ತಡದಿಂದ ಎಂಬುದನ್ನು ಗಮನಿಸಬೇಕು.

ಇದೇ ಸಂದರ್ಭದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಆಸಕ್ತಿಯನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಕಾಶ್ಮೀರವು ಭೌಗೋಳಿಕವಾಗಿ ವ್ಯೂಹಾತ್ಮಕ ಜಾಗದಲ್ಲಿರುವುದರಿಂದ ಅಲ್ಲಿ ಮಿಲಿಟರಿ ನೆಲೆಯನ್ನು ಸ್ಥಾಪಿಸಲು ಕಾಶ್ಮೀರವನ್ನು ಒಂದು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಲು ಮೊದಲಿನಿಂದಲೂ ಪ್ರಯತ್ನಿಸುತ್ತಿರುವುದು ಗುಟ್ಟಿನ ವಿಚಾರವೇನಲ್ಲ. ಇಂತಹ ಶಕ್ತಿಯ ಜೊತೆ ವಾಜಪೇಯಿ ಸರ್ಕಾರವು ಕಿರಿಯ ಪಾಲುದಾರನಾಗಲು ಬಯಸುತ್ತಿರುವುದೂ ಕೂಡಾ ಪರಸ್ಪರ ಸಂಬಂಧಿಸಿದ ವಿಚಾರಗಳೇ.

ಆದ್ದರಿಂದಾಗಿ ಇಂತಹ ನಿಲುವುಗಳನ್ನು ಹೊಂದಿರುವ ಎರಡು ಸರ್ಕಾರಗಳು ನಿರ್ದಿಷ್ಟ ಅಜೆಂಡಾಗಳಿಲ್ಲದೆ, ಪೂರ್ವ ತಯಾರಿಗಳಿಲ್ಲದೆ ಶೃಂಗಸಭೆಯನ್ನು ನಡೆಸುವುದರ ಫಲಶೃತಿ ದೊಡ್ಡದಾಗಿರಲು ಸಾಧ್ಯವಿಲ್ಲ. ಹೀಗಾಗಿ ಆಗ್ರಾ ಶೃಂಗಸಭೆಯ 'ವಿಫಲ' ಎಂದಾಗದೆ ಮುಂದಿನ ಮಾತುಕತೆಗಳಿಗೆ ಅವಕಾಶವನ್ನಿಟ್ಟುಕೊಂಡು ಮುಗಿದಿರುವುದು ಆಶಾದಾಯಕ ಸಂಗತಿಯಾಗಿದೆ.

ಕಾಶ್ಮೀರ ಸಮಸ್ಯೆಗೆ ಕೇವಲ ಪಾಕಿಸ್ತಾನದೊಂದಿಗಿನ ಮಾತುಕತೆಗಳು ಮಾತ್ರ ಪರಿಹಾರವಾಗುವುದಿಲ್ಲ. ಸ್ವಾತಂತ್ರ್ಯನಂತರ ಬಂದ ಎಲ್ಲ ಸವಾಲುಗಳನ್ನು ಎದುರಿಸಿ ಧರ್ಮನಿರಪೇಕ್ಷ ಭಾರತದೊಂದಿಗೆ ಉಳಿದ ಕಾಶ್ಮೀರದ ಜನತೆಗೆ ನೀಡಿದ್ದ ಭರವಸೆಯೇ 370 ನೇ ವಿಧಿ ಮತ್ತು ವಿಶೇಷ ಸ್ವಾಯತ್ತತೆ. ಇದನ್ನು ಬಳಸಿ ಅಲ್ಲಿನ ಜನರ ಅಭಿವೃದ್ಧಿಯನ್ನು ಮಾಡುವಲ್ಲಿ ಕೇಂದ್ರ ಸರ್ಕಾರಗಳು ವಿಫಲಗೊಂಡಿವೆ. ಹೀಗಾಗಿ ಆ ರಾಜ್ಯಕ್ಕೆ 370ನೇ ವಿಧಿಯಡಿಯಲ್ಲಿ ವಿಶೇಷ ಸ್ವಾಯತ್ತತೆಯನ್ನು ನೀಡಿ, ಭಯೋತ್ಪಾದನೆಯ ನೆರಳಲ್ಲಿ ನಲುಗಿ ಹೋಗಿರುವ ಜನತೆಗೆ ಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವುದು ಮತ್ತು ದೇಶದೊಳಗಿನ ಎಲ್ಲಾ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಸಮಸ್ಯೆಯ ದೀರ್ಘಾವಧಿ ಪರಿಹಾರಕ್ಕೆ ಅವಕಾಶವನ್ನು ನಿರ್ಮಿಸುತ್ತದೆ. ಹೆಚ್ಚೆಚ್ಚು ಪರಕೀಯಗೊಳ್ಳುತ್ತಿರುವ ಕಾಶ್ಮೀರದ ಜನತೆಯಲ್ಲಿ ವಿಶ್ವಾಸವನ್ನು ಮೂಡಿಸಿದಾಗ ಮಾತ್ರ ಪಾಕಿಸ್ತಾನವೂ ಸೇರಿದಂತೆ ಇತರೆ ಪ್ರತ್ಯೇಕತಾವಾದಿ ಶಕ್ತಿಗಳ ರಾಜಕೀಯ ಬಲಾಬಲಗಳನ್ನು ಮತ್ತು ಸಂಬಂಧಗಳನ್ನು ವ್ಯತ್ಯಾಸಗೊಳಿಸಬಹುದು. ಆಗ ಮಾತ್ರ ಕಾಶ್ಮೀರಕ್ಕೊಂದು ಶಾಶ್ವತ ಪರಿಹಾರವನ್ನು ಕಾಣಬಹುದು.

ಆಗ್ರಾ ಶೃಂಗಸಭೆಯ ಫಲಿತಾಂಶ ಏನೇ ಆಗಿರಬಹುದು. ಎರಡೂ ದೇಶಗಳ ನಡುವಿನ ವಿಷಮಯ ಸನ್ನಿವೇಶ ಮತ್ತು ಹಳಸಿದ ಸಂಬಂಧಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಎರಡೂ ದೇಶಗಳ ಜನತೆಯ ಆಳವಾದ ಆಗ್ರಹ ಇದರಲ್ಲಿದೆ. ಶಿಮ್ಲಾ ಒಪ್ಪಂದದ ಆಧಾರದಲ್ಲಿ ಮೂರನೇ ಶಕ್ತಿಯ ಮಧ್ಯ ಪ್ರವೇಶಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಮಾತುಕತೆಗಳ ಮೂಲಕ ಸಮಸ್ಯೆಗಳ ಇತ್ಯರ್ಥ ಆಗಬೇಕೆಂಬುದನ್ನು ಈ ಶೃಂಗಸಭೆಯು ದೃಢಪಡಿಸಿದೆ. ಆಗ್ರಾ ಸಭೆ ಪೂರ್ವಭಾವಿಯಾಗಿ ನಿರ್ಮಾಣವಾಗಿದ್ದ ವಿಪರೀತ ಭರವಸೆಗಳು ಕೊನೆಯಲ್ಲಿ ನಿರಾಸೆಯನ್ನು ಮೂಡಿಸಿದ ಹಾಗೆ ಮುಂದಿನ ಸಭೆಗಳಲ್ಲಿ ಆಗದಿರಬೇಕಾದರೆ ಭಾರತವು ಪೂರ್ವತಯಾರಿಯನ್ನು ಸರಿಯಾಗಿ ಮಾಡಿಕೊಂಡು ಹೋಗಬೇಕಾಗುತ್ತದೆ. ಎರಡ ದೇಶಗಳ ನಿಲುವುಗಳಲ್ಲಿ ಮೂಲಭೂತ ಬದಲಾವಣೆ ಕೂಡಲೇ ಆಗುತ್ತದೆಯೆಂಬ ಸಾಧ್ಯತೆ ಇಲ್ಲದಿದ್ದರೂ ಮಾತುಕತೆಗಳು ನಡೆಯಬೇಕು. ಎರಡೂ ದೇಶಗಳ ಪ್ರಜಾಪ್ರಭುತ್ವೀ ಮತ್ತು ಶಾಂತಿಪ್ರಿಯ ಜನತೆಯ ನಡುವೆ ಏರ್ಪಡುವ ಸಂಬಂಧಗಳು ಈ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಸೌಹಾರ್ದವನ್ನು ರಾಜ್ಯದಲ್ಲಿ ಕಾಪಾಡಿಕೊಂಡು ಬಂದರು.

ಆ ನಂತರ ಏನಾಯಿತು ಎಂಬುದು ಎಲ್ಲರಿಗೂ ತಿಳಿದೇ ಇದೆ. ಆದರೆ ನೆನಪಿಡಬೇಕಾದ ಒಂದೇ ಒಂದು ಸಂಗತಿಯೆಂದರೆ ನಮ್ಮ ಸಂವಿಧಾನ ಶಿಲ್ಪಿಗಳು ಕಾಶ್ಮೀರದ ಜನತೆಗೆ ಆದಷ್ಟೂ ಹೆಚ್ಚಿನ ಸ್ವಾಯತ್ತತೆ ನೀಡುವುದಾಗಿ ವಚನ ಕೊಟ್ಟಿದ್ದರು ಮತ್ತು ಭಾರತದ ಸಂವಿಧಾನದಲ್ಲಿ ಅದಕ್ಕಾಗಿಯೇ 370ನೇ ಪರಿಚ್ಛೇದವನ್ನು ಸೇರಿಸಿದ್ದರು ಕೂಡ. ಆದರೆ ಇದು ಅವರು ನೀಡಿದ ಭಿಕ್ಷೆಯಲ್ಲ ಎಂಬುದನ್ನು ಮರೆಯಬಾರದು. ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಬೇರೆ ರಾಜ್ಯಗಳೊಂದಿಗೆ ಹೋಲಿಸು ವುದು ಸರಿಯಲ್ಲ. ಆದರೆ ನೀಡಿದ ವಚನವನ್ನು ಒಂದೊಂದಾಗಿ ಮುರಿಯುತ್ತಾ ಬಂದ ಭಾರತ ಸರ್ಕಾರದ ನಿಲುವುಗಳನ್ನು ಕಾಶ್ಮೀರದ ಜನತೆ ಪರಕೀಯ ಭಾವನೆಯನ್ನು ಬೆಳೆಸಿಕೊಳ್ಳುವಂತೆ ಮಾಡಿತು. ಯಾವ ಬಾಡಿಗೆ ಭಯೋತ್ಪಾದಕರನ್ನು ಮುಷರಫ್ ಸ್ವಾತಂತ್ರ್ಯ ಹೋರಾಟಗಾರರೆಂದು ಕರೆದರೋ, ಅಂತಹ ಭಯೋತ್ಪಾದಕರ ವಿರುದ್ಧ ಕಾಶ್ಮೀರದ ಜನರನ್ನು ಒಂದುಗೂಡಿಸಿ ಹೋರಾಟಕ್ಕಿಳಿಸಲು ಈ ಪರಕೀಯ ಭಾವನೆಯೇ ಅಡ್ಡ ಬರುತ್ತಿದೆ. ಕಾಶ್ಮೀರದ ಜನ ಖಂಡಿತವಾಗಿಯೂ ಭಯೋತ್ಪಾದಕರನ್ನು ಬೆಂಬಲಿಸುವುದಿಲ್ಲ. ಆದರೆ ಪ್ರಶ್ನೆ ಇರುವುದು - ಅವರನ್ನು ಭಯೋತ್ಪಾದಕರ ವಿರುದ್ಧ ಅಣಿನೆರೆಸುವುದು ಹೇಗೆ ಎಂಬುದೇ ಆಗಿದೆ.

ಸಮಸ್ಯೆಯ ಮೂಲವಿರುವುದೇ ಇಲ್ಲಿ. 370ನೇ ಪರಿಚ್ಛೇದವನ್ನು ಕಿತ್ತು ಹಾಕುವ ಯಾವುದೇ ಮಾತು ರಾಷ್ಟ್ರೀಯತೆ ಮುಸುಕಿನಡಿಯಲ್ಲಿ ಆಡಿದರೂ ಕೂಡ ಅದು ದೇಶದ ಸಮಗ್ರತೆಗೆ ಕುತ್ತು ತರುತ್ತದೆ. ಅದಕ್ಕೆ ಬದಲಾಗಿ ಆ ರಾಜ್ಯಕ್ಕೆ ಎಷ್ಟು ಸಾಧ್ಯವೋ ಅಷ್ಟು ಹೆಚ್ಚಿನ ಸ್ವಾಯತ್ತತೆಯನ್ನು ಪುನರ್‌ಸ್ಥಾಪಿಸುವುದರ ಮೂಲಕ ಮಾತ್ರವೇ ಅಲ್ಲಿಯ ಜನರನ್ನು ಭಯೋತ್ಪಾದಕರ ವಿರುದ್ಧ ಅಣಿನೆರೆಸಲು ಸಾಧ್ಯವಾಗುತ್ತದೆ. 1947-48 ರಲ್ಲಿ ದೇಶದೊಳಗೆ ನುಸುಳಿದವರ ವಿರುದ್ಧ ಹೋರಾಡಿದ ಇದೇ ಕಾಶ್ಮೀರದ ಜನ, ಈಗ ಅಂತಹುದೇ ದೇಶ ದ್ರೋಹಿಗಳ ವಿರುದ್ಧ ಮತ್ತೆ ಹೋರಾಡುವುದಿಲ್ಲವೇ? ಇದೇ ಕಾಶ್ಮೀರದ ಜನ 1997 ರಲ್ಲಿ ಭಯೋತ್ಪಾದಕರ ಬೆದರಿಕೆಗೆ ಸೊಪ್ಪುಹಾಕದೆ ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣೆಯಲ್ಲಿ ಭಾಗವಹಿಸಿದ್ದಾರೆ. ಆಂತರಿಕ ವಿಷಮ ಪರಿಸ್ಥಿತಿಯಲ್ಲಿ ಶೇ 52 ಜನರು ಮತದಾನ ಮಾಡಿದ ವಿಚಾರ ಕಡಿಮೆಯ ಸಾಧನೆಯೇನಲ್ಲ. ಯಾವುದೇ ಬೆದರಿಕೆಗಳೂ ಇಲ್ಲದ ದೇಶದ ಬೇರೆ ಬೇರೆ ಭಾಗಗಳಲ್ಲಿ ಸಾಮಾನ್ಯವಾಗಿ ಶೇ 40 ರಿಂದ 60 ಜನರು ಮಾತ್ರ ಮತದಾನ ಮಾಡುತ್ತಿರುವಾಗ, ಕಾಶ್ಮೀರದ ಜನ ದೊಡ್ಡ ಸಾಧನೆಯನ್ನೇ ಮಾಡಿರುವುದನ್ನು ನಾವೆಂದೂ ಮರೆಯಲಾಗದು.

ಆ ರಾಜ್ಯದ ಆರ್ಥಿಕ ಪರಿಸ್ಥಿತಿ ದಿನದಿಂದ ದಿನಕ್ಕೆ ಅದೋಗತಿಗೆ ಇಳಿಯುತ್ತಿದೆ. ಜಮ್ಮು ಮತ್ತು ಕಾಶ್ಮೀರದ ಸರ್ಕಾರ ಸಮಸ್ಯೆಯನ್ನು ಇತ್ಯರ್ಥಪಡಿಸಲು ಸೋತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮಸ್ಯೆಯನ್ನು ಪರಿಹರಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಬೇಕು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸಬೇಕು.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಜಮ್ಮು ಕಾಶ್ಮೀರ ಜನರ ನೆಂಟರಿಷ್ಟರು ಮತ್ತು ಗೆಳೆಯರನ್ನು ಭೇಟಿ ಮಾಡಲು ಸರಿಯಾದ ವಾತಾವರಣ ಕಲ್ಪಿಸಬೇಕು ಹಾಗೂ ಕಾಶ್ಮೀರಿ ಪಂಡಿತರು ತಮ್ಮ ತಮ್ಮ ಮನೆ ಮತ್ತು ಊರುಗಳಿಗೆ ಹಿಂದಿರುಗಲು ಬೇಕಾದ ಉತ್ತಮ ಸ್ಥಿತಿಯನ್ನು ಉಂಟು ಮಾಡಬೇಕು. ಇದು ಈಗ ತಕ್ಷಣ ಆಗಬೇಕಾದ ಆದ್ಯತೆಯ ಮೇಲೆ ಆಗಬೇಕಾದ ಕೆಲಸ.

- ಸುರ್ಜಿತ್



ಮಳವಳ್ಳಿ: ನರಕವಾಗಿರುವ ಸರ್ಕಾರಿ ಆಸ್ಪತ್ರೆ

ಅವ್ಯವಸ್ಥೆ ಪ್ರತಿಭಟಿಸಿದ ಮಹಿಳೆಯರು

ಭಾರೀ ಸಂಖ್ಯೆಯ ಮಹಿಳೆಯರಿಂದ ಬೀದಿ ಬೀದಿಗಳಲ್ಲಿ ಮೆರವಣಿಗೆ ಮುಗಿಲು ಮುಟ್ಟುವ ಧಿಕ್ಕಾರದ ಘೋಷಣೆ, ಆಕ್ರೋಶದ ನುಡಿಗಳು. ಆಸ್ಪತ್ರೆ ಸಿಬ್ಬಂದಿಗಳ ಶೋಷಣೆಯಿಂದ ನೊಂದ ಹೆಂಗರುಳಿನ ಪ್ರತಿಭಟನೆಯ ಕೂಗು.

ಇದು ಜುಲೈ 17 ರಂದು ಮಂಡ್ಯ ಜಿಲ್ಲೆಯ ಮಳವಳ್ಳಿ ಪಟ್ಟಣದಲ್ಲಿ ಕಂಡು ಬಂದ ದೃಶ್ಯ. ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ವಿರುದ್ಧ, ಜನವಾದಿ ಮಹಿಳಾ ಸಂಘಟನೆ ಪ್ರತಿಭಟನಾ ಮೆರವಣಿಗೆ ಆಯೋಜಿಸಿತ್ತು. ಅದು ಅನೇಕ ಮಹಿಳೆಯರಿಗೆ ಹೊಸ ಅನುಭವ. ಮಳವಳ್ಳಿ ಸುತ್ತಲಿನ ಹತ್ತಾರು ಹಳ್ಳಿಯ ಮಹಿಳೆಯರು ತಮ್ಮ ದಿನನಿತ್ಯದ ಕೆಲಸಗಳನ್ನು ಬೇಗ ಮುಗಿಸಿ ತಮ್ಮ ಹೊಲಗದ್ದೆಗಳ ಕೆಲಸಗಳನ್ನು ಬದಿಗೊತ್ತಿ ಮಳವಳ್ಳಿಯ ಕಡೆ ಬರತೊಡಗಿದರು. ಕೆಲವರು ಕಾಲು ನಡಿಗೆಯಲ್ಲೇ ನಡೆದು ಬಂದರೆ ಮತ್ತೆ ಕೆಲವರು ಬಸ್ಸುಗಳಲ್ಲಿ ಒಂದು ಸೇರತೊಡಗಿದರು. ಕೋರೆಗಾಲ, ನೆಲ್ಲೂರುಗಳವರಂತೂ ಟ್ರಾಕ್ಟರ್‌ಗಳಲ್ಲಿ ಹತ್ತಿ ಬಂದರು.

ಮಹಿಳೆಯರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿ ಬಂದು ಸೇರತೊಡಗಿದರು. ಬೆಳಿಗ್ಗೆ 11 ಗಂಟೆ ವೇಳೆಗೆ 600 ಕ್ಕೂ ಅಧಿಕ ಮಹಿಳೆಯರು ಅಲ್ಲಿಂದ ಮೆರವಣಿಗೆ ಹೊರಟರು. ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತ ಆಸ್ಪತ್ರೆಯ ಭ್ರಷ್ಟಾಚಾರದ ವಿರುದ್ಧ ಘೋಷಣೆ ಮೊಳಗಿಸಿದರು. ಮಳವಳ್ಳಿಯ ಇತಿಹಾಸದಲ್ಲೇ ಇಷ್ಟುದೊಡ್ಡ ಸಂಖ್ಯೆಯ ಮಹಿಳಾ ಪ್ರತಿಭಟನಾಕಾರರನ್ನು ನೋಡಿರದ ಇಲ್ಲಿಯ ಜನ ಆಶ್ಚರ್ಯ ಚಕಿತರಾದರು. ಹಲವು ಸಾರ್ವಜನಿಕರು ಮೆರವಣಿಗೆಯ ಜೊತೆ ತಾವು ಹೆಜ್ಜೆ ಹಾಕ ತೊಡಗಿದರು. ಮೆರವಣಿಗೆಯ ಉದ್ದಕ್ಕೂ ವೈದ್ಯಾಧಿಕಾರಿಗಳ ವಿರುದ್ಧ, ಕೆಲವು ನರ್ಸ್‌ಗಳ ವಿರುದ್ಧ ಸ್ಥಳೀಯ ಶಾಸಕರ ವಿರುದ್ಧ ಘೋಷಣೆ ಕೂಗುತ್ತಿದ್ದರು.

ಆಸ್ಪತ್ರೆ ಆವರಣ ಪ್ರವೇಶಿಸಿದ ಪ್ರತಿಭಟನಾಕಾರರು ತಮ್ಮ ಧಿಕ್ಕಾರದ ಧ್ವನಿಯನ್ನು ಇಮ್ಮಡಿಗೊಳಿಸಿದರು. ಅವರ ಆಕ್ರೋಶದ ಘೋಷಣೆಗೆ ಆಸ್ಪತ್ರೆಯ ಸಿಬ್ಬಂದಿ ಬೆಚ್ಚಿಬೀಳುವಂತಾಯಿತು. 11.45 ಕ್ಕೆ ಧರಣಿ ಕುಳಿತ ಪ್ರತಿಭಟನಾಕಾರರು ಮಧ್ಯಾಹ್ನ 3 ಗಂಟೆಯವರೆಗೂ ಅಲ್ಲಿಯೇ ಜಮಾಯಿಸಿದರು.

ತನ್ನ ನೋವನ್ನು ಯಾರಿಗೂ ತೋಡಿಕೊಳ್ಳಲಾರದ ಮಹಿಳೆಯರೂ ಎಂದೂ ಬಹಿರಂಗ ಸಭೆಯಲ್ಲಿ ಮಾತನಾಡದವರು ತಮ್ಮ ಮನದ ನೋವನ್ನು ಬಿಚ್ಚಿಟ್ಟರು. ತಮ್ಮ ಆಕ್ರೋಶವನ್ನು ತಮ್ಮದೇ ಆದ ಗ್ರಾಮ ಭಾಷೆಯಲ್ಲಿ ವ್ಯಕ್ತಪಡಿಸಿದರು. ಈ ಆಸ್ಪತ್ರೆಯಲ್ಲಿ ತಾವು ಅನುಭವಿಸಿದ ಶೋಷಣೆ, ಸುಲಿಗೆ ಆಸ್ಪತ್ರೆಯವರ ದಬ್ಬಾಳಿಕೆ ಪ್ರವೃತ್ತಿಯನ್ನು ನಿರ್ಭಯವಾಗಿ ಸಾರ್ವಜನಿಕರ ಮುಂದೆ ಮಂಡಿಸಿದ ರೀತಿ ಅವರ ಮಾತಿನಲ್ಲಿದ್ದ ವಾಸ್ತವತೆ. ಕಠೋರತೆ ಸಾರ್ವಜನಿಕರಲ್ಲಿ ಆಶ್ಚರ್ಯ, ಆಕ್ರೋಶಗಳನ್ನುಂಟು ಮಾಡಿತು. ಆಸ್ಪತ್ರೆಯ ಆವರಣದಲ್ಲಿ ಬೃಹತ್ ಜನ ಸಮೂಹ ಸೇರಿತು.

ಮೈಕ್ ಬಳಸಲು ಅಡ್ಡಿ

ಮಹಿಳೆಯರ ಸಣ್ಣ ಧ್ವನಿ ಎಲ್ಲರಿಗೂ ಕೇಳದಾದಾಗ ಸಾರ್ವಜನಿಕರಲ್ಲಿ ಒಬ್ಬರು ಮೈಕ್ ವ್ಯವಸ್ಥೆ ಮಾಡಿಕೊಟ್ಟದ್ದು ಇಲ್ಲಿ ವಿಶೇಷವಾಗಿತ್ತು. ಆದರೆ ಪೋಲೀಸರು ಮೈಕ್ ಅಳವಡಿಸಲು ಒಪ್ಪಲಿಲ್ಲ. ಅದಕ್ಕೆ ನೀವು ಅನುಮತಿ ಪಡೆದಿಲ್ಲ ಮತ್ತು ಆಸ್ಪತ್ರೆಯ ಆವರಣದ ಒಳಗೆ ಮೈಕ್ ಉಪಯೋಗಿಸುವಂತಿಲ್ಲ, ಇದರಿಂದ ರೋಗಿಗಳಿಗೆ ತೊಂದರೆಯಾಗುತ್ತದೆ ಎಂಬ ಕಾರಣ ನೀಡಿ ಮೈಕನ್ನು ತಡೆಯಲು ಯತ್ನಿಸಿದರು. ಪೋಲೀಸರ ಈ ವರ್ತನೆ ಪ್ರತಿಭಟನಾಕಾರರನ್ನು ಕೆರಳಿಸಿತು. ಅವರ ಆಕ್ರೋಶ ಪೋಲೀಸರ ಕಡೆ ತಿರುಗಿತು. 'ದಿನ ನಿತ್ಯ ವೈದ್ಯರು, ಸಿಬ್ಬಂದಿಗಳಿಂದ ರೋಗಿಗಳು ಅನುಭವಿಸುವ ನರಕಯಾತನೆಗಿಂತ ಇದು ದೊಡ್ಡದೇನಲ್ಲ, ಅದಕ್ಕೆ ನಾವು ಮೈಕ್ ಬಳಸುತ್ತೇವೆಂದು ಪೋಲೀಸರ ಬಾಯಿಯನ್ನು ಮುಚ್ಚಿಸಿದರು.

ನಂತರ ಆಸ್ಪತ್ರೆಯಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ, ಅಶ್ಲೀಲ ಪದಬಳಕೆ, ದೌರ್ಜನ್ಯಗಳ ಬಗ್ಗೆ ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಬೆಳಕು ಚೆಲ್ಲತೊಡಗಿದರು.

ಪ್ರತಿಯೊಂದಕ್ಕೂ ಹಣ:

ರೋಗಿಗಳಿಂದ ವೈದ್ಯರು ಇಂತಿಷ್ಟು ಹಣ ಕೊಡಬೇಕೆಂದು ಒತ್ತಾಯಿಸುವುದು. ಇಂಜೆಕ್ಷನ್, ಮಾತ್ರೆ ಕೊಟ್ಟರೆ ಹಣ ಕೇಳುವುದು. ಹಣ ಕೊಡದಿದ್ದರೆ ಬೇರೆ ಕಡೆ ಹಣ ಕೊಟ್ಟು ಪಡೆಯುವಂತೆ ಚೀಟಿ ಬರೆದುಕೊಡುವುದು. ಅಥವಾ ರೋಗಿಯನ್ನು ಪರೀಕ್ಷಿಸದೆ ಹೊರಗೆ ದಬ್ಬುತ್ತಾರೆಂದು ಮಹಿಳೆಯರು ದೂರಿದರು.

ಆಸ್ಪತ್ರೆಗಳಲ್ಲಿ ಆಧುನಿಕ ಯಂತ್ರೋಪಕರಣಗಳಿಂದ ಕೂಡಿದ ಪ್ರಯೋಗಾಲಯಗಳ ಸೌಲಭ್ಯಗಳಿದ್ದರೂ ಕಮಿಷನ್ ಆಸೆಗಾಗಿ ವೈದ್ಯರುಗಳು ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆಗಳನ್ನು ತಾವು ಸೂಚಿಸಿದ ಖಾಸಗಿ ಆಸ್ಪತ್ರೆಗಳಲ್ಲೇ ಹೋಗಿ ಪರೀಕ್ಷಿಸಿಕೊಂಡು ಬರುವಂತೆ ಚೀಟಿ ಬರೆದು ಕಳುಹಿಸುವುದು, ಒಂದು ವೇಳೆ ಅದೇ ಆಸ್ಪತ್ರೆಯ ಪ್ರಯೋಗಾಲಯಗಳಿಗೆ ಹೋದರೆ ಅಲ್ಲಿನ ಸಿಬ್ಬಂದಿ ಪ್ರತಿಯೊಂದಕ್ಕೂ ಇಂತಿಷ್ಟು ಹಣ ನೀಡಬೇಕೆಂದು ಒತ್ತಾಯಿಸುತ್ತಾರೆ ಎಂದು ಇದು ವರೆಗೆ ಹಿಡಿದಿಟ್ಟ ನೋವನ್ನು ಹೊರಗೆಡವಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರನ್ನು ಉದ್ದೇಶಿಸಿ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಹ ಕಾರ್ಯದರ್ಶಿ ಎನ್.ಪ್ರಭಾರವರು "ಕೋಟ್ಯಾಂತರ ರೂಪಾಯಿ ಸಾರ್ವ ಜನಿಕರ ಹಣದಲ್ಲಿ ನಿರ್ಮಾಣ ಗೊಂಡ ಈ ಆಸ್ಪತ್ರೆ ಇಂದು ಬಡ ರೋಗಿಗ ಳಿಂದ ದೂರ ಸರಿದಿದೆ. ಇಲ್ಲಿನ ವೈದ್ಯರು ಸಣ್ಣಪುಟ್ಟ ಖಾಯಿಲೆಗಳಿಗೆಲ್ಲಾ ಖಾಸಗೀ ನರ್ಸಿಂಗ್ ಹೋಂಗೆ ಕಳಿಸುತ್ತಾರೆ. ಇಲ್ಲವೇ ತಮ್ಮ ವಿಳಾಸಕ್ಕೆ ಬಂದು ಚಿಕಿತ್ಸೆ ಪಡೆದು ಕೊಳ್ಳು ವಂತೆ ಆದೇಶಿಸುತ್ತಾರೆ ಎಂದು ಆರೋಪಿಸಿದರು.

ಮಳವಳ್ಳಿ ತಾಲ್ಲೂಕು ಸಮಿತಿ ಸಂಚಾಲಕಿ ಶ್ರೀಮತಿ ದೇವಿ ಮಾತನಾಡಿ ಆಸ್ಪತ್ರೆಯ ಸಿಬ್ಬಂದಿಗಳ ವರ್ತನೆಯನ್ನು ಕಟುವಾಗಿ ಟೀಕಿಸಿದರು. ನಂತರ ಮಾತನಾಡಿದ ಡಿವೈಎಫ್‌ಐ ನ ಜಿಲ್ಲಾಧ್ಯಕ್ಷ ಭರತರಾಜು ಅವರು ಇಲ್ಲಿ ಕೈತುಂಬಾ ಹಣ ಹಿಡಿದು ಬಂದವರಿಗೆ ಮಾತ್ರ ಕಾಯಿಲೆ ವಾಸಿಯಾಗುತ್ತದೆ. ಬರಿಗೈಯಲ್ಲಿ ಬಂದ ಬಡವರು ರೋಗಗಳನ್ನು ಹೊತ್ತುಕೊಂಡೇ ವಾಪಸ್ಸಾಗುತ್ತಾರೆ. ಮತ್ತೆ ಕೆಲವರು ಜೀವ ಕಳೆದುಕೊಳ್ಳುವಂತ ಸ್ಥಿತಿ ಇದೆ ಎಂದು ಆರೋಪಿಸಿದರು.

ಡಿವೈಎಫ್‌ಐನ ಪ್ರಕಾಶ್, ಆನಂದ, ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಪುಟ್ಟಮಾದಯ್ಯ, ಎಸ್ ಎಫ್ ಐ ನ ಯೋಗೀಶ್, ದಲಿತ ಮಹಾ ಸಭಾದ ಎಸ್.ಸುರೇಶ್, ಜೆ ಎಂ ಎಸ್ ನ ತಾಲ್ಲೂಕು ಸಮಿತಿ ಸಹಸಂಚಾಲಕರಾದ ಸುಧಾ, ಶಾಂತಮ್ಮ ಇಂದಿರಮ್ಮ ಹಾಜರಿದ್ದರು.

ಇವರಲ್ಲದೇ ಇಷ್ಟೆಲ್ಲಾ ಅವ್ಯವಸ್ಥೆ ಭ್ರಷ್ಟಾಚಾರ ಈ ಆಸ್ಪತ್ರೆಯಲ್ಲಿ ಜರುಗುತ್ತಿದ್ದರು ಸರ್ಕಾರ, ಜಿಲ್ಲಾ ಪಂಚಾಯತಿ ಹಾಗೂ ಕೆಹೆಚ್‌ಎಸ್‌ಡಿಪಿ ಕಣ್ಣು ಮುಚ್ಚಿ ಕುಳಿತಿದೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದ ಅವರು ಭ್ರಷ್ಟಾಚಾರಕ್ಕೆ ಕಾರಣರಾದ ವೈದ್ಯರು ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಇಲ್ಲದಿದ್ದ ಪಕ್ಷದಲ್ಲಿ ಪ್ರತಿಭಟನೆ ಯನ್ನು ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಪ್ರತಿಭಟನಾಕಾರರ ಬಳಿ ಬಂದ ಶಿರಸ್ತೆದಾರ ಮುತ್ತಯ್ಯನವರು ಮನವಿ ಪತ್ರ ಸ್ವೀಕರಿಸಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು.

ವೈದ್ಯಾಧಿಕಾರಿಗಳು ಮನವಿ ಸ್ವೀಕರಿಸಿ ಮಾತನಾಡಿ ಆಸ್ಪತ್ರೆಯಲ್ಲಿನ ಭ್ರಷ್ಟಾಚಾರವನ್ನು ಸಂಪೂರ್ಣ ನಿಲ್ಲಿಸುವುದಾಗಿ ಘೋಷಣೆ ಮಾಡಿದರು. ಆಸ್ಪತ್ರೆಯಲ್ಲಿ ಸದ್ಯಕ್ಕಿಲ್ಲದ ಸೌಲಭ್ಯಗಳಿಗಾಗಿ ಸರ್ಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು.

ಹುಟ್ಟುವ ಸಮಯವನ್ನೇ ಬದಲಿಸಬಲ್ಲರು

ಇಲ್ಲಿನ ದಾದಿಯರು ಹೆರಿಗಾಗಿ ಬಂದ ಮಹಿಳೆಯರನ್ನು ನೋಡಿಕೊಳ್ಳುವ ರೀತಿ ನರಕದ ಅನುಭವವಾಗುತ್ತದೆ. ಹಣಕ್ಕಾಗಿ ಮಗುವಿನ ಜನ್ಮದ ವೇಳೆಯನ್ನೇ ಬದಲಿಸಬಲ್ಲ ಬ್ರಹ್ಮ ಲೋಕದ ದೇವತೆಗಳವರು. ಸಹಜ ಹೆರಿಗೆಗೆ ಇನ್ನು 3-4 ಗಂಟೆ ಬೇಕೆಂದು ತಿಳಿದ ನರ್ಸ್‌ಗಳು ತಮ್ಮ ಕೆಲಸದ ಅವಧಿಯಲ್ಲೇ ಹೆರಿಗೆ ಮಾಡಿಸಲು ಬಲವಂತ ಹೆರಿಗೆ ಮಾಡಿಸುತ್ತಾರೆ.

ಗಂಡಾದರೆ 500 ರೂ. ಹೆಣ್ಣಾದರೆ 300 ರೂ. ಗಳೆಂದು ಅಲಿಖಿತ ಕಾನೂನು ನಿಗದಿ ಪಡಿಸಲಾಗಿದೆ. ಆ ಹಣ ಕೊಟ್ಟರೆ ಮಗುವನ್ನು ತಾಯಿಗೆ ತೋರಿಸುವ ಔದಾರ್ಯ ತೋರಿಸುತ್ತಾರೆ. ಇಂತಹ ಹಣ ಪಡೆಯಲು ತಮ್ಮ ಕೆಲಸದ ಅವಧಿಯಲ್ಲೇ ಹೆರಿಗೆಯಾಗಬೇಕೆಂದು ಬಯಸುತ್ತಾರೆ.

ಈ ರೀತಿ ಹೆರಿಗೆ ಮಾಡುವಾಗ ಮಗುಸತ್ತ ಉದಾಹರಣೆ ನೀಡಿದ ಮಹಿಳೆಯೊಬ್ಬಳ ನೋವಿನ ಕಥೆ ಕರುಳು ಹಿಂಡುವಂತಾಗಿತ್ತು.

ದುಡ್ಡು ಇಲ್ದಿದ್ರೆ ಬಸುರಿ ಯಾಕಾದೆ?

'ನಾನು ಹೆರಿಗೆ ಮಾಡೂಸ್ಕಳಾಕೆ ಆಸ್ಪತ್ರೆಗೆ ಬಂದೆ. ನನ್ನತ್ರ ಡಾಕ್ಟ್ರು ದುಡ್ಡು ಕೇಳಿದ್ರು. ಯಾಕ್ ಸ್ವಾಮಿ ದುಡ್ ಕೊಡ್ಬೇಕು? ನಾವು ಬಡವ್ರು. ನನ್ನತ್ರ ದುಡ್ಡಿಲ್ಲ ಅಂದ್ರೆ ಈ ಡಾಕ್ಟ್ರು ದುಡ್ಡಿಲ್ದಿದ್ರೆ ಬಸುರಿ ಯಾಕಾದೀ ಅಂತಾರೆ, ದುಡ್ಡಿಲ್ಲ ಅಂದ್ರ ಯಾವನಹತ್ತಿರಾನಾ ಹೋಗಿ ಈಸ್ಕಂಡು ಬಾ ಅಂತಾರೆ.

ಸರ್ಕಾರಿ ಆಸ್ಪತ್ರೆ ಅಂದ್ರೆ ಹಿಂಗೆನಾ ಇರೋದು. ಸಂಬಳ ಕೊಡಾಕಿಲ್ವಾ ಎಂದು ಹೇಳಿದಾಗ ನೆರೆದವರ ಕಣ್ಣುಗಳಲ್ಲಿ ತಮಗರಿವಿಲ್ಲದಂತೆ ನೀರು ತುಂಬಿಕೊಂಡಿತು. ಎಂಥಾ ಕಟುಕರಿವರು ಎಂದೆನಿಸಿತು. ಹಣ ಸಿಗುವುದಿಲ್ಲವೆಂದು ಅವರಿಗೆ ಖಾತ್ರಿಯಾದರೆ ಅಂತಹ ರೋಗಿಗಳನ್ನು ಅವರ ಹೆರಿಗೆ ನೋವಿನಲ್ಲೇ ಆಸ್ಪತ್ರೆಯಿಂದ ಹೊರಗೆ ಕಳುಹಿಸಿದ ಬಗ್ಗೆಯೂ ಮಹಿಳೆಯರಿಬ್ಬರು ದೂರಿದರು.

ಜಿಲ್ಲೆಗಂಟಿದ ದಾರಿದ್ರ್ಯ....

ಪುಟ 7 ರಿಂದ

ಘೋರ್ಪಡೆಯವರು ಸಚಿವರುಗಳ ಸಭೆ ಮುಂತಾದ ಕಲಾಪಗಳಲ್ಲಿಯೇ ತಮ್ಮ ವೇಳೆ ಕಳೆಯುತ್ತಿದ್ದಾರೆ. ಮತ್ತೊರ್ವ ಗ್ರಾಮೀಣಾಭಿವೃದ್ಧಿ ಸಹಾಯಕ ಸಚಿವರಾದ ಎಂ. ದಿವಾಕರ ಬಾಬುರವರು ಬಳ್ಳಾರಿ ನಗರದ ಬೀದಿ ರಾಜಕಾರಣದಲ್ಲಿ ಮುಳುಗಿಹೋಗಿದೆ. ಗ್ರಾಮೀಣಜನತೆ ಏನಾದರೇನು ತಮಗೆ ಎಂಬ ಉದಾಸೀನ ವ್ಯಕ್ತಗೊಳಿಸುತ್ತಿದ್ದಾರೆ. ಮತ್ತೊಬ್ಬ ತೋಟಗಾರಿಕಾ ಸಚಿವರು ಸತತವಾಗಿ 3 ಬಾರಿ ಗೆದ್ದಿದ್ದು ಕುರುಗೋಡು ಕ್ಷೇತ್ರದ ಶಾಸಕರು ಆಗಿರುವ ಅಲ್ಲಂ ವೀರಭದ್ರಪ್ಪನವರು ಕೆ.ಪಿ.ಸಿ.ಸಿ.ಐ ಅಧ್ಯಕ್ಷರಾಗಿ ತಮ್ಮ ಪಕ್ಷದ ಬೆಂಬಲಿಗರಿಗೆ ಸ್ಥಾನಗಳನ್ನು ಹಂಚುವ ಕೆಲಸದಲ್ಲಿ ಬಳ್ಳಾರಿ ತಾಲೂಕಿನ ಅರ್ಧ ಭಾಗದಷ್ಟು ಕೆಲಸವಿಲ್ಲದೇ ಕಂಗಾಲಾಗಿರುವುದು ಕಾಣದಷ್ಟು ಕೇಳದಷ್ಟು ತಲ್ಲೀನರಾಗಿದ್ದಾರೆ.

ಪಾಪ ಬಳ್ಳಾರಿ ಜಿಲ್ಲೆಯ ಜನ ಕೋಮುವಾದಿ ಬಿಜೆಪಿಯನ್ನು ಸೋಲಿಸಿ ಕಾಂಗ್ರೆ ಅಧ್ಯಕ್ಷರಾದ ಸೋನಿಯಾಗಾಂಧಿಯನ್ನು ಗೆಲ್ಲಿಸುವ ಉತ್ಸಾಹದಲ್ಲಿಯೇ ಅವರ ಗೆದ್ದುಬಂದ ಎಲ್ಲಾ ಶಾಸಕರು ಐ.ಬಿ.ಯಲ್ಲಿ ತಮ್ಮ ಸ್ವಂತ ವ್ಯಾವಹಾರಗಳಲ್ಲಿ ಮುಳುಗಿದ್ದಾರೆ.

ಜಿಲ್ಲಾ ಪಂಚಾಯ್ತಿಯು ಮೀನಾ ಮೇಷ ಎಣಿಸುತ್ತಿದೆ. ತಾಲೂಕು ಪಂಚಾಯ್ತಿಗಳು ಗಂಭೀರವಾಗಿ ಪರಿಗಣಿಸಲಿಲ್ಲ.

ಎಲ್ಲರಿಗೂ ತಿಳಿದ ಹಾಗೆ ಬಳ್ಳಾರಿಜಿಲ್ಲೆಯು ಸಾಮಾನ್ಯವಾಗಿ ಸರಾಸರಿ 3 ವರ್ಷದಲ್ಲಿ ಒಂದುಬಾರಿ ಬರಗಾಲವನ್ನು ಎದುರಿಸುತ್ತಿರುವುದು ಎಲ್ಲರೂ ತಿಳಿದ ವಿಷಯವೇ ಆಗಿದೆ. ಹೀಗಿದ್ದಾಗಲೂ ಬರಗಾಲವನ್ನು ಎದುರಿಸಲು ರಾಜ್ಯಸರ್ಕಾರ ಇಲ್ಲಿಯವರೆಗೆ ಜಿಲ್ಲಾ ಕೇಂದ್ರದಲ್ಲಿ ಕನಿಷ್ಟ 2 ಕೋಟಿ ಕಾಯ್ದಿಟ್ಟ ನಿಧಿ ಸ್ಥಾಪಿಸಲಿಲ್ಲ ಇಲ್ಲವೇ ನೀರಾವರಿಗೊಳಪಡಿಸಲು ತೀವ್ರ ಕ್ರಮ ಕೈಗೊಳ್ಳಲಿಲ್ಲ. ಬದಲಿಗೆ ಜಿಲ್ಲೆಯ ಸಂಪನ್ಮೂಲವನ್ನು ಲೂಟಿಗೊಳಪಡಿಸಲು ದೊಡ್ಡ ಬಂಡವಾಳದಾರರಿಗೆ ನೆರವಾಗಲು .... ಜಿಲ್ಲೆಗಂಟಿದ ದರಿದ್ರವಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘ ಮೊದಲೆ ಹಲವು ತಾಲೂಕುಗಳಲ್ಲಿ ಧರಣಿ ನಡೆಸಿ ಹೋರಾಟಕ್ಕಿಳಿದಿದೆ. ಕೂಡಲೇ ಬರಗಾಲ ಕಾಮಗಾರಿ ನಡೆಸಿ ಜನತೆಗೆ ಜಿಲ್ಲಾ ಆಡಳಿತ ರಾಜ್ಯ ಸರ್ಕಾರ ನೆರವಾಗಬಲ್ಲದೇ. ಅಥವಾ ಮೀನಮೇಷ ಎಣಿಸುತ್ತಾ ಹಾಗೆಯೇ ಕಾಲ ತಳ್ಳಬಹುದೇ ಕಾಯ್ದು ನೋಡಬೇಕಾಗಿದೆ.

ಮತ್ತೆ ನೇಣಿಗೆ

ವಿಶ್ವಬ್ಯಾಂಕ್, ಐಎಂಎಫ್, ಡಬ್ಲ್ಯುಟಿಓ ಒತ್ತಡಗಳಿಗೆ ಮಣಿದು ಜಾರಿಯಾಗುತ್ತಿರುವ ನೀತಿಗಳಿಂದ ರೈತರು ಹೆಚ್ಚಿನವರು ಸಾಲಗಾರರಾಗಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು ಈ ಬರವು ಪ್ರಕೃತಿ ವಿಕೋಪವಾಗಿಯಲ್ಲದೇ ಕೇಂದ್ರರಾಜ್ಯಗಳಲ್ಲಿ ಜನ ವಿರೋಧಿ ನೀತಿಯಾಗಿ ಮತ್ತೊಂದು ಒರೆಯನ್ನು ಸಾಲಗಾರ ರೈತರಿಗೆ ಹಾಕಿದೆಯೆಂದು ಜಿಲ್ಲೆಯ ರೈತರು ಅಲ್ಲಲ್ಲಿ ಮಾತನಾಡಿಕೊಳ್ಳುವುದು ಸಾಮಾನ್ಯವಾಗಿದೆ. ಹೆಚ್ಚಿನವರು ಸಾಲದ ಬಡ್ಡಿಮನ್ನಕ್ಕಾಗಿ ಆಸೆಗಣ್ಣಿನಿಂದ ಶಾಸನ ಸಭೆಕಡೆ ಬರಬಹುದೇನೋ ಎಂದು ಮಳೆಗಾಗಿ ಮೊಡದ ಕಡೆ ನೋಡುವುದು ಮುಂದುವರೆಯುತ್ತಿದೆ.

ಯು.ಬಸವರಾಜು

ಜಾಗತೀಕರಣದ ವಿರುದ್ಧ ಎರಡು ಲಕ್ಷ ಜನರ ಪ್ರತಿಭಟನೆ





ಇಟಲಿಯ ಜಿನೊವದಲ್ಲಿ ಜಿ-8 ಸಭೆ

ಬೆಂಬಿಡದ ಭೂತದಂತೆ ಬಂಡವಾಳಶಾಹಿ ಜಾಗತೀಕರಣದ ನಾಯಕರನ್ನು ಬೆನ್ನು ಹತ್ತಿರುವ ಪ್ರತಿಭಟನೆಯು ಇತ್ತೀಚಿನ ಕುರಿತಾಗಿ ಇಟಲಿಯ ಜಿನೇವಾದಲ್ಲಿ ಎರಡು ಲಕ್ಷ ಜನ ಭಾಗವಹಿಸಿದ ಭಾರಿ ರ್‍ಯಾಲಿ ನಡೆಯಿತು. ಇತ್ತೀಚಿನ ಸಮರಶೀಲ ಪ್ರತಿಭಟನೆಗಳಿಂದ ಬೆದರಿದ್ದ ಪೋಲೀಸರು ಭಾರಿ ಬಂದೋಬಸ್ತು ಮಾಡಿದ್ದರು. ಇಟಲಿಯ ಜಿನೇವಾದಲ್ಲಿ ಜಗತ್ತಿನ ಅತ್ಯಂತ ಅಭಿವೃದ್ಧ ಸಾಮ್ರಾಜ್ಯಶಾಹಿ ಎಂಟು ದೇಶಗಳ (ಜಿ-8) ನಾಯಕರ ಶಿಖರ ಸಮ್ಮೇಳನ ಸೇರಿತ್ತು. ಜಿ-8 ನಾಯಕರು ಏನು ಚರ್ಚೆ ಮಾಡಿದರು ಎಂಬುದಕ್ಕಿಂತ ಪ್ರತಿಭಟನಾ ಪ್ರದರ್ಶನವೇ ದೊಡ್ಡ ಸುದ್ದಿಯಾಯಿತು. ಎಲ್ಲಾ ದೇಶಗಳ ಜನರ ಹಿತಾಸಕ್ತಿಗೆ ಪ್ರತಿಕೂಲವಾದ ವಿಷಯಗಳ ಚರ್ಚೆಗೆ ಸೇರಿದ್ದಾರೆ. ಅದರಿಂದ ಏನನ್ನೂ ನಿರೀಕ್ಷಿಸಲಾಗುವುದಿಲ್ಲ ಎಂದು ನಿರ್ಧಾರಕ್ಕೆ ಬಂದಂತಿತ್ತು.

ಕೇವಲ ಎಂಟು ನಾಯಕರನ್ನು ಜನರ ಕೋಪದಿಂದ ರಕ್ಷಿಸಲು 20 ಸಾವಿರಕ್ಕೂ ಹೆಚ್ಚು ಪೋಲೀಸರನ್ನು ಅಣಿ ನೆರೆಸಲಾಗಿತ್ತು. ಶಿಖರ ಸಭೆ ನಡೆಯುತ್ತಿದ್ದ ಹಲವು ಮೈಲಿಗಳ ದೂರದವರೆಗೆ 'ಅಪಾಯದ ಪ್ರದೇಶ' ಎಂದು ಗುರುತಿಸಿ ಅಲ್ಲಿ ನಾಗರಿಕರಿಗೆ ಪ್ರವೇಶ ಇರಲಿಲ್ಲ. ಪ್ರತಿಭಟನಾಕಾರರು ಎಂದಿನಂತೆ ಇದನ್ನು ಪ್ರಶ್ನಿಸಿದರು. ಎರಡು ಲಕ್ಷ ಜನ ಬಂಡವಾಳಶಾಹಿ ಜಾಗತೀಕರಣದ ನೀತಿಗಳನ್ನು ಪ್ರಶ್ನಿಸಿ ಪ್ರತಿಭಟನಾ ರ್‍ಯಾಲಿ ನಡೆಸಿದರು. 99 ರಲ್ಲಿ ಸಿಯಾಟಲ್‌ನಲ್ಲಿ WTO ಸಭೆಯಿಂದ ಶುರುವಾದ ಪ್ರತಿಭಟನಾ ರ್‍ಯಾಲಿಗಳ ಪರಂಪರೆ ಬೃಹದಾಕಾರವಾಗಿ ಬೆಳೆದಿದೆ. ಪೋಲೀಸರ ಪ್ರಚೋದನಕಾರಿ ನಿಲುವಿನಿಂದ ಹಿಂಸಾಚಾರವೂ ಬೆಳೆದಿದೆ. ಗೋತೆನ್‌ಬರ್ಗ್‌ನಂತೆ (ಇತ್ತೀಚಿಗಿನ ಪ್ರತಿಭಟನಾ ರ್‍ಯಾಲಿ ನಡೆದ ಸ್ಥಳ) ಇಲ್ಲಿ ಒಬ್ಬ ಪ್ರದರ್ಶನಕಾರರನ್ನು ಪೋಲೀಸರು ಕೈ ಅಳತೆಯಲ್ಲೇ ಗುಂಡಿಟ್ಟು ಕೊಂದಿದ್ದರಿಂದ ಕೋಪ ಭುಗಿಲೆದ್ದಿತು. ಗೋಳೀಬಾರು ಅದರಿಂದ ಸಾವು ಅಪರೂಪವೆನ್ನುವ ಯುರೋಪಿನಲ್ಲಿ ಕೆಲವೇ ದಿನಗಳಲ್ಲಿ ಇನ್ನೊಂದು ಸಾವು ಎಲ್ಲರನ್ನು ಗರಬಡಿಸಿದೆ. ಯುರೋಪಿನಾದ್ಯಂತ ಇದರ ವಿರುದ್ಧ ಪ್ರತಿಭಟನೆ ನಡೆಯಿತು. ಇದಕ್ಕೆ ಪ್ರತಿಕಾರವೆಂಬಂತೆ ಜಿನೇವಾ ಪ್ರತಿಭಟನೆಗಳನ್ನು ಸಂಯೋಜಿಸಿದ 'ಜಿನೇವಾ ಸಾಮಾಜಿಕ ಫೋರಂ' ಎಂಬ ಸಂಘಟನೆಯ ಆಫೀಸಿನ ಮೇಲೆ 200 ಪೋಲೀಸರು ದಾಳಿ ಮಾಡಿ, ಹಿಂಸಾಚಾರ ನಡೆಸಿದರು. ಕಾರ್ಯಾಚರಣೆಯಲ್ಲಿ ಹೆಲಿಕ್ಯಾಪ್ಟರುಗಳು ಭಾಗವಹಿಸಿದ್ದವು. ಪೋಲೀಸರ ದಾಳಿಗೆ ಯಾವುದೇ ಪ್ರತಿರೋಧ ತೋರದಿದ್ದರು ಕಛೇರಿಯಲ್ಲಿದ್ದ ಸುಮಾರು 90 ಕ್ಕೂ ಹೆಚ್ಚು ಕಾರ್ಯಕರ್ತರನ್ನು ಮನಬಂದಂತೆ ಹೊಡೆದು, ಸ್ಟ್ರೆಚರ್‌ನಲ್ಲಿ ಪೋಲೀಸರು ಕೊಂಡು ಹೋಗುವುದು ಕಂಡು ಬಂತು. ಪೋಲೀಸರ ಈ ಬರ್ಬರ ಕೃತ್ಯಕ್ಕೂ, ತೀವ್ರ ಪ್ರತಿಭಟನೆ ಕಂಡು ಬಂತು. ಇಲ್ಲಿದೆ ಈ ಚಳುವಳಿಯ ಚಿತ್ರಗಳು



ಕೊಲೆ ▲

▼ ಕೊಲೆಗಾರರು



ಕೊಲೆಯಾದ ಹುಡುಗನ ಸಂಗಾತಿಗಳ ಹೇಳಿಕೆ (ಜುಲೈ 20, 2001)

ಶಿಖರ ಸಭೆಯಿಂದ ಮೈಲುಗಳ ದೂರದಲ್ಲಿದ್ದರು ಪ್ರತಿಭಟನಾಕಾರರು. ಹಾಗಾದರೆ ಪೋಲೀಸರು ಏನನ್ನೂ, ಯಾರನ್ನು ರಕ್ಷಿಸುತ್ತಿದ್ದದ್ದು? ಶಿಖರ ಸಭೆಯ ಮೈಲುಗಳಷ್ಟು ದೂರಕ್ಕೆ ಎಳೆದಿದ್ದ ಅಪಾಯದ ಕೆಂಪು ವಲಯ ಎಂದು ಲಕ್ಷ್ಮಣ ರೇಖೆಯನ್ನೇ? ಮೈಲುಗಳಷ್ಟು ದೂರದಲ್ಲಿದ್ದ ನಾಯಕರನ್ನೇ?

ಈ ಶಿಖರ ಸಭೆ ಮತ್ತು ಕೆಂಪು ವಲಯ ಯಾರನ್ನು ಪ್ರತಿನಿಧಿಸುತ್ತದೆ? ಎಲ್ಲಾ ದುಡ್ಡು ದೋಚಿಕೊಂಡಿರುವ, ಎಲ್ಲಾ ಆಸ್ತಿ ಬಾಚಿಕೊಂಡಿರುವ, ಎಲ್ಲಾ ಅಧಿಕಾರ, ಹಕ್ಕುಗಳು, ಘನತೆ, ಕೊಬ್ಬು ತುಂಬಿರುವ ದೊಡ್ಡ ಫ್ಯಾಸಿಸ್ಟರು ಇವರು.

ಕೊಲೆಯಾದ ಈ ಹುಡುಗ ಬಾಲಿಲ್ಲಿ, ಸಾಮ್ರಾಜ್ಯದತ್ತ ಕಲ್ಲು ಒಗೆದ ಹಸಿದ ಹುಡುಗ. ಅವನ ಮೈತುಂಬಾ ಬೆಳೆದು, ಜೀವ ತುಂಬಿತ್ತು. ಅವನು ರ್‍ಯಾಲಿಯಲ್ಲಿದ್ದ ಸಾವಿರಾರು ಮತ್ತು ಜಗತ್ತಿನಾದ್ಯಂತ ತಮ್ಮ ಕಂಪ್ಯೂಟರುಗಳಲ್ಲಿ ನೋಡಿದ ಲಕ್ಷಾಂತರ ಜನರ ಮನಸ್ಸು, ಹೃದಯಗಳಲ್ಲಿ ಆತ ಚಿರಾಯುವಾಗಿರುತ್ತಾನೆ. ಅವನು ನಮ್ಮವನಾಗಿದ್ದ. ಉತ್ತಮ ಬದುಕಿನ ನಮ್ಮ ಆದರ್ಶಗಳ ಪ್ರತಿನಿಧಿಯಾಗಿದ್ದ. ಅವನು ನಮ್ಮ ಪರವಾಗಿ ದನಿಯೆತ್ತಿದ್ದ.

ನಾವು ಆಫ್ರಿಕಾ, ಏಶ್ಯಾ, ಲ್ಯಾಟಿನ್ ಅಮೆರಿಕಾ, ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಕೆನಡಾ, ಅಮೆರಿಕ, ಬ್ರಿಟನ್, ಯುರೋಪುಗಳಿಂದ ಅವನಿಗಾಗಿ ಕಂಬನಿ ಮಿಡಿಯುತ್ತೇವೆ.

ಅವರ ಮಾಧ್ಯಮಗಳು ಸುಳ್ಳು ಹೇಳಬಹುದು. ಆದರೆ ನಾವು ಎಲ್ಲವನ್ನೂ ಕಣ್ಣಾರೆ ನೋಡಿದೆವು. ಅವರ ಶಸ್ತ್ರಾಸ್ತ್ರಗಳು, ಬೇಲಿಗಳು, ಕ್ಷಿಪಣಿಗಳು, ಶಸ್ತ್ರಸಜ್ಜಿತ ಪೋಲೀಸರು. ಅವರು ಪ್ರತಿಭಟನಾಕಾರರ ಮೇಲೆ ಕಬ್ಬಿಣದ ಬಾರುಕೋಲುಗಳು, ಬೂಟುಗಳು, ಮುಷ್ಟಿಗಳು, ಕಾರುಗಳು, ಜಲಫಿರಂಗಿಗಳು, ಅಶ್ರುವಾಯು, ಗನ್ನುಗಳನ್ನು ಚಲಾಯಿಸುವುದನ್ನು ನೋಡಿದೆವು.

ನಾವು ಅವರು ಈ ಹುಡುಗನನ್ನು ನಮ್ಮ ಕಣ್ಣೆದುರಲ್ಲೇ ಕೊಲೆ ಮಾಡುವುದನ್ನು ನೋಡಿದೆವು. ನೋಡಿ ದುಃಖಪಟ್ಟೆವು.

............ನಿಲ್ಲಿಸಿ ಭ್ರೂಣ ಹತ್ಯೆ

ಹಿಂದಿನ ಪುಟದಿಂದ

ಪ್ರಥಮ ಬಾರಿಗೆ ಮಾಡಲಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳ ಲಿಂಗ ಅನುಪಾತ - 1981 ರಲ್ಲಿ 962 ಇದ್ದುದು 1991 ರಲ್ಲಿ 945 ಕ್ಕೆ ಇಳಿದಿದೆ. ಒಂದು ದಶಕದಲ್ಲಿ 17 ಪಾಯಿಂಟುಗಳ ಇಳಿಕೆಯೆಂದರೆ ಮುಂದಿನ ದಶಕದಲ್ಲಿ ಮಹಿಳೆಯರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿ ಸಾಮಾಜಿಕ ಅಸಮತೋಲನ ಗಂಭೀರವಾಗಿ ಕಾಡುತ್ತದೆ - ರಾಜ್ಯವಾರು ಗಮನಿಸಿದರೆ.

ರಾಜ್ಯಗಳ ಹೆಸರು	ಏರಿಕೆ ಇಳಿಕೆಯ ಪ್ರಮಾಣ
ಗುಜರಾತ್	-50
ರಾಜಸ್ಥಾನ	-38
ಪಂಜಾಬ್	-31
ಒರಿಸ್ಸಾ,	-28
ಮ.ಪ್ರದೇಶ	-26
ಕರ್ನಾಟಕ	-11
ಕೇರಳ	+5
ಲಕ್ಷದ್ವೀಪ	+33
ತ್ರಿಪುರ	+8
ಪ.ಬಂಗಾಳ	-4

ಈ ಮೇಲಿನ ಕೋಷ್ಟಕ ನಮಗೆ ತಿಳಿಸುವುದೇನೆಂದರೆ ಕೇರಳ, ತ್ರಿಪುರ, ಲಕ್ಷದ್ವೀಪದಂತಹ ರಾಜ್ಯಗಳಲ್ಲಿ ಏರಿಕೆಯ ಅನುಪಾತ ಇಳಿಕೆಯಲ್ಲಿ - ಪ.ಬಂಗಾಳ ಅತ್ಯಂತ ಕಡಿಮೆ ಅನುಪಾತದಲ್ಲಿ ಕಂಡುಬರುತ್ತಿದೆ. ಆದರೆ ಪರಿಸ್ಥಿತಿಯ ಗಂಭೀರತೆಯೆದುರು ಈ ಪ್ರಮಾಣ ಅತ್ಯಂತ ಕಡಿಮೆ ಮಟ್ಟದ್ದಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಘಟನೆಗಳನ್ನು ವಿಶ್ಲೇಷಿಸಿದಾಗ...

ಅತ್ಯಂತ ಆಳವಾಗಿ ಬೇರೂರಿರುವ ಪುರುಷ ಪ್ರಧಾನ ಮೌಲ್ಯಗಳು ಮಹಿಳೆಯರ ಎಲ್ಲ ಹಂತದ ಜೀವನವನ್ನೇ ಹೊಸಕಿ ಹಾಕುತ್ತಿವೆ. ಈ ಅಂಶವನ್ನೇ ಮುಂದಿಟ್ಟು ಕೊಂಡು ತಮಿಳುನಾಡಿನಲ್ಲಿ ಶಾಲಾ ಮಕ್ಕಳ ನಡುವೆ ನಡೆಸಿದ ಸಮೀಕ್ಷೆಯಲ್ಲಿ ಕಂಡು ಬಂದ ಪ್ರಧಾನ ಅಂಶಗಳು-

ಕೇಳಿದ ಪ್ರಶ್ನೆಗಳು - ಅವರು ಮನೆಯಲ್ಲಿ ಬಯಸುವ ಮಗು ಗಂಡೋ ಹೆಣ್ಣೋ? - ಶೇ 99 ಗಂಡು ಎಂಬ ಉತ್ತರ ನೀಡಿದ್ದಾರೆ.

ಅವರು ಕೊಟ್ಟ ಉತ್ತರ - ಹೆಣ್ಣು ಮಕ್ಕಳೆಂದರೆ ತಂದೆ ತಾಯಿಯರಿಗೆ ಹೆಚ್ಚು ಖರ್ಚು ಬರುತ್ತದೆ.

14 ವರ್ಷದ ಬಾಲಕನೊಬ್ಬ ಮನೆಯಿಂದ ಓಡಿ ಬಂದಿದ್ದ. ಕಾರಣ ಅವನ ತಂದೆ ತಾಯಿಯರು ಅವಳಿ ಸೋದರಿಯರನ್ನು ಸಾಯಿಸಲಿಲ್ಲ ಎಂಬುದಕ್ಕೆ. ಅದಕ್ಕೆ ಅವನ ಉತ್ತರ - ಅವರು ದೊಡ್ಡವರಾದ ಮೇಲೆ ತನ್ನಿಂದ ಅವರ ಜವಾಬ್ದಾರಿ ಹೊರಲು ಸಾಧ್ಯವಿಲ್ಲ ಎಂಬುದಾಗಿತ್ತು.

ಇದು ನಮ್ಮ ನವ್ಯ, ಭವ್ಯ, ಭಾರತ. ಉದಾರವಾಗಿ ಸಿಗುವ ವ್ಯಾಲಂಟೈನ್ಸ್ ಡೇ, ಮದರ್ಸ್‌ಡೇಗಳನ್ನು ಆಚರಿಸುವ ಸಂಸ್ಕೃತಿಗೆ ಮಾರುಹೋಗುತ್ತಿರುವ, ಮಾತೃದೇವೋ ಭವ ಎಂಬ ಕಮಟುವಾಸನೆಯ ಹಳಸಲು ಮಾತುಗಳನ್ನು ಕೇಳುತ್ತ, ತಂತ್ರಜ್ಞಾನದ ತುತ್ತ ತುದಿಗೆ ತಲುಪಲು ದಾಪುಗಾಲು ಹಾಕುತ್ತಿರುವ ಭ್ರಮೆಯಲ್ಲಿ ತೇಲುತ್ತಿರುವ ನಾವು ನಿಜ ವಾಸ್ತವದಲ್ಲಿ ಕಾಣುತ್ತಿರುವುದೇನು?

ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ನಲುಗಿ ಸಾಯುತ್ತಿರುವ ಮಹಿಳೆಯರ ಸಮೂಹ ಒಂದೆಡೆಯಾದರೆ, ಹುಟ್ಟುವ ಮೊದಲೇ ಸಾವನ್ನಪ್ಪುತ್ತಿರುವ ಹೆಣ್ಣು ಭ್ರೂಣಗಳು ಇನ್ನೊಂದೆಡೆ. ಅಕಸ್ಮಾತ್ ಹುಟ್ಟಿದೆ ಎಂಬ ಕಾರಣಕ್ಕಾಗಿ ಕೊಲೆಯಾಗುತ್ತಿರುವ ಹಸು ಕಂದಮ್ಮಗಳು ಇನ್ನೊಂದೆಡೆ. ಈ ವಿಷವರ್ತುಲದಿಂದಾಚೆ ಬರಲು ಈ ತಾರತಮ್ಯದ ವರ್ಗ ಸಮಾಜದ ಎಲ್ಲ ಹಂತದಲ್ಲಿಯೂ ಪ್ರಯತ್ನಗಳಾಗದಿದ್ದಲ್ಲಿ ಸಂಭವಿಸಬಹುದಾದ ಅನಾಹುತಗಳಿಗೆ ಯಾರನ್ನು ಜವಾಬ್ದಾರಿಯನ್ನಾಗಿ ಮಾಡುವುದು? ಪ್ರಕೃತಿಯಲ್ಲಿ ಅಸಮತೋಲನ ಹೆಚ್ಚಿದಂತೆಲ್ಲ ಕಾಡುವ ಸಮಸ್ಯೆಗಳಿಗೆ ಉತ್ತರ ನೀಡುವವರಾರು? ○

ಫೂಲನ್‌ದೇವಿ ಘೋರ ಹತ್ಯೆ - ಹಲವು ಪ್ರಶ್ನೆಗಳು

ಕೇಂದ್ರ ಗೃಹ ಸಚಿವಾಲಯದ ಭದ್ರತಾ ವೈಫಲ್ಯ



ಸಮಾಜವಾದಿ ಪಕ್ಷದ ಲೋಕಸಭಾ ಸದಸ್ಯೆ ಫೂಲನ್‌ದೇವಿ ಅಜ್ಞಾತ ಹಂತಕರ ಗುಂಡಿಗೆ ಬಲಿಯಾಗಿದ್ದಾರೆ. ಜುಲೈ 25 ರಂದು ಬುಧವಾರ ಮಧ್ಯಾಹ್ನ 1.30 ಕ್ಕೆ ಎಂದಿನಂತೆ ಸಂಸತ್ ಕಲಾಪದಲ್ಲಿ ಪಾಲ್ಗೊಂಡ ನಂತರ ಅವರು ಅಶೋಕ ರಸ್ತೆಯ ತಮ್ಮ ಅಧಿಕೃತ ನಿವಾಸಕ್ಕೆ ಬಂದು ಕಾರಿನಿಂದ ಕೆಳಗಿಳಿಯುತ್ತಿದ್ದಂತೆ ಕೊಲ್ಲಲು ಹೊಂಚು ಹಾಕಿ ಕಾಯುತ್ತಿದ್ದ ಹಂತಕರು ಮುವತ್ತೆಂಟು ವರ್ಷದ ಫೂಲನ್‌ದೇವಿ ಮೇಲೆ ಗುಂಡಿನ ಮಳೆಗರೆದರು. ತೀವ್ರ ಗಾಯಗೊಂಡ ಅವರನ್ನು ರಾಮಮನೋಹರ ಲೋಹಿಯ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅವರು ಕೊನೆಯುಸಿರೆಳೆದಿದ್ದರು.

ಸಂಸತ್ ಭವನದ ಕೇವಲ ಒಂದು ಕಿ.ಮಿ. ಅಂತರಲ್ಲಿ ಸಂಪೂರ್ಣ ಸುರಕ್ಷತಾ ವಲಯದಲ್ಲಿರುವ ಅಶೋಕ ರಸ್ತೆಯ ಮನೆಯ ಎದುರು ಹಾಡುಹಗಲೇ ಈ ಕೊಲೆ ನಡೆದಿದೆ ಎಂದರೆ ಕೇಂದ್ರ ಗೃಹ ಸಚಿವಾಲಯದಲ್ಲಿನ ಭದ್ರತೆಯಲ್ಲಿನ ಲೋಪವನ್ನು ಎತ್ತಿ ತೋರಿಸುತ್ತದೆ.

ರಾಜಧಾನಿ ಹೃದಯ ಭಾಗದಲ್ಲಿರುವ ಪಾರ್ಲಿಮೆಂಟ್‌ಗೆ ಒಂದು ಕಿ.ಮಿ. ದೂರದಲ್ಲಿರುವ ಹಾಗೂ ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿರುವ ಈ ಪ್ರದೇಶದಲ್ಲೇ ಹಾಡು ಹಗಲೇ ಲೋಕಸಭಾ ಸದಸ್ಯರೊಬ್ಬರ ಘೋರ ಕೊಲೆ ನಡೆದಿರುವುದು ರಾಷ್ಟ್ರವನ್ನು ದಿಗ್ಭ್ರಮೆಗೊಳಿಸಿದೆ. ಆರೋಪಿಗಳನ್ನು ತಕ್ಷಣ ಬಂಧಿಸುವಲ್ಲಿಯೂ ತನ್ನ ವಿಫಲತೆಯನ್ನು ತೋರಿಸಿದೆ.

ಫೂಲನ್‌ರವರ ಪ್ರಾಣಕ್ಕೆ ಅಪಾಯವಿರುವ ಬಗ್ಗೆ ಸರ್ಕಾರಕ್ಕೆ ತಿಳಿದಿದ್ದರೂ ಆಕೆಗೆ ಒದಗಿಸಿದ್ದ ಭದ್ರತೆಯನ್ನು ಉತ್ತರ ಪ್ರದೇಶದ ಸರ್ಕಾರ ಕಡಿತಗೊಳಿಸಿತ್ತು.

ಚಂಬಲ್‌ನಿಂದ ಸಂಸತ್‌ವರೆಗೆ

ಫೂಲನ್‌ದೇವಿ ಉತ್ತರ ಪ್ರದೇಶದ ಜತೌನ್ ಜಿಲ್ಲೆಯ ಗುರ್ಹಾಕಾ ಪೂರ್ವಾ ಎಂಬ ಕುಗ್ರಾಮದಲ್ಲಿ ಜನಿಸಿದಳು. ಉಚ್ಛ ವರ್ಗದ ಠಾಕೂರ್ ಜಮೀನ್ದಾರರು ಫೂಲನ್ ಕುಟುಂಬಕ್ಕೆ ನೀಡಿದ ಚಿತ್ರಹಿಂಸೆ, ಕಿರುಕುಳ, ಆಕೆಯ ಮೇಲೆ ನಡೆಸಿದ ಸಾಮೂಹಿಕ ಅತ್ಯಾಚಾರಗಳ ಪರಿಣಾಮ ಸೇಡು ತೀರಿಸಿಕೊಳ್ಳಲು ಫೂಲನ್ ಚಂಬಲ್ ಕಣಿವೆ ಪ್ರವೇಶಿಸಿ ಡಕಾಯಿತಿ ರಾಣಿ ಎನಿಸಿದ್ದಳು. ಆಕೆ 1983 ರಲ್ಲಿ ಅಂದಿನ ಮಧ್ಯ ಪ್ರದೇಶದ ಮುಖ್ಯಮಂತ್ರಿ ಅರ್ಜುನ್‌ಸಿಂಗ್‌ರ ಮುಂದೆ ಶಸ್ತ್ರಾಸ್ತ್ರ ತ್ಯಜಿಸಿ ಶರಣಾದಳು. ಜತೆಗೆ ಆಕೆಗೆ 11 ವರ್ಷ ಸೆರೆವಾಸ ವಿಧಿಸಲಾಯ್ತು.

ಆಕೆಯ ವಿರುದ್ಧ 22 ಕೊಲೆ ಪ್ರಕರಣಗಳೂ ಒಳಗೊಂಡಂತೆ 55 ಅಪರಾಧ ಪ್ರಕರಣಗಳೂ ದಾಖಲಾಗಿದ್ದವು. ಆದರೆ ಆಕೆಯ ಅನಾರೋಗ್ಯವನ್ನು ಪರಿಗಣಿಸಿ 1994 ರಲ್ಲಿ ಜೈಲಿನಿಂದ ಬಿಡುಗಡೆ ಮಾಡಲಾಯ್ತು. ಅದೇ ವರ್ಷ ಆಕೆ ಶಾಸಕರಾದ ಉಮೇದ್ ಸಿಂಗ್‌ರನ್ನು ವಿವಾಹವಾದಳು. ಇದು ಆಕೆಯ ಎರಡನೇ ಮದುವೆ.

ಸಂಸತ್ತಿಗೆ ಆಯ್ಕೆ


ನಂತರ ರಾಜಕೀಯ ಪ್ರವೇಶಿಸಿದ ಆಕೆ 1996 ರಲ್ಲಿ ಪ್ರಥಮ ಬಾರಿಗೆ ಲೋಕಸಭೆಗೆ ಚುನಾಯಿತರಾದರು. ನಂತರ ಎರಡನೇ ಬಾರಿಗೆ ಈ ಲೋಕಸಭೆಯ ಸದಸ್ಯರಾಗಿದ್ದಾರೆ. ಆ ಕತ್ತಲ ಬದುಕಿನಿಂದ ದಶಕದ ಹಿಂದೆಯೇ ಹೊರಬಂದ ಆಕೆ ಈಗ ಸಂಸತ್ತಿನ ಚುನಾಯಿತ ಸದಸ್ಯೆಯಾಗಿದ್ದರು.

ಭದ್ರತಾ ಲೋಪವೇ ಮುಖ್ಯಕಾರಣ

ಫೂಲನ್ ಹತ್ಯೆಗೆ ಭದ್ರತಾ ಲೋಪವೇ ಮುಖ್ಯ ಕಾರಣವಾಗಿದೆ. ಸಂಸತ್ ಸದಸ್ಯರ ನಿವಾಸಗಳು ಯಾವುದೇ ನಿರ್ಜನ ಪ್ರದೇಶದಲ್ಲಿಲ್ಲ. ಪೋಲೀಸರ ಕಟ್ಟೆಚ್ಚರದ ಕಾವಲಿನ ನಡುವೆ ಸಂಸತ್ ಭವನದ ಒಂದು ಕಿ.ಮಿ. ಅಂತರದಲ್ಲೇ ಇರುವ ನಿವಾಸದ ಬಳಿ ಹಂತಕರು ಹಾಡುಹಗಲಲ್ಲೇ ಗುಂಡು ಹಾರಿಸಿ ಸಂಸತ್ ಸದಸ್ಯರೊಬ್ಬರನ್ನು ಕೊಲ್ಲುತ್ತಾರೆ ಮತ್ತು ತಮ್ಮ ಘೋರ ಕೃತ್ಯವೆಸಗಿ ಪೋಲೀಸರ ಕೈಗೆ ಸಿಗದೆ ಪರಾರಿಯಾಗುತ್ತಾರೆಂದರೆ ರಾಷ್ಟ್ರದ ಪ್ರಜೆಗಳು ಇದನ್ನು ಗಂಭೀರವಾಗಿ ಚಿಂತಿಸುವಂತಾಗಿದೆ.

ವಿಡಂಬಾರಿಯವರಿಗೆ ಮಧುರಚೆನ್ನ ಪ್ರಶಸ್ತಿ

ಚುಟುಕ ಕವಿ ಉತ್ತರ ಕನ್ನಡದ ವಿಡಂಬಾರಿಯವರಿಗೆ ಈ ವರ್ಷದ ಮಧುರ ಚೆನ್ನ ಗೌರವ ಪ್ರಶಸ್ತಿ' ಲಭಿಸಿದೆ. ಚಿತ್ರದುರ್ಗ ಜಿಲ್ಲೆಯ ಆಕೃತಿ ಪ್ರತ್ರಿಕಾ ಬಳಗ ಕೊಡಮಾಡುವ ಈ ಪ್ರಶಸ್ತಿಗಾಗಿ ಒಬ್ಬ ಗ್ರಾಮೀಣ ಪ್ರದೇಶದ ನಿರ್ಲಕ್ಷಿತ ಕವಿಯನ್ನು ಆಯ್ಕೆಮಾಡಿರುವುದು ಸಂತಸದ ಸಂಗತಿ. ನವೋದಯದ ಮಹತ್ವದ ಕವಿ ಮಧುರ ಚೆನ್ನರ ಹೆಸರಿನಲ್ಲಿ ಕೊಡುವ ಈ ಪ್ರಶಸ್ತಿ ಶಿವಮೊಗ್ಗದಲ್ಲಿ ಜುಲೈ ತಿಂಗಳ ಕೊನೆಯಲ್ಲಿ ನಡೆಯುವ ಸಮಾರಂಭದಲ್ಲಿ ಕೊಡಲಾಗು ವುದೆಂದು ಪ್ರಶಸ್ತಿ ಸಮಿತಿ ತಿಳಿಸಿದೆ.



ವಿಡಂಬಾರಿ ಎನ್ನುವ ಕಾವ್ಯನಾಮದೊಂದಿಗೆ ಕನ್ನಡ ಕಾವ್ಯಕ್ಷೇತ್ರದಲ್ಲಿ ತಮ್ಮತನವನ್ನು ದಾಖಲಿಸಿದ ವಿಷ್ಣು ಜಿ. ಭಂಡಾರಿ ಯವರು ಉತ್ತರ ಕನ್ನಡದ ಇಡಗುಂಜಿಯವರು. ಬದುಕಿನುದ್ದಕ್ಕೂ ಅಂಚೆ ಪೇದೆಯಾಗಿ ಸೇವೆ ಸಲ್ಲಿಸುತ್ತಲೇ ಪಡೆದ ಅನುಭವವನ್ನು, ಪಟ್ಟ ಪಾಡನ್ನು ಚೌಪದಿಯಲ್ಲಿ ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಅತ್ಯಂತ ಪ್ರಖರವಾದ ಸಿಟ್ಟನ್ನು ಪ್ರತಿಭಟನೆಯನ್ನು ವಾಸ್ತವವನ್ನು ಕೇವಲ ನಾಲ್ಕು ಸಾಲಿನ ಚುಟುಕದಲ್ಲಿ ಹೇಳುವ ಇವರು ದಿನಕರ ದೇಸಾಯಿಯವರ ಪರಂಪರೆಯನ್ನು ಅರ್ಥಪೂರ್ಣವಾಗಿ ಮುಂದುವರಿಸಿದ್ದಾರೆ.

ಎಡಪಂಥೀಯ ಸಿದ್ಧಾಂತವನ್ನು ಅಪ್ಪಿಕೊಂಡ ವಿಡಂಬಾರಿಯವರು ಈಗಾಗಲೇ 'ಒಗ್ಗರಣೆ' ಮತ್ತು 'ಕವಳ' ಎನ್ನುವ ಎರಡು ಚುಟುಕು ಸಂಕಲವನ್ನು ಪ್ರಕಟಿಸಿದ್ದಾರೆ. ಇನ್ನೊಂದು ಅವರ ಮುಖ್ಯಕೃತಿ "ಅಂಚಿ ಪೇದೆಯ ಆತ್ಮಚರಿತ್ರೆ"

62 ವರ್ಷದ ವಿ.ಜಿ. ಭಂಡಾರಿಯವರು ರಾಜ್ಯ ಮಟ್ಟದ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ. ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಅನೇಕ ಚುಟುಕುಗಳು ಪ್ರಕಟವಾಗಿವೆ.'ಐಕ್ಯರಂಗ' ಕೂಡ ಅವರ ಅನೇಕ ಮಹತ್ವದ ಚುಟುಕನ್ನು ಪ್ರಕಟಿಸಿವೆ. ಉತ್ತರ ಕನ್ನಡದಲ್ಲಿ ಪುಸ್ತಕ ಚಳುವಳಿಯನ್ನು ಬೆಳೆಸುವ ಮಹಾತ್ವಾಕಾಂಕ್ಷೆ ಯಿಂದ ಪ್ರಾರಂಭವಾದ 'ಚಿಂತನ ಕನ್ನಡ ಪುಸ್ತಕ' ಮಳಿಗೆಯಲ್ಲಿ ಇಂದು ಕಾರ್ಯಕರ್ತರಾಗಿ ದುಡಿಯುತ್ತಿ ರುವ ವಿಡಂಬಾರಿಯವರು ಪ್ರತಿನಿತ್ಯ ಬಸ್ ನಿಲ್ದಾಣಕ್ಕೆ ಹೋಗಿ ನೂರಾರು ಪುಸ್ತಕ ಗಳನ್ನು ಈಗಲೂ ಮಾರಾಟ ಮಾಡು ತ್ತಾರೆ. ಸಂವಿಧಾನ ಪರಾಮರ್ಶೆ ಎನ್ನುವ ಪುಸ್ತಕವನ್ನು (ಅಧ್ಯಯನ ಪ್ರಕಾಶನ ಪ್ರಕಟನೆ) ಸುಮಾರು 1500 ಪ್ರತಿಯಷ್ಟು ಒಬ್ಬರೇ ಮಾರಾಟ ಮಾಡುವ ಮೂಲಕ ಕವಿತೆಯಲ್ಲಿ ಮಾತ್ರ ಪ್ರಗತಿಪರವಾಗಿರದೇ ತನ್ನ ಜೀವನ ವಿಧಾನವನ್ನೇ ಪ್ರಗತಿಪರತೆಗೆ ಒಗ್ಗಿಸಿ ಕೊಂಡವರು. ಹಿಂದೆ ಅಂಚೆಪೇದೆ ಯಾಗಿ ಮನೆಮನೆಗೆ ಪತ್ರ ಮುಟ್ಟಿಸು ತ್ತಿದ್ದ ಅವರು ಇಂದು ಪುಸ್ತಕ ಪೇದೆಯಾಗಿ ಮನೆಮನೆಗೆ ಅರಿವನ್ನು ತಲುಪಿಸುತ್ತಿದ್ದಾರೆ.

ತಾನು ಬರೆಯುತ್ತಲೇ, ಉಳಿದವರು ಬರೆದ ಪ್ರಗತಿಪರ ಸಾಹಿತ್ಯವನ್ನು ಜನರಿಗೆ ಮಾರಾಟ ಮಾಡುವ, ಜನವಿರೋಧಿ ವ್ಯವಸ್ಥೆಯ ಬದಲಾವಣೆ ಯನ್ನು ಕಾವ್ಯದಲ್ಲಿ ಪ್ರತಿಪಾದಿಸುತ್ತಲೆ, ಇಂಥ ಬದಲಾವಣೆಗಾಗಿ ನಡೆಯುತ್ತಿರುವ ಹೋರಾಟದಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಿರುವ ವಿಡಂಬಾರಿಯವರಿಗೆ ಈ ವರ್ಷದ ಮದುರಚೆನ್ನ ಗೌರವ ಕಾವ್ಯ ಪ್ರಶಸ್ತಿ ಸಿಕ್ಕಿರುವುದು ಸಂತೋಷದ ಸಂಗತಿ. ಪ್ರಶಸ್ತಿ ಪಡೆದ ಅವರಿಗೆ ಈ ಮೂಲಕ ಐಕ್ಯರಂಗ ಅಭಿನಂದಿಸುತ್ತದೆ.

ವಿಠಲ ಭಂಡಾರಿ. ○

ಒಲಿಪಿಂಕ್ಸ್ 2008 ಚೀನಾಕ್ಕೆ ಸಂದ ಗೌರವ

2008ನೇ ಇಸವಿಯಲ್ಲಿ ಒಲಿಂಪಿಕ್ಸ್ ಕ್ರೀಡಾಕೂಟ ನಡೆಸಲು ಮಾಸ್ಕೊದಲ್ಲಿ ಸಭೆ ಸೇರಿದ್ದ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಚೀನಾದ ಬೀಜಿಂಗ್‌ನ್ನು ಆಯ್ಕೆ ಮಾಡಿತು.

ಸ್ಪರ್ಧೆಯಲ್ಲಿ ಪ್ರಸ್ತುತ ಪ್ಯಾರಿಸ್, ಕೆನಡಾದ ಟೊರಂಟೋ, ಜಪಾನಿನ ಒಸಾಕೊ ಮತ್ತು ಟರ್ಕಿಯ ಇಸ್ತಾನ್‌ಬುಲ್ ಮತ್ತು ಚೀನಾದ ಬೀಜಿಂಗ್ ನಗರಗಳಿದ್ದವು. 72 ದೇಶಗಳ 105 ಸದಸ್ಯರಲ್ಲಿ 56 ಸದಸ್ಯರ ಬೆಂಬಲ ಪಡೆದ ಬೀಜಿಂಗ್ ಈ ಗೌರವಕ್ಕೆ ಪಾತ್ರವಾಯಿತು.

ಎಂಟು ವರ್ಷಗಳಿಂದ ಕಾಯುತ್ತಿದ್ದ ಆ ಕ್ಷಣಕ್ಕೆ ಚೀನಾದ ಜನತೆ ಹರ್ಷ, ಉಲ್ಲಾಸ, ಸಂಭ್ರಮಗಳಿಂದ ಕುಣಿದು ಕುಪ್ಪಳಿಸಿದರು. ಬಾಣ ಬಿರುಸುಗಳ ಚಿತ್ತಾರಗಳಿಂದ ಆಕಾಶವನ್ನು ಶೃಂಗರಿಸಿದರು. ಸ್ವತಃ ಚೀನಾದ ಅಧ್ಯಕ್ಷರು ಸೇರಿದಂತೆ ಹಲವಾರು ಪ್ರಮುಖರು ಆ ಸಂಭ್ರಮದಲ್ಲಿ ಪಾಲ್ಗೊಂಡರು.

ಕಳೆದ ಹಲವು ವರ್ಷಗಳಿಂದ ಮಾನವ ಹಕ್ಕು ಉಲ್ಲಂಘನೆ, ಧಾರ್ಮಿಕತೆ, ದಮನ, ಟಿಬೆಟ್ಟಿನಲ್ಲಿ ದೌರ್ಜನ್ಯ, ಸಾಮೂಹಿಕ ಹತ್ಯೆ ಇತ್ಯಾದಿ ಕಾರಣಗಳನ್ನೊಡ್ಡಿ ಜಾಗತಿಕ ಮಟ್ಟದಲ್ಲಿ ಚೀನಾಕ್ಕೆ ಮನ್ನಣೆ ಸಿಗದಂತೆ ಸಾಮ್ರಾಜ್ಯಶಾಹಿ ಯತ್ನಿಸುತ್ತಿತ್ತು.

ಅಮೆರಿಕಾದಲ್ಲಿ ದಿನನಿತ್ಯ ಕರಿಯರ ಮೇಲಿನ ದಬ್ಬಾಳಿಕೆ, ಬ್ರಿಟನ್‌ನಲ್ಲಿ ಏಷ್ಯ ಮೂಲದವರ ಮೇಲೆ ಅತ್ಯಾಚಾರ, ಆಸ್ಟ್ರೇಲಿಯಾದಲ್ಲಿ ಮೂಲ ನಿವಾಸಿಗಳ ಹೊರ ದಬ್ಬುವಿಕೆ, ಪ್ಯಾಲೆಸ್ಟೇನಿಯರ ಹಕ್ಕು ನಿರಾಕರಣೆ ಇದರ ಬಗ್ಗೆ ತುಟಿ ಬಿಚ್ಚದ ಸಾಮ್ರಾಜ್ಯಶಾಹಿ ಕೇವಲ ಚೀನಾದತ್ತ ಬೆರಳು ಮಾಡಿ ಕಳೆದಬಾರಿ 2 ಮತಗಳ ಅಂತರದಲ್ಲಿ ಈ ಅವಕಾಶ ತಪ್ಪಿಸಿತು. ಆದರೆ ಅದು ಸೋಲಲೇಬೇಕಾಯಿತು ಮಾತ್ರವಲ್ಲ ಇಡೀ ವಿಶ್ವವೇ ಚೀನಾದ ಪ್ರಗತಿಗೆ ಮನ್ನಣೆ ನೀಡಬೇಕಾಯಿತು. ಮೊದಲ ಸುತ್ತಿನಲ್ಲೇ ಚೀನಾ ಗೆದ್ದು ಬಿಟ್ಟಿದೆ.

ಚೀನಾ ಈ ಕ್ರೀಡಾಕೂಟ ನಡೆಸಿ ವಿಶ್ವಕ್ಕೆ ತನ್ನದೇ ಆದ ಒಂದು ಸಂದೇಶವನ್ನು ನೀಡಬಯಸಿದೆ. ಈ ಕ್ರೀಡಾ ಹಬ್ಬಕ್ಕಾಗಿ ಇಡೀ ಚೀನಾ ಸಂಭ್ರಮಿಸುತ್ತಿದೆ. ಇನ್ನು ಎಂಟು ವರ್ಷಗಳಲ್ಲಿ ಸಾಮ್ರಾಜ್ಯಶಾಹಿ ಎಂತೆಂತಹ ಆಟ ಆಡುವುದೋ?

- ಜಯರಾಮು

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH